ಸಂಪುಟ: 06 ಸಂಚಿಕೆ: 01 ಪುಟಗಳು: 08 ಭಾನುವಾರ 15 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ
6th ANNIVERSARY CELEBRATIONS




## ತಾಪಮಾನ ಹೆಚ್ಚಳ: ರಕ್ಷಣೆಗೆ ಆರೋಗ್ಯ ಇಲಾಖೆ ಸೂಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ತಾಪಮಾನ ಹೆಚ್ಚುತ್ತಿರುವ ಕಾರಣ, ಬಿಸಿಲಿನಿಂದ ಮಕ್ಕಳು, ವೃದ್ಧರು ಹಾಗೂ ಗರ್ಭಿಣಿಯರ ರಕ್ಷಣೆಗೆ ಆದ್ಯತೆ ನೀಡುವಂತೆ ಆರೋಗ್ಯ ಇಲಾಖೆ ಸೂಚಿಸಿದೆ. ಹವಾಮಾನ ಇಲಾಖೆ ಪ್ರಕಾರ ಈ ಬಾರಿ ಬೇಸಿಗೆ ಅವಧಿಯಲ್ಲಿ ಅಧಿಕ ಉಷ್ಣಾಂಶ ವರದಿಯಾಗುವ ಸಾಧ್ಯತೆಯಿದೆ. ಸೂರ್ಯನ ವಿಪರೀತ ಶಾಖದಿಂದ ರಕ್ಷಿಸಿಕೊಳ್ಳಬೇಕಿದ್ದು, ಅಧಿಕ ಬಿಸಿಲಿರುವ ಅವಧಿಯಲ್ಲಿ ಹೊರಗಡೆ ಹೋಗುವುದನ್ನು ತಪ್ಪಿಸಬೇಕಿದೆ. ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಬಿಸಿಲು ಹೆಚ್ಚಿರುತ್ತದೆ. ಬಿಸಿಗಾಳಿಯಿಂದ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿ, 'ಸನ್ ಸ್ಟ್ರೋಕ್' (ಬಿಸಿಲಾಘಾತ) ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ತಾಜಾ ಹಣ್ಣುಗಳ ಸೇವನೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಇಲಾಖೆ ತಿಳಿಸಿದೆ.

## 14 ಎಕರೆ ಸರ್ಕಾರಿ ಜಮೀನು ಒತ್ತುವರಿ ತೆರವು

• ಉದಯವಾಹಿನಿ, ಬೆಂಗಳೂರು

ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ರೂ. 62.52 ಕೋಟಿ ಅಂದಾಜು ಮೌಲ್ಯದ ಒಟ್ಟು 14 ಎಕರೆ 10 ಗುಂಟೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿ ಜಿ.ಜಗದೀಶರ ನೇತೃತ್ವದಲ್ಲಿ ತೆರವುಗೊಳಿಸಲಾಯಿತು. ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಸ್ಮಶಾನ, ಸರ್ಕಾರಿ ಕೆರೆ, ಸರ್ಕಾರಿ ಜಾಗ, ಖರಾಬು ತೋಪು ಹಾಗೂ ಸರ್ಕಾರಿ ಕಟ್ಟೆ ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.

ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ದೊಡ್ಡನೆಕ್ಕುಂದಿ ಗ್ರಾಮದ ಸ.ನಂ 197ರ ಸ್ಮಶಾನ, ಭೋಗನಹಳ್ಳಿ ಗ್ರಾಮದ ಸ.ನಂ 33 ರ ಸ್ಮಶಾನ, ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ತಟಗುಪ್ಪೆ ಗ್ರಾಮದ ಸ.ನಂ 79ರ ಸರ್ಕಾರಿ ಕೆರೆ, ತಾವರೆಕೆರೆ ಹೋಬಳಿಯ ಹುಲುವೇನಹಳ್ಳಿ ಗ್ರಾಮದ ಸ.ನಂ 8/1ಬಿ ಸರ್ಕಾರಿ ಜಾಗ, ಬೇಗೂರು ಹೋಬಳಿಯ ಸಿಂಗಸಂದ್ರ ಗ್ರಾಮದ ಸ.ನಂ 100 ರ ಸರ್ಕಾರಿ ಕೆರೆ ಒತ್ತುವರಿಯನ್ನು ತೆರವುಗೊಳಿಸಲಾಯಿತು. ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಇಟ್ಟಗಲಾಪುರ ಗ್ರಾಮದ ಸ.ನಂ 38 ರ ಸರ್ಕಾರಿ ಕೆರೆ, ಕಾಕೋಳು ಗ್ರಾಮದ ಸ.ನಂ 44 ರ ಸರ್ಕಾರಿ ಕೆರೆ, ಜಾಲ ಹೋಬಳಿಯ ಬಾಗಲೂರು ಗ್ರಾಮದ ಸ.ನಂ 311ರ ಖರಾಬು ತೋಪು, ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ವಡೇರಹಳ್ಳಿ ಗ್ರಾಮದ ಸ.ನಂ 12ರ ಸರ್ಕಾರಿ ಕಟ್ಟೆ ಒತ್ತುವರಿಯನ್ನು ತೆರವುಗೊಳಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

## ಸಫಾರಿ ಸ್ಥಗಿತದ ಎಫೆಕ್ಟ್ ಸರ್ಕಾರಕ್ಕೆ 6 ಕೋಟಿ ನಷ್ಟ!

• ಉದಯವಾಹಿನಿ, ಬೆಂಗಳೂರು

ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಸಫಾರಿ ಸ್ಥಗಿತಗೊಳಿಸಿದ್ದ ಪರಿಣಾಮವಾಗಿ ರಾಜ್ಯ ಸರ್ಕಾರಕ್ಕೆ ಬರೋಬ್ಬರಿ ರೂ. 6 ಕೋಟಿ ನಷ್ಟ ಉಂಟಾಗಿದೆ. ರೈತರು ಹಾಗೂ ಸ್ಥಳೀಯರ ವಿರೋಧದ ಹಿನ್ನೆಲೆಯಲ್ಲಿ ಸಫಾರಿ ಸ್ಥಗಿತಗೊಳಿಸಲಾಗಿತ್ತು. ಆದರೆ ಇದೀಗ ಮತ್ತೆ ಸಫಾರಿ ಆರಂಭಗೊಂಡಿದೆ. ಇದಕ್ಕೆ ರೈತ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಆದರೆ ಬಂಡೀಪುರ ಮತ್ತು ನಾಗರಹೊಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಸಫಾರಿಯಿಂದ ಹುಲಿ, ಚಿರತೆ ಸೇರಿದಂತೆ ಕಾಡು ಪ್ರಾಣಿಗಳು ಕಾಡಿನಂಚಿನ ಗ್ರಾಮಗಳಿಗೆ ಬರುತ್ತಿವೆ. ಹುಲಿ ದಾಳಿಯಿಂದ ಪ್ರಾಣ ಹಾನಿ ಸಂಭವಿಸಿವೆ ಎಂಬ ಆರೋಪ ಸ್ಥಳೀಯರದ್ದು. ಈ ಕಾರಣಕ್ಕಾಗಿ ರೈತ ಸಂಘಟನೆಗಳು ತೀವ್ರ ಹೋರಾಟ ನಡೆಸಿದ್ದವು. ಪರಿಣಾಮ ಸಫಾರಿಯನ್ನು ಕೆಲವು ತಿಂಗಳುಗಳ ಸ್ಥಗಿತಗೊಳಿಸಲಾಗಿತ್ತು. ಅಕ್ಟೋಬರ್ 7, 2025 ರಿಂದ ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಸಫಾರಿ ಸ್ಥಗಿತಗೊಳಿಸಲಾಗಿತ್ತು.

ಇದರಿಂದ ಸ್ಥಳೀಯವಾಗಿ ರೆಸಾರ್ಟ್, ಹೋಂ ಸ್ಟೇ ಹಾಗೂ ವ್ಯಾಪಾರಕ್ಕೆ ದೊಡ್ಡ ಮಟ್ಟದಲ್ಲಿ ಹೊಡೆತ ಬಿದ್ದಿತ್ತು. ಪ್ರವಾಸಿಗರನ್ನು ಅವಲಂಬಿಸಿದ್ದ ವ್ಯಾಪಾರಿಗಳು ಅತಂತ್ರರಾಗಿದ್ದರು. ಸಫಾರಿ ಸ್ಥಗಿತದ ಬಗ್ಗೆ ಪರ- ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಆದರೆ ಇದೀಗ ಹಂತ- ಹಂತವಾಗಿ ಸಫಾರಿಯನ್ನು ಆರಂಭಿಸಲು ಆದೇಶ ನೀಡಲಾಗಿದೆ.

## ಕರ್ನಾಟಕದಲ್ಲಿ ವಾರದೊಳಗೆ ಉಪ ಚುನಾವಣೆ ಘೋಷಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಎರಡು ವಿಧಾನಸಭೆ ಕ್ಷೇತ್ರಗಳಿಗೆ ಒಂದು ವಾರದೊಳಗಾಗಿ ಉಪ ಚುನಾವಣೆ ಘೋಷಣೆ ಆಗುವ ಸಾಧ್ಯತೆ ಇದೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದೆ. ಎಚ್ ವೈ ಮೇಟಿ ಹಾಗೂ ಶಾಮನೂರು ಶಿವಶಂಕರಪ್ಪ ನಿಧನದ ಹಿನ್ನೆಲೆಯಲ್ಲಿ ಈ ಎರಡು ಕ್ಷೇತ್ರಗಳು ತೆರವಾಗಿವೆ. ಈ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಣೆ ಆಗುವ ಸಾಧ್ಯತೆ ಹಿನ್ನೆಲೆಯಲ್ಲಿ ಬಿರುಸಿದ ಸಿದ್ಧತೆ ನಡೆಯುತ್ತಿದೆ.

ಬಾಲಕೋಟೆ ಮತ್ತು ದಾವಣಗೆರೆ ದಕ್ಷಿಣಕ್ಕೆ ಟಿಕೆಟ್ ಫೈಟ್ ಜೋರಾಗಿದೆ. ಟಿಕೆಟ್ ವಿಚಾರವಾಗಿ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಪೈಪೋಟಿ ನಡೆಯುತ್ತಿದೆ. ದಾವಣಗೆರೆ ದಕ್ಷಿಣಕ್ಕೆ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕು ಎಂಬುವುದು ಕಾಂಗ್ರೆಸ್ ಮುಸ್ಲಿಂ ಮುಖಂಡರ ಬೇಡಿಕೆಯಾಗಿದೆ. ಆದರೆ ಇದಕ್ಕೆ ಸಚಿವ ಎಸ್ ಎಸ್ ಮಲ್ಲಿಕಾರ್ಜುನ ಅವರ ವಿರೋಧ ಇದೆ. ಇನ್ನು ಬಿಜೆಪಿಯಲ್ಲೂ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪೈಪೋಟಿ ಇದೆ. ಜಿಎಸ್ ಸಿದ್ದೇಶ್ವರ ಮತ್ತು ಎಂಪಿ ರೇಣುಕಾಚಾರ್ಯ ಬಣಗಳ ನಡುವೆ ಟಿಕೆಟ್‌ಗಾಗಿ ಪೈಪೋಟಿ ಇದೆ. ಈ ಭಿನ್ನಮತದ ಹಿನ್ನೆಲೆಯಲ್ಲಿ ಪ್ರತ್ಯೇಕ ಸಭೆಗಳು ನಡೆದಿವೆ. ಭಿನ್ನಮತ ಶಮನ ಮಾಡುವ ನಿಟ್ಟಿನಲ್ಲಿ ಜಿಲ್ಲೆಗೆ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ಭೇಟಿ ನೀಡಿ ಮಾತುಕತೆ ನಡೆಸಿದ್ದರು. ಉಪಚುನಾವಣೆ ಒಂದು ವಾರದೊಳಗೆ ಘೋಷಣೆಯಾಗಬಹುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

## ಉದಯವಾಹಿನಿ ಪತ್ರಿಕೆಗೆ 6ನೇ ವರ್ಷದ ಸಂಭ್ರಮ



**ಜ್ಞಾನದ ಕಣಜಹೊತ್ತ ಪತ್ರಿಕೆ**

ನಮ್ಮ ಭಾರತ ದೇಶದ ಸಮಗ್ರತೆ, ಸಹಿಷ್ಣುತೆ, ಭ್ರಾತೃತ್ವ ವೈವಿಧ್ಯತೆಗಳಿಗೆ ಧಕ್ಕೆಯಾಗದಂತೆ ಸಂವಿಧಾನದ ನಾಲ್ಕನೇ ಅಂಗದ ಕರ್ತವ್ಯವನ್ನು ಶಿರಸಾ ವಹಿಸಿ ಪಾಲಿಸುತ್ತಿರುವ ಈ ದೇಶದ ಕೆಲವೇ ಕೆಲವು ಬೆರಳೆಣಿಕೆಯ ದಿನ ಪತ್ರಿಕೆಗಳಲ್ಲಿ ಉದಯವಾಹಿನಿ ಪತ್ರಿಕೆಯೂ ಸಹ ಅಗ್ರಸ್ಥಾನಕ್ಕೆ ಬರುತ್ತಿದೆ. ಕನ್ನಡದ ನಿಜವಾದ ದೇಶಪ್ರೇಮಿ ಪತ್ರಿಕೆಯೆಂದರೆ ಅದು ಉದಯವಾಹಿನಿ ಪತ್ರಿಕೆ. ಓದುಗರ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿರುವ ಪತ್ರಿಕೆಯ ಪುಟ ವಿನ್ಯಾಸವು ಕೂಡ ಎಲ್ಲಾ ರಾಜ್ಯ ಪತ್ರಿಕೆಗಳಿಗಿಂತ ವಿಭಿನ್ನವಾಗಿರುವುದು ಹರ್ಷದಾಯಕ ವಿಷಯ. ಈ ಪತ್ರಿಕೆ ನೋಡಿ ಓದುಗರು ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಸಂತೋಷದ ಸಂಗತಿ. ಈ ನೆಲದ ಜನರ ನಿಜವಾದ ಭಾವನೆಗಳನ್ನು ಬಿತ್ತರಿಸುವ ಈ ನೆಲದ ಕಸುವು ಹಾಳಾಗದಂತೆ ಅರೆ ಕ್ಷಣವೂ ಎಚ್ಚರ ತಪ್ಪದೆ, ನಿಷ್ಪಕ್ಷಪಾತ ವರದಿಗಾರಿಕೆ ಮಾಡುತ್ತಿರುವ ಉದಯವಾಹಿನಿ ಪತ್ರಿಕೆಗೆ 6ನೇ ವರ್ಷದ ಸಂಭ್ರಮ. ಇದು ಹೆಮ್ಮೆಯ ವಿಚಾರ.

ಸಂಪಾದಕೀಯ, ಸಮಕಾಲೀನ ಸೇರಿದಂತೆ ಮಹತ್ತರವಾದ ಅಂಕಣಗಳು, ವೆಬ್ ಮೀಡಿಯಾದ ಮೂಲಕ ನಡೆಸುತ್ತಿರುವ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಹಿತ್ಯ ಕಲೆಗಳ ಸಂಬಂಧಿತ ವಿಶ್ಲೇಷಣೆಗಳ, ಚರ್ಚೆಗಳು ಜ್ಞಾನದ ಕಣಜವನ್ನೇ ಹೊತ್ತು ಹೊಸ ಚಿಂತನೆಯ ಸಿಂಚನವನ್ನು ಎಳೆಯರಿಂದ ಹಿರಿಯರವರೆಗೂ ನೀಡುತ್ತಿರುವ ಉದಯವಾಹಿನಿ ಪತ್ರಿಕೆಗೆ 6ನೇ ವರ್ಷದ ಹರೆಯಕ್ಕೆ ಕಾಲಿಡುತ್ತಿರುವ ಈ ಹೊತ್ತಲ್ಲಿ ಮತ್ತಷ್ಟು ಮಾನವೀಯಗೊಳ್ಳುತ್ತ ಮುಂದೆ ಸಾಗಲಿ... ಕನ್ನಡ ನಾಡನ್ನು ಸರ್ವಜನಾಂಗದ ಶಾಂತಿಯ ತೋಟವಾಗಿರಿಸಲು ಅಪಾರ ಕೊಡುಗೆ ನೀಡಲಿ... ಎಂದು ಶುಭ ಹಾರೈಸುತ್ತೇನೆ.

ಸಂಪಾದಕರು
ಟಿ.ಹೊಂಬೇಗೌಡರು
ಉದಯವಾಹಿನಿ , ದಿನಪತ್ರಿಕೆ

**ತುಮಕೂರಿನ ಸುಪ್ರಸಿದ್ಧ ಸಿದ್ಧಗಂಗಾ ಮಠಕ್ಕೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಭೇಟಿ ನೀಡಿದರು. ನಡೆದಾಡುವ ದೇವರು ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಗಳ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದ ಸಚಿವರು, ಬಳಿಕ ಮಠದ ಅಧ್ಯಕ್ಷರಾದ ಶ್ರೀಸಿದ್ಧಲಿಂಗ ಸ್ವಾಮೀಜಿಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಜಿಲ್ಲಾಧಿಕಾರಿ ಶುಭಕಲ್ಯಾಣ್, ಎಸ್.ಪಿ ಅಶೋಕ್ ಕೆ.ವಿ ಸಚಿವರಿಗೆ ಸಾಥ್ ನೀಡಿದರು. ಶ್ರೀಗಳೊಂದಿಗೆ ಮಾತುಕತೆ ನಡೆಸುವ ವೇಳೆ ಸಚಿವರು ತಮ್ಮ ಶೈಕ್ಷಣಿಕ ಸೇವೆಯ ಬಗ್ಗೆ ಪ್ರಸ್ತಾಪಿಸಿದರು. ಮೈಸೂರಿನ ಪ್ರವೇಶ ದ್ವಾರದಲ್ಲಿ 'ಕ್ವೆಸ್ಟ್ ಅಕಾಡೆಮಿ' ಹೆಸರಿನ ಇಂಗ್ಲಿಷ್ ಮೀಡಿಯಂ ಶಾಲೆಯನ್ನು ಸುಮಾರು 40 ರಿಂದ 50 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿರುವುದಾಗಿ ತಿಳಿಸಿದರು. ಮೈಸೂರಿನಲ್ಲಿ ಇಂಗ್ಲಿಷ್ ಮಿಡಿಯಂ ಸ್ಕೂಲ್ ಮಾಡಿದ್ದೀರಾ? ಎಂದು ಪ್ರಶ್ನಿಸಿದ ಸಿದ್ದಲಿಂಗ ಸ್ವಾಮೀಜಿ. ಇದಕ್ಕೆ ಪರಮೇಶ್ವರ್ ಅವರು, ಕಳೆದ ವರ್ಷವೇ ಮಾಡಿದ್ವಿ. ಮೈಸೂರಿಗೆ ಹೋಗುವ ಎಂಟ್ರೆಸ್ ನಲ್ಲಿ ಕ್ವೆಸ್ಟ್ ಅಕಾಡಿಮೆ ಅಂತ ಮಾಡಿದ್ದೇವೆ. 40-50 ಕೋಟಿ ಖರ್ಚು ಮಾಡಿ ಕಟ್ಟಿದ್ದಿವಿ. ನಮ್ದು ಸ್ವಲ್ಪ ಕಾನ್ವೆಂಟ್ ಎಜ್ಯೂಕೇಷನ್ ಇರಲಿಲ್ಲ. ನಮ್ಮವೆಲ್ಲಾ ಹಳ್ಳಿ ಶಾಲೆಗಳು. ಅಲ್ಲಿ ಒಂದೇರಡು ಎಕರೆ ಜಾಗ ಇತ್ತು ನಮ್ಮದು. ಅಂತವುಗಳಿಗೆ ಎರಡು ಎಕರೆ ಸಾಲಲ್ಲ , 10-20 ಎಕರೆ ಇರ್ಬೇಕು. ಮೊದಲಿಗೆ ಹೋಟೆಲ್ ಮ್ಯಾನೇಜ್ಮೆಂಟ್ ಮಾಡೋಣ ಅನ್ಕೊಂಡೆ, ಮೈಸೂರಿನಲ್ಲಿ ನಡೆಯುತ್ತೊ ಇಲ್ವೋ ಅಂತ ಶಾಲೆ ಮಾಡಿದೆವು ಎಂದು ಸಚಿವರು ಶ್ರೀಗಳ ಮುಂದೆ ಹಂಚಿಕೊಂಡರು.**

• ಉದಯವಾಹಿನಿ, ಬೆಂಗಳೂರು

ಪರಮೇಶ್ವರ್, 'ನಮ್ಮ ಕುಟುಂಬ ತಂದೆಯ ಕಾಲದಿಂದಲೂ ಶ್ರೀಮಠಕ್ಕೆ ನಡೆದುಕೊಳ್ಳುತ್ತಿದೆ. ಮಠ ನಮಗೆ ಮನಶಾಂತಿ ಮತ್ತು ಸ್ಫೂರ್ತಿಯ ಸೆಲೆ. ಶ್ರೀಗಳು ಎಂದಿಗೂ ರಾಜಕೀಯ ಮಾರ್ಗದರ್ಶನ ನೀಡುವುದಿಲ್ಲ. ನಾವು ರಾಜಕೀಯ ಪ್ರಸ್ತಾಪ ಮಾಡಿದರೂ ಅವರು ಮೌನವಾಗಿ ನಕ್ಕುಬಿಡುತ್ತಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ಮಠದ 1200 ವಿದ್ಯಾರ್ಥಿಗಳಿಗೆ ಶುಭ ಕೋರಿದ್ದೇನೆ' ಎಂದರು. 'ಒಳಮೀಸಲಾತಿ ವಿಚಾರವಾಗಿ ಮಾರ್ಚ್ 28ರಂದು ಮುಖ್ಯಮಂತ್ರಿಗಳು ವಿಶೇಷ ಸಭೆ ಕರೆದಿದ್ದಾರೆ. ಅಂದು ಈ ಸಮಸ್ಯೆ ಬಗೆಹರಿಯುವ ವಿಶ್ವಾಸವಿದೆ. ಸರ್ಕಾರದ ಆದೇಶ ಹೊರಬಿದ್ದ ತಕ್ಷಣ 50 ಸಾವಿರ ಹುದ್ದೆಗಳ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದೆ. ಇದರಲ್ಲಿ ಪೊಲೀಸ್ ಇಲಾಖೆಯ 8 ಸಾವಿರ ಹುದ್ದೆಗಳೂ ಸೇರಿವೆ ಎಂದು ಅವರು ಸ್ಪಷ್ಟಪಡಿಸಿದರು.

### ಬಫರ್ ಡ್ಯಾಂ ನಿರ್ಮಾಣ

**ಎತ್ತಿನ ಹೊಳೆಯ ಮೂಲ ಯೋಜನೆಯಂತೆ ವಡೇರಹಳ್ಳಿಯಲ್ಲೇ ಡ್ಯಾಂ ನಿರ್ಮಾಣ ಮಾಡಲಾಗುವುದು. ಇದು ವಡೇರಹಳ್ಳಿ, ತುಮಕೂರು ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗಡಿ ಭಾಗವಾಗಿದೆ. ವಡೇರೆಹಳ್ಳಿಯ ಎರಡೂವರೆ ಹಾಗೂ ಚಿಕ್ಕಬಳ್ಳಾಪುರದ ಗಡಿಯ ಎರಡೂವರೆ ಒಟ್ಟು 5 ಸಾವಿರ ಎಕರೆಯಲ್ಲಿ ಬಫರ್ ಡ್ಯಾಂ ನಿರ್ಮಾಣ ಮಾಡಲಾಗುತ್ತದೆ. ಆದರೆ ಹಿಂದಿನ ಬಿಜೆಪಿ ಸರ್ಕಾರ ಮೂಲ ಪ್ಲ್ಯಾನ್ ಬದಲಿಸಿ ಬೈರಗೊಂಡ್ಲುವಿನಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿತ್ತು. ಆದರೆ ನಮ್ಮ ಸರ್ಕಾರ ಮೂಲ ಪ್ಲ್ಯಾನ್ ನಂತೆ ವಡೇರಹಳ್ಳಿಯಲ್ಲಿ ಮಾಡಲು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇವೆ ಎಂದರು.ಇದಕ್ಕೆ ಸ್ಥಳೀಯರ ವಿರೋಧವಿದ್ದರೂ ಅವರನ್ನು ಕೂರಿಸಿ ಮಾತನಾಡಿಸಿ ಸಮಸ್ಯೆ ಬಗೆಹರಿಸುತ್ತೇವೆ. ಬೈರಗೊಂಡ್ಲು ರೈತರು ವಿರೋಧ ವ್ಯಕ್ತಪಡಿಸಿದ್ದರಿಂದ ಈಗ ವಡೇರಹಳ್ಳಿಯಲ್ಲೇ ನಿರ್ಮಾಣ ಮಾಡಲಾಗುತ್ತದೆ. ಒಂದೂವರೆ ಟಿಎಂಸಿ ನೀರನ್ನು ಅಲ್ಲಿ ಶೇಖರಣೆ ಮಾಡಲಾಗುತ್ತದೆ. ಏನಾದರೂ ಪ್ರಯತ್ನ ಮಾಡಿ ಅವರನ್ನು ಮನವೊಲಿಸಿ ಮಾಡುತ್ತೇವೆ. ಅವರಿಗೆ ಪರ್ಯಾಯವಾಗಿ ಏನಾದರೂ ಕಲ್ಪಿಸಿ ಸಮಸ್ಯೆ ಬಗೆಹರಿಸುತ್ತೇವೆ ಎಂದು ಅವರು ತಿಳಿಸಿದರು.**

**ಸಿಲಿಂಡರ್ ಕೊರತೆಯಂತೂ ಇಲ್ಲ, ಕಾಳಸಂತೆಕೋರರಿಗೆ ಎಚ್ಚರಿಕೆ:** ಅಂತರಾಷ್ಟ್ರೀಯ ಬಿಕ್ಕಟ್ಟಿನ ನಡುವೆಯೂ ಗ್ಯಾಸ್ ಪೂರೈಕೆಯಲ್ಲಿ ತೊಂದರೆಯಿಲ್ಲ ಎಂದು ಸಚಿವರು ಭರವಸೆ ನೀಡಿದರು. 'ಹಾರ್ಮೋಸ್ ಸ್ಟ್ರೀಟ್‌ನಿಂದ ಭಾರತದ ಹಡಗುಗಳಿಗೆ ಮುಕ್ತ ಅವಕಾಶವಿರುವುದರಿಂದ ಪೆಟ್ರೋಲ್ ಮತ್ತು ಗ್ಯಾಸ್ ಪೂರೈಕೆ ಸುಗಮವಾಗಿದೆ. ತುಮಕೂರಿನಲ್ಲಿ ಗೃಹ ಬಳಕೆಯ ಸಿಲಿಂಡರ್ ಕೊರತೆ ಇಲ್ಲ. ಒಂದು ವೇಳೆ ಯಾರಾದರೂ ಸಿಲಿಂಡರ್ ದಾಸ್ತಾನು ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

**ಕುಡಿಯುವ ನೀರಿನ ಸಮಸ್ಯೆ, ಹೇಮಾವತಿ ನೀರು:** ಜಿಲ್ಲೆಯಲ್ಲಿ ಸದ್ಯಕ್ಕೆ ಟ್ಯಾಂಕರ್ ಮೂಲಕ ನೀರು ಕೊಡುವ ಪರಿಸ್ಥಿತಿ ಬಂದಿಲ್ಲ. ಆದರೆ ಬುಗುಡನಹಳ್ಳಿ ಕೆರೆ ಡೆಡ್ ಸ್ಟೋರೇಜ್ ತಲುಪಿರುವುದರಿಂದ ಮುನ್ನೆಚ್ಚರಿಕೆ ವಹಿಸಲಾಗಿದೆ. 'ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರ ಬಳಿ 1.5 ಟಿಎಂಸಿ ಹೇಮಾವತಿ ನೀರು ಬಿಡುವಂತೆ ಮನವಿ ಮಾಡಿದ್ದೇವೆ. ಆ ನೀರು ಬಂದರೆ ಮೇ ತಿಂಗಳವರೆಗೆ ಜಿಲ್ಲೆಗೆ ನೀರಿನ ತೊಂದರೆ ಇರುವುದಿಲ್ಲ' ಎಂದು ಪರಮೇಶ್ವರ್ ಮಾಹಿತಿ ನೀಡಿದರು. ತುಮಕೂರು ಜಿಲ್ಲೆಯಲ್ಲಿ ಸದ್ಯಕ್ಕೆ ಗ್ಯಾಸ್ ಸಮಸ್ಯೆ ಇಲ್ಲ. ಗೃಹ ಬಳಕೆಯ ಸಮಸ್ಯೆ ಮೊದಲೇ ಇಲ್ಲ. ಅಲ್ಲೊ.. ಇಲ್ಲೋ.. ವಾಣಿಜ್ಯ ಬಳಕೆ ಸಿಲಿಂಡರ್ ನ ಸಮಸ್ಯೆ ತಲೆದೋರಿದೆ ಎನ್ನುತ್ತಿದ್ದಾರೆ ಎಂದರು.

ಹಾಗೆಯೇ ಸಿದ್ದಗಂಗಾ ಮಠದಲ್ಲೂ ಸದ್ಯಕ್ಕಂತೂ ಸಿಲಿಂಡರ್ ಕೊರತೆ ಉಂಟಾಗಿಲ್ಲ. ಎರಡು-ಮೂರು ಶಿಫ್ಟ್ ಹಾರ್ಮೋಸ್ ಸ್ಟ್ರೀಟ್‌ನಿಂದ ಗ್ಯಾಸ್ ಪಾಸಾಗ್ತಾವೆ.

ನಮ್ಮ ದೇಶಕ್ಕೆ ಯಾವುದೇ ರೀತಿ ರೀತಿಯ ತೊಂದರೆ ಇಲ್ಲದಂತೆ ಗ್ಯಾಸ್ ಪೂರೈಕೆಗೆ ಬಿಟ್ಟಿದ್ದಾರೆ. ಹಾಗಾಗಿ ನಮಗೆ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೇಗ ಬರುತ್ತದೆ. ಯಾವುದೇ ತೊಂದರೆ ಇಲ್ಲ ಎಂದರು.



## ಒಳಮೀಸಲಾತಿ ಗೊಂದಲ

### ಶೀಘ್ರ ಇತ್ಯರ್ಥ

ಒಳಮೀಸಲಾತಿ ಬಗ್ಗೆ ಮಹತ್ವದ ಘೋಷಣೆ!






ಒಳ ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರದಿಂದ ಖಚಿತವಾದ ನಿರ್ಧಾರವಾಗಿಲ್ಲ. ಸರ್ಕಾರ ಏಕೆ ಒಂದೇ ರೀತಿ ಮಾಡುತ್ತಿಲ್ಲ. ನಾವೆಲ್ಲಾ ದಲಿತರು ಪ್ರೀತಿಯಿಂದ ಇದ್ದೆವು. ಈಗ ನಮ ನಮಲ್ಲೇ ಯುದ್ಧ ಶುರುವಾಗಿದೆ. 101 ಜಾತಿಗಳ ಬಗ್ಗೆ ಮಾತನಾಡುತ್ತಾರೆ. ಮೊದಲಿದ್ದಂತೆ ಮೀಸಲಾತಿ ಮುಂದುವರೆಸಿದರೆ ಸಾಕು ಎಂದರು. ನಾವೆಲ್ಲರೂ ಸಮಪ್ರಮಾಣದಲ್ಲಿ ಮೀಸಲಾತಿ ಪಡೆಯುತ್ತಿದ್ದೆವು. ಬಲಗೈ ಸಮುದಾಯದವರು ಅದನ್ನೇ ಹೇಳುತ್ತಿದ್ದಾರೆ. ಆದರೆ, ಎಡಗೈ ಸಮುದಾಯ ವಿರೋಧ ಮಾಡುತ್ತಿದೆ. ಈಗ ಒಳಮೀಸಲಾತಿ ಬೇಕು ಎನ್ನುತ್ತಾರೆ. ಇದರಿಂದ ಬೇರೆಯವರಿಗೆ ತೊಂದರೆಯಾಗುತ್ತಿದೆ. ಗೊಂದಲವೂ ಹೆಚ್ಚಾಗುತ್ತಿದೆ.

-ಲಲಿತಾ ನಾಯಕ್, ಮಾಜಿ ಸಚಿವೆ

### ಕಾಳಸಂತೆಯಲ್ಲಿ ಸಿಲಿಂಡರ್ ಮಾರಿದರೆ ಕಠಿಣ ಕ್ರಮ

ಮಧ್ಯ ಪ್ರಾಂಚ್ಯ ದೇಶಗಳ ಯುದ್ಧದಿಂದಾಗಿ ವಾಣಿಜ್ಯ ಸಿಲಿಂಡರ್‌ಗಳಿಗೆ ಅಲ್ಪ ಪ್ರಮಾಣದಲ್ಲಿ ಸಮಸ್ಯೆ ಉಂಟಾಗಿದೆ. ಆದರೆ ಗೃಹ ಬಳಕೆಯ ಸಿಲಿಂಡರ್‌ಗಳಿಗೆ ಸಮಸ್ಯೆ ತಲೆದೋರಿಲ್ಲ. ವಾಣಿಜ್ಯ ಸಿಲಿಂಡರ್ ಸಮಸ್ಯೆಯಿಂದಾಗಿ ಹೋಟೆಲ್‌ನವರಿಗೆ ಒಂದೆರೆಡು ದಿನ ಸಮಸ್ಯೆ ಆಗಬಹುದು. ಆದರೆ ಇದನ್ನೇ ನೆಪ ಮಾಡಿಕೊಂಡು ಕಾಳಸಂತೆಯಲ್ಲಿ ವಾಣಿಜ್ಯ ಸಿಲಿಂಡರ್ ಮಾರಾಟ ಮಾಡಲು ಮುಂದಾದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

### ಒಳಮೀಸಲಾತಿ ಜಾರಿ ಮಾಡದಿದ್ದರೆ ಹೋರಾಟ

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಂಪುಟದಲ್ಲಿರುವ ಒಳಮೀಸಲು ವಿರೋಧಿ ಸಚಿವರ ಗುಂಪಿನ ಪ್ರಭಾವಕ್ಕೆ ಒಳಗಾಗಿದ್ದಾರೆ. ಅವರಿಗೆ ಬದ್ಧತೆ ಇದ್ದರೆ, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನ್ಯಾ। ನಾಗ ಮೋಹನ್ ದಾಸ್ ವರದಿ ಆಧರಿಸಿ ಒಳ ಮೀಸಲಾತಿ ಜಾರಿ ಮಾಡ ಬೇಕು, ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ಕೈಗೊಳ್ಳಲಾಗುವುದು ಎಂದು ಸಂಸದ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದಾರೆ. ಮೀಸಲಾತಿಯ ಬಗ್ಗೆ ಸ್ಪಷ್ಟತೆ ಇಲ್ಲದೇ 56 ಸಾವಿರ ಹುದ್ದೆ ತುಂಬಿಕೊಳ್ಳಲು ತೀರ್ಮಾನಿಸಿದ್ದಾರೆ. ಈಗಾಗಲೇ ಶೇ. 56 ಮೀಸಲಾತಿ ಶಿಕ್ಷಣ ಕ್ಷೇತ್ರದಲ್ಲಿ ಜಾರಿಯಲ್ಲಿದೆ. ಇವರು ಗಟ್ಟಿಯಾಗಿ ಜಾರಿ ಮಾಡಿದರೆ ಸುಪ್ರೀಂ ಕೋರ್ಟ್ ಬಿಟ್ಟರೆ ಯಾರೂ ಅಡ್ಡಿ ಮಾಡುವುದಿಲ್ಲ ಎಂದರು.

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 90.99 ₹/L | ಬಂಗಾರ: ₹15,966/Gram24ct ₹14,635/Gram22ct | ಬೆಳ್ಳಿ: ₹275.00/Gram

# ಜಿಬಿಎ ಐದು ಪಾಲಿಕೆಗಳನ್ನು 50 ವಿಭಾಗ, 150 ಉಪವಿಭಾಗಗಳಾಗಿ ವಿಂಗಡಣೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿನ ಆಡಳಿತಾತ್ಮಕ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ 50 ವಿಭಾಗ ಹಾಗೂ 150 ಉಪವಿಭಾಗಗಳನ್ನು ರಚಿಸಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸುತ್ತೋಲೆ ಹೊರಡಿಸಿದ್ದಾರೆ. ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024 ಅನ್ವಯ ಮೇ 15, 2025ರಿಂದ ಜಿಬಿಎ ಅಸ್ತಿತ್ವಕ್ಕೆ ಬಂದಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರದ್ದುಗೊಂಡಿದೆ. ಇದರೊಂದಿಗೆ ಬೆಂಗಳೂರು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ನಗರ ಪಾಲಿಕೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ 369 ವಾರ್ಡ್‌ಗಳ ಪುನರ್ವಿಂಗಡಣೆ ಮಾಡಲಾಗಿದೆ. ಈ ವಾರ್ಡ್‌ಗಳ ಆಧಾರದ ಮೇಲೆ ಆಡಳಿತವನ್ನು ಇನ್ನಷ್ಟು ಸುಗಮಗೊಳಿಸಲು ಕಂದಾಯ, ಕಾಮಗಾರಿ, ಆರೋಗ್ಯ ಇಲಾಖೆಗಳ ಕಾರ್ಯನಿರ್ವಹಣೆಗೆ ಒಟ್ಟು 50 ವಿಭಾಗ, 150 ಉಪವಿಭಾಗಗಳನ್ನು ರಚಿಸಲಾಗಿದೆ ಎಂದು ಜಿಬಿಎ ಆಯುಕ್ತರು ತಿಳಿಸಿದರು.

**ನಗರ ಪಾಲಿಕೆವಾರು ವಿಭಾಗಗಳ ವಿವರ ಹೀಗಿದೆ:** ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ 63 ವಾರ್ಡ್‌ಗಳಿಗೆ 7 ವಿಭಾಗ, 24 ಉಪವಿಭಾಗಗಳನ್ನು ರಚಿಸಲಾಗಿದೆ. ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ 50 ವಾರ್ಡ್‌ಗಳಿಗೆ 7 ವಿಭಾಗ, 22 ಉಪವಿಭಾಗಗಳನ್ನು ಮಾಡಲಾಗಿದೆ. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ 112 ವಾರ್ಡ್‌ಗಳಿಗೆ 15 ವಿಭಾಗ, 45 ಉಪವಿಭಾಗಗಳನ್ನು ರಚಿಸಲಾಗಿದೆ. ಉತ್ತರ ನಗರ ಪಾಲಿಕೆಯಲ್ಲಿ 72 ವಾರ್ಡ್‌ಗಳಿಗೆ 11 ವಿಭಾಗ, 30 ಉಪವಿಭಾಗಗಳನ್ನು ಮಾಡಲಾಗಿದೆ. ದಕ್ಷಿಣ ನಗರ ಪಾಲಿಕೆಯಲ್ಲಿ 72 ವಾರ್ಡ್‌ಗಳಿಗೆ 10 ವಿಭಾಗ, 29 ಉಪವಿಭಾಗಗಳನ್ನು ರಚಿಸಲಾಗಿದೆ.ಈ ವ್ಯವಸ್ಥೆಯಿಂದ ನಗರ ಪಾಲಿಕೆಗಳ ಆಡಳಿತಾತ್ಮಕ ಕಾರ್ಯಗಳು ವೇಗವಾಗಿ ನಡೆಯಲಿದ್ದು, ಸಾರ್ವಜನಿಕರಿಗೆ ಸೇವೆ ನೀಡುವ ಪ್ರಕ್ರಿಯೆ ಇನ್ನಷ್ಟು ಸುಗಮವಾಗಲಿದೆ ಎಂದು ಮಹೇಶ್ವರ್ ರಾವ್ ತಿಳಿಸಿದ್ದಾರೆ.

# ಯುವತಿ ಕೊಂದು ನಾಟಕವಾಡಿದ್ದ ಪಾರ್ಟ್‌ನರ್ ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಲಿವಿಂಗ್ ಟು ಗೆದರ್‌ನಲ್ಲಿದ್ದ ಯುವತಿಯನ್ನು ಕೊಲೆ ಮಾಡಿ ಆತಹತ್ಯೆ ಎಂಬಂತೆ ಬಿಂಬಿಸಿ ನಾಟಕವಾಡಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೂಲತಃ ಕೊಡಗು ಜಿಲ್ಲೆ ಪೊನ್ನಂಪೇಟೆ ನಿವಾಸಿ ಅಯ್ಯಪ್ಪ (26) ಆರೋಪಿ.ಮೈಸೂರಿನಲ್ಲಿ ಪ್ರತಿಷ್ಠಿತ ಕಾಲೇಜೊಂದರಲ್ಲಿ ಪದವಿ ವ್ಯಾಸಂಗ ಮಾಡಿರುವ ರಂಜಿತಾ (23) ಳನ್ನು ಅಯ್ಯಪ್ಪ ಪ್ರೀತಿಸುತ್ತಿದ್ದನು. ಈ ಬಗ್ಗೆ ರಂಜಿತಾ ತಾಯಿ ಜೊತೆ ಮಾತನಾಡಿ, ನಾನು ಈಗಾಗಲೇ ಮದುವೆಯಾಗಿದ್ದು, ಪತ್ನಿಗೆ ವಿಚ್ಛೇದನ ಕೊಟ್ಟು ನಿಮ್ಮ ಮಗಳನ್ನು ಮದುವೆಯಾಗುವುದಾಗಿ ಹೇಳಿದ್ದಾನೆ. ನಂತರ ಕೊಡತಿ ಗ್ರಾಮದ ರಾಮದಾಸ್ ಲೇಔಟ್‌ನ ಮನೆಯೊಂದರ 2ನೇ ಮಹಡಿಯ ಬಾಡಿಗೆ ಮನೆಯಲ್ಲಿ ರಂಜಿತಾ ಹಾಗೂ ಅಯ್ಯಪ್ಪ ಲಿವಿಂಗ್ ಟು ಗೆದರ್‌ನಲ್ಲಿದ್ದರು. ನಂತರದ ದಿನಗಳಲ್ಲಿ ಇವರಿಬ್ಬರ ಮಧ್ಯೆ ಜಗಳವಾಗಿದೆ. ಪ್ರತಿನಿತ್ಯ ವಿನಾಕಾರಣ ರಂಜಿತಾಗೆ ಕಿರುಕುಳ ನೀಡಲಾರಂಭಿಸಿದ್ದಾನೆ. ಈತನ ವರ್ತನೆಯಿಂದ ಬೇಸತ್ತು ತನ್ನ ತಾಯಿ ಜೊತೆ ಅಳಲು ತೋಡಿಕೊಂಡಿದ್ದಳು. ಮಾ.12 ರಂದು ಬೆಳಗಿನ ಜಾವ 2.45ರ ಸುಮಾರಿನಲ್ಲಿ ಮತ್ತೆ ಇವರಿಬ್ಬರ ನಡುವೆ ಜಗಳವಾಗಿದೆ. ಆ ವೇಳೆ ಅಯ್ಯಪ್ಪ ವೈಯರ್‌ನಿಂದ ರಂಜಿತಾ ಕುತ್ತಿಗೆಗೆ ಬಿಗಿದು ಕೊಲೆ ಮಾಡಿ ಯಾರಿಗೂ ಅನುಮಾನ ಬಾರದಂತೆ ನೇಣು ಹಾಕಿದ್ದಾನೆ. ನಂತರ ರಂಜಿತಾ ಸಹೋದರಿ ಲಿಖಿತಾಗೆ ಕರೆ ಮಾಡಿ ನಿಮ್ಮ ಅಕ್ಕ ನೇಣು ಹಾಕಿಕೊಂಡಿದ್ದಾಳೆ. ಸ್ಪರ್ಶ ಆಸ್ಪತ್ರೆಗೆ ದಾಖಲಿಸಿದ್ದೇನೆ ಎಂದು ಹೇಳಿದ್ದಾನೆ. ಆಸ್ಪತ್ರೆಯ ವೈದ್ಯರು ಪರೀಕ್ಷಿಸಿ ಮಹಿಳೆ ಮೃತಪಟ್ಟಿದ್ದಾರೆಂದು ತಿಳಿಸಿದ್ದಾರೆ. ಮಗಳ ಸಾವಿನ ಸುದ್ದಿ ತಿಳಿದು ರಂಜಿತಾ ತಾಯಿ ಬಂದು ನೋಡಿ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ತನ್ನ ಮಗಳಿಗೆ ಮಾನಸಿಕ ದೈಹಿಕ ಹಿಂಸೆ ನೀಡಿ ಹಲ್ಲೆ ನಡೆಸಿದ್ದಾನೆ. ಜಾತಿ ನಿಂದನೆ ಮಾಡಿ ಕೊಲೆ ಮಾಡಿ ನೇಣು ಹಾಕಿದ್ದಾನೆಂದು ಅಯ್ಯಪ್ಪ ವಿರುದ್ಧ ದೂರು ನೀಡಿದ್ದಾರೆ. ಈ ಬಗ್ಗೆ ಕೊಲೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅಯ್ಯಪ್ಪನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

# ಆತಂಕ ಬೇಡ ಗ್ಯಾಸ್ ಇದೆ, ಇನ್ನೆರಡು ದಿನಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ

• ಉದಯವಾಹಿನಿ, ಬೆಂಗಳೂರು

ಎಲ್‌ಪಿಜಿ ಹೊತ್ತ ಹಡಗುಗಳು ಇರಾನ್‌ನ ಜಲಸಂಧಿಯಿಂದ ಭಾರತಕ್ಕೆ ಬರುತ್ತಿದ್ದು, ತೈಲ ಬಿಕ್ಕಟ್ಟು ನಿವಾರಣೆಯಾಗುತ್ತಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಉಲ್ಬಣಗೊಂಡಿದ್ದ ಸಿಲಿಂಡರ್ ಸಮಸ್ಯೆ ಸಹಜ ಸ್ಥಿತಿಯತ್ತ ಮರಳುತ್ತಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧ ಸಂಘರ್ಷದಿಂದ ಇಂಧನ ಗ್ಯಾಸ್‌ಕೊರತೆಯಿಂದ ಹೋಟೆಲ್, ಹಾಸ್ಟೆಲ್‌ಗಳು, ಪಿಜಿ, ದೇವಸ್ಥಾನಗಳು,ಗೃಹ ಬಳಕೆಯ ಸಿಲಿಂಡರ್‌ಗಳಿಗೂ ಕೊರತೆ ಉಂಟಾಗಿತ್ತು. ಗ್ಯಾಸ್ ಅಭಾವ ತಲೆದೋರುತ್ತದೆ ಎಂಬ ಹಿನ್ನೆಲೆಯಲ್ಲಿ ಜನ ಮುಗಿಬಿದ್ದು ಬುಕ್ಕಿಂಗ್ ಮಾಡಲು ಶುರುವಿಟ್ಟುಕೊಂಡಿದ್ದರು. ಗ್ಯಾಸ್ ಏಜೆನ್ಸಿಗಳ ಮುಂದೆ ಕ್ಯೂ ನಿಂತು ಗ್ಯಾಸ್ ಪಡೆಯಲು ಮುಂದಾಗಿದ್ದರು. ಇಂದಿರಾ ಕ್ಯಾಂಟೀನ್‌ಗಳಲ್ಲೂ ಕೂಡ ಗ್ಯಾಸ್ ಅಭಾವ ತಲೆದೋರಿತ್ತು. ಆಹಾರ ಸಚಿವ ಮುನಿಯಪ್ಪ ಅವರು ಎಲ್ಲ ಅನಿಲ ಕಂಪನಿಗಳು, ಹೋಟೆಲ್ ಮಾಲೀಕರೊಂದಿಗೆ ತುರ್ತು ಸಭೆ ನಡೆಸಿದ್ದರು. ಅನಿಲ ಕಂಪನಿಗಳ ಅಧಿಕಾರಿಗಳು ಆದ್ಯತೆ ಮೇರೆಗೆ ಗ್ಯಾಸ್ ಸರಬರಾಜು ಮಾಡುವುದಾಗಿ ಭರವಸೆ ನೀಡಿದ್ದರು. ನಿನ್ನೆಯಷ್ಟೇ ಹಾರ್ಮುಜ್ ಜಲಸಂಧಿಯಿಂದ ಇಂಧನ ಹೊತ್ತ ಹಡಗು ಮುಂಬೈ ತಲುಪಿತ್ತು. ಎಲ್‌ಪಿಜಿ ಹೊತ್ತ ಇನ್ನೂ ಎರಡು ಹಡಗುಗಳು ಭಾರತಕ್ಕೆ ಆಗಮಿಸಲಿದ್ದು, ಗ್ಯಾಸ್ ಸಮಸ್ಯೆ ನಿವಾರಣೆಯಾಗಲಿದೆ. ಇನ್ನೆರಡು ದಿನಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಲಿದೆ. ಎಂದಿನಂತೆ ಹೋಟೆಲ್, ಹಾಸ್ಟೆಲ್, ದೇವಾಲಯ, ಮದುವೆ ಮಂಟಪ ಮತ್ತಿತರ ಚಟುವಟಿಕೆಗಳ ಪದಾರ್ಥಗಳ ತಯಾರಿಕೆಗೆ ಗ್ಯಾಸ್ ಸರಬರಾಜು ಆಗುವ ಸಾಧ್ಯತೆ ಇದೆ. ನವದೆಹಲಿಯಲ್ಲಿ ವಿವಿಧ ಸಚಿವಾಲಯಗಳ ನಡುವಿನ ಚರ್ಚೆ ನಂತರ ಹಿರಿಯ ಅಧಿಕಾರಿಗಳೇ ದೇಶದಲ್ಲಿ ತೈಲ ಮತ್ತು ಅನಿಲ ಪೂರೈಕೆ ಬಗ್ಗೆ ಮಹತ್ವದ ಮಾಹಿತಿ ನೀಡಿದ್ದಾರೆ. ತೈಲ ಮತ್ತು ಅನಿಲ ಪೂರೈಕೆ ಸಂಪೂರ್ಣ ಸ್ಥಿರವಾಗಿದ್ದು, ಯಾವುದೇ ಕೊರತೆ ಇಲ್ಲ. 50 ಲಕ್ಷ ದೇಶೀಯ ಎಲ್‌ಪಿಜಿ ಸಿಲಿಂಡರ್‌ಗಳು ಪೂರೈಕೆಯಾಗುತ್ತಿವೆ. ಇಂಧನ ಪೂರೈಕೆ ಸ್ಥಿರವಾಗಿದೆ. ಪೆಟ್ರೋಲ್ ಬಂಕ್‌ಗಳು ಕೂಡ ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

# ಇಂದಿರಾ ಕ್ಯಾಂಟೀನ್‌ಗೆ ಗ್ಯಾಸ್ ಪೂರೈಕೆ

• ಉದಯವಾಹಿನಿ, ಬೆಂಗಳೂರು

ಇಂದಿರಾ ಕ್ಯಾಂಟೀನ್‌ಗಳಿಗೆ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಗ್ಯಾಸ್ ಪೂರೈಸುವ ಭರವಸೆ ನೀಡಿರುವುದರಿಂದ ಸ್ಥಗಿತಗೊಂಡಿರುವ ಕ್ಯಾಂಟೀನ್‌ಗಳು ಪುನರಾರಂಭಗೊಳ್ಳಲಿವೆ. ನಗರದಲ್ಲಿ ವಾಣಿಜ್ಯ ಗ್ಯಾಸ್ ಕೊರತೆಯ ಪರಿಣಾಮವಾಗಿ ಅನೇಕ ಹೋಟೆಲ್‌ಗಳು ಹಾಗೂ ಇಂದಿರಾ ಕ್ಯಾಂಟೀನ್‌ಗಳು ತಾತ್ಕಾಲಿಕವಾಗಿ ಬಂದ್ ಮಾಡಲಾಗಿತ್ತು. ನಗರದ ಇಂದಿರಾ ಕ್ಯಾಂಟೀನ್‌ಗಳಿಗೆ ಗ್ಯಾಸ್ ಪೂರೈಕೆ ಮಾಡಲು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಸಮ್ಮತಿ ನೀಡಿರುವ ಹಿನ್ನೆಲೆಯಲ್ಲಿ ಇನ್ನೆರಡು ದಿನಗಳಲ್ಲಿ ಬಂದ್ ಆಗಿರುವ ಕ್ಯಾಂಟೀನ್‌ಗಳನ್ನು ಮರುಪ್ರಾರಂಭಿಸುವ ಸಾಧ್ಯತೆ ಇದೆ. ನಗರದಲ್ಲಿ ಇಂದಿರಾ ಕ್ಯಾಂಟೀನ್‌ಗಳ ಆಹಾರ ತಯಾರಿಕೆಗೆ ಪ್ರತಿದಿನ ಸುಮಾರು 80 ಗ್ಯಾಸ್ ಸಿಲಿಂಡರ್‌ಗಳ ಅಗತ್ಯವಿದೆ. ಈ ಅಗತ್ಯತೆಯನ್ನು ಪೂರೈಸಲು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಒಪ್ಪಿಕೊಂಡಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದಿದ್ದು, ಅದರಲ್ಲಿ ಅಧಿಕಾರಿಗಳು ಇಂದಿರಾ ಕ್ಯಾಂಟೀನ್‌ಗಳಿಗೆ ಗ್ಯಾಸ್ ಪೂರೈಕೆ ಮಾಡುವ ಬಗ್ಗೆ ಒಪ್ಪಿಗೆ ಸೂಚಿಸಿದ್ದಾರೆ. ಈಗ ಗ್ಯಾಸ್ ಪೂರೈಕೆ ಸಮಸ್ಯೆ ಪರಿಹಾರವಾಗುತ್ತಿರುವ ಹಿನ್ನೆಲೆ, ಶೀಘ್ರದಲ್ಲೇ ನಾಗರಿಕರಿಗೆ ಮತ್ತೆ ಕಡಿಮೆ ದರದಲ್ಲಿ ಆಹಾರ ಲಭ್ಯವಾಗಲಿದೆ ಎಂದು ಜಿಬಿಎ ಮುಖ್ಯ ಅಯುಕ್ತ ಮಹೇಶ್ವರ ರಾವ್ ತಿಳಿಸಿದರು.

## ಗ್ಯಾಸ್, ಪೆಟ್ರೋಲ್ ಕೊರತೆ ಇಲ್ಲದಿದ್ದರೂ ಕಾಂಗ್ರೆಸ್ ನಿಂದ 'ಬಣವಿ ಸುಟ್ಟು ಅರಳು ಮುಕ್ಕುವ' ಕೆಲಸ: ಪ್ರಲ್ಹಾದ್ ಜೋಶಿ ಕಿಡಿ

# ಮೋದಿ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು ಎಂಬ ದುರಾಲೋಚನೆ

• ಉದಯವಾಹಿನಿ, ಬೆಂಗಳೂರು

ಮಧ್ಯಪ್ರಾಚ್ಯದ ಯುದ್ಧ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶದಲ್ಲಿ ಎಲ್ಲೂ ಗ್ಯಾಸ್, ಪೆಟ್ರೋಲಿಯಂ ಉತ್ಪನ್ನಗಳ ಕೊರತೆಯಿಲ್ಲ. ಆದರೆ, ಕಾಂಗ್ರೆಸ್ ಪಕ್ಷ ಬಣವಿ ಸುಟ್ಟು ಅರಳು ಮುಕ್ಕುವ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಕಿಡಿ ಕಾರಿದರು. ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ, ಸಿಎಂ ಸಿದ್ದರಾಮಯ್ಯ ಅವರು ಕೇಂದ್ರದ ವಿರುದ್ಧ ಪ್ರತಿಭಟನೆಗೆ ಇಳಿಯಿರಿ ಎಂದು ಜನರನ್ನು ಎತ್ತಿ ಕಟ್ಟುತ್ತಿರುವುದು ನಿಜಕ್ಕೂ ದೇಶದ ದೌರ್ಭಾಗ್ಯವೇ ಸರಿ ಎಂದು ಪ್ರತಿಕ್ರಿಯಿಸಿದರು. ದೇಶದಲ್ಲಿ ಈ ಹಿಂದೆಲ್ಲಾ ಕ್ರೈಸಿಸ್ ಉಂಟಾದಾಗ ವಿಪಕ್ಷ ಸ್ಥಾನದಲ್ಲಿದ್ದ ಬಿಜೆಪಿ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಂಡಿದೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ವಿಪಕ್ಷ ಕಾಂಗ್ರೆಸ್ ತೀರಾ ತೀರಾ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ ಎಂದು ಖಂಡಿಸಿದರು.

**ಕಾಂಗ್ರೆಸ್ ದುರಾಲೋಚನೆ:** ಯುದ್ಧದ ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಏನಾದರೂ ಮಾಡಿ ಮೋದಿ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು ಎಂಬ ದುರಾಲೋಚನೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರಯತ್ನಿಸುತ್ತಿದೆ. ದೇಶದಲ್ಲಿ ಗ್ಯಾಸ್ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಅಭಾವವಿದೆ ಎಂದು ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಜೋಶಿ ಹರಿ ಹಾಯ್ದರು.



**ಜನರನ್ನು ಕೆರಳಿಸೋ ಯತ್ನ:** ಯುದ್ಧದಿಂದಾಗಿ ಜಗತ್ತೇ ತತ್ತರಿಸುತ್ತಿದೆ. ಸಂಘರ್ಷ ಸನ್ನಿವೇಶದಲ್ಲೂ ಭಾರತದಲ್ಲಿ ಯಾವುದೇ ಅಭಾವ, ತೊಡಕು ಉಂಟಾಗದಂತೆ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಅಂತಾರಾಷ್ಟ್ರೀಯ ಸಂಬಂಧಗಳನ್ನು ಉತ್ತಮಪಡಿಸಿಕೊಂಡು ದೇಶವಾಸಿಗಳ ಹಿತ ಕಾಯಲು ಬದ್ಧವಾಗಿ ಉತ್ತಮ ಆಡಳಿತ ನಡೆಸುತ್ತಿದೆ.ಆದರೆ, ಕಾಂಗ್ರೆಸ್ ಪಾರ್ಟಿ ಮೋದಿ ಸರ್ಕಾರದ ವಿರುದ್ಧ ಜನರ ಭಾವನೆ ಕೆರಳಿಸಲು ಯತ್ನಿಸುತ್ತಿದೆ ಎಂದು ಸಚಿವ ಜೋಶಿ ಕಿಡಿ ಕಾರಿದರು.

**ದೇಶದಲ್ಲೆಲ್ಲೂ ಏನೂ ಕೊರತೆಯಿಲ್ಲ:** ಗ್ಯಾಸ್ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಕೊರತೆ ದೇಶದಲ್ಲಿ ಎಲ್ಲೂ ಇಲ್ಲ. ದೇಶದ 33 ಕೋಟಿ ಕುಟುಂಬಗಳಿಗೆ ಎಲ್‌ಪಿಜಿ ಪೂರೈಕೆಯಾಗುತ್ತಿದೆ. ಮೊದಲಿನಂತೆ ಸಿಲಿಂಡರ್ ಬುಕ್ ಮಾಡಿದ ಎರಡ್ಮೂರು ದಿನದಲ್ಲೇ ಪೂರೈಸುತ್ತಿದ್ದೇವೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಆಗಿರುವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದರು.

- ದೇಶದಲ್ಲಿ ಎಲ್ಲೂ ಗ್ಯಾಸ್, ಪೆಟ್ರೋಲಿಯಂ ಉತ್ಪನ್ನ ಅಭಾವವಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಭರವಸೆ
- 40 ದೇಶಗಳಿಂದ ತರಿಸಿಕೊಳ್ಳುತ್ತಿದೆ; ಆಫ್ರಿಕನ್ ಕಂಟ್ರಿಗಳಿಂದಲೂ ಪೂರೈಸಿಕೊಳ್ಳಲು ಯೋಜನೆ
- ಪರಿಸ್ಥಿತಿ ಲಾಭ ಪಡೆದು ಜನರನ್ನು ಮೋದಿ ಸರ್ಕಾರದ ವಿರುದ್ಧ ಎತ್ತಿಕಟ್ಟಲು ಕಾಂಗ್ರೆಸ್ ಯತ್ನ ಎಂದು ಆರೋಪ
- ಜನಕ್ಕೆ 'ಕೇಂದ್ರದ ವಿರುದ್ಧ ಪ್ರತಿಭಟನೆಗೆ ಇಳಿಯಿರಿ' ಎಂದ ರಾಹುಲ್ ಗಾಂಧಿ, ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸಚಿವ ಗುಡುಗು

**40 ದೇಶಗಳಿಂದ ಪೂರೈಕೆ:** ಭಾರತಕ್ಕೆ ಈ ಮೊದಲು ಕೇವಲ 20 ದೇಶಗಳಿಂದ ಪೆಟ್ರೋಲಿಯಂ ಉತ್ಪನ್ನ ಬರುತ್ತಿತ್ತು. ಆದರೆ, ನಾವಿಂದು ಅದನ್ನು 40 ರಾಷ್ಟಗಳಿಗೆ ಹೆಚ್ಚಿಸಿದ್ದೇವೆ. ಆಸ್ಟ್ರೇಲಿಯಾ, ರಷ್ಯಾ ಸೇರಿದಂತೆ ಆಫ್ರಿಕನ್ ಕಂಟ್ರಿಗಳಿಂದಲೂ ತರಿಸಿಕೊಳ್ಳಲು ಯೋಜಿಸಿದ್ದೇವೆ. ಅಲ್ಲದೆ, ದೇಶದಲ್ಲೇ ಶೇ.20ರಷ್ಟು ಎಲ್‌ಪಿಜಿ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

### ಎಲ್ಲೂ ಎಲ್‌ಪಿಜಿ ಅಭಾವವಿಲ್ಲ

ದೇಶದಲ್ಲಿ ಎಲ್ಲೂ ಎಲ್‌ಪಿಜಿ ಅಭಾವವಿಲ್ಲ. ಜನಸಾಮಾನ್ಯರ ಹಿತದೃಷ್ಟಿಯಿಂದ ಬುಕ್ಕಿಂಗ್ ನಿಯಮಿತಗೊಳಿಸಿ ಕಮರ್ಷಿಯಲ್ ಗ್ಯಾಸ್ ಮೇಲೆ ಕೇಂದ್ರ ನಿಗಾ ವಹಿಸುತ್ತಿದೆ ಅಷ್ಟೇ. ಆದರೆ, ಅಪ್ರಬುದ್ಧ ವಿಪಕ್ಷ ನಾಯಕ ರಾಹುಲ್ ಗಾಂಧಿ, ಸಿಎಂ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಪರಿಸ್ಥಿತಿಯ ಲಾಭ ಪಡೆದು ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

**ಆತ್ಮನಿರ್ಭರ ಭಾರತ ಕೆಡಿಸೋ ಕೆಲಸ:** ಯುಪಿಎ ಕಾಲದಲ್ಲಿ ಕೇವಲ ಶೇ.1.5ರಷ್ಟಿದ್ದ ಎಥೆನಾಲ್ ಬ್ಲೆಂಡಿಂಗ್ ಅನ್ನು ಇದೀಗ ಶೇ.20ಕ್ಕೆ ಹೆಚ್ಚಿಸಿದೆ. ಇದು ಮಾತ್ರವಲ್ಲದೆ ಪೆಟ್ರೋಲ್, ಡೀಸೆಲ್ ಪಂಪಗಳನ್ನು ಸೌರಪಂಪ್ ಗಳನ್ನಾಗಿ ಪರಿವರ್ತಿಸಲಾಗಿದೆ. ದೇಶದಲ್ಲೇ ಕಲ್ಲಿದ್ದಲು ಉತ್ಪಾದನೆ ಸಹ ಹೆಚ್ಚಿದೆ. ಇನ್ನು ರಿನಿವೆಬಲ್ ಇಂಧನ ಉತ್ಪಾದನೆ ಸಹ ಅತಿ ಹೆಚ್ಚಾಗಿದೆ. ಹೀಗೆ ನಮ್ಮ ದೇಶ ಆತ್ಮನಿರ್ಭರ ಭಾರತವಾಗಿದೆ.ಆದರೆ, ಕಾಂಗ್ರೆಸ್ ನಾಯಕರು ಆತ್ಮನಿರ್ಭರ ಭಾರತವನ್ನು ಕೆಡಿಸುವ ಸಂಚು ಹೂಡಿದ್ದಾರೆ ಎಂದು ಪ್ರಲ್ಹಾದ ಜೋಶಿ ಕೈ ವಿರುದ್ಧ ಗುಡುಗಿದರು.

# ಒಂದು ರೂ.ಗೆ ಲೀಟರ್ ಹಾಲು ಆಫರ್
## ಆನ್ಲೈನ್ ಮಾರಾಟಕ್ಕೆ ಕಡಿವಾಣ ಹಾಕಲು ಡಿಕೆಸು ಆಗ್ರಹ

• ಉದಯವಾಹಿನಿ, ಬೆಂಗಳೂರು

**ಕೇಂದ್ರ ವಿಫಲ** ಜಗತ್ತಿನಲ್ಲಿ ಯುದ್ಧದ ಭೀತಿ ಇದೆ. ಯುದ್ಧದಲ್ಲಿ ನಾವಿಲ್ಲದಿರಬಹುದು, ಆದರೆ ನಮ್ಮಮೇಲೂ ಅದರ ಪರಿಣಾಮ ಬೀರುತ್ತಿದೆ. ಕೇಂದ್ರ ಸರ್ಕಾರವು ನೆರೆ ದೇಶಗಳ ಜೊತೆ ಒಳ್ಳೆಯ ವಿಶ್ವಾಸ ಇಟ್ಟುಕೊಂಡಿರಬೇಕು. ದೇಶದಲ್ಲಿ ಉಂಟಾಗಿರುವ ಅಡುಗೆ ಅನಿಲದ ಸಮಸ್ಯೆ ನಿವಾರಿಸಬೇಕು. ಇದರಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಅವರು ಆರೋಪಿಸಿದರು.

ಬಹುರಾಷ್ಟ್ರೀಯ ಕಂಪನಿಯಿಂದ ಒಂದು ರೂ.ಗೆ ಒಂದು ಲೀಟರ್ ಹಾಲು ಕೊಡುವುದಕ್ಕೆ ಸರ್ಕಾರ ಕಡಿವಾಣ ಹಾಕಬೇಕು ಎಂದು ಮಾಜಿ ಸಂಸದ ಹಾಗೂ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಗಂಭೀರ ವಿಚಾರವಾಗಿದ್ದು, ಸರ್ಕಾರ ತಕ್ಷಣ ಗಮನಹರಿಸಿ ಕಡಿವಾಣ ಹಾಕಬೇಕು. ಈ ಸಂಬಂಧ ಪ್ರಧಾನಿಗೆ ಪತ್ರ ಬರೆಯುತ್ತೇನೆ ಎಂದರು. ಪ್ರಚಾರಕ್ಕೆ 2 ಸಾವಿರ ಕೋಟಿ ಖರ್ಚು ಮಾಡಿದ್ದಾರೆ. ಸ್ಪರ್ಧೆಗಾಗಿ ಒಂದು ರೂ.ಗೆ ಒಂದು ಲೀಟರ್ ಹಾಲು ಕೊಡುತ್ತಿದ್ದಾರೆ. ಸಾರ್ವಜನಿಕರ ಷೇರು ಹಣ ತಂದು ಇಲ್ಲಿ ಹಾಕುತ್ತಿದ್ದಾರೆ. ಇದರಿಂದ ರಾಜ್ಯದ ರೈತರಿಗೆ ಹೊಡೆತ ಬೀಳಲಿದೆ. ದೇಶದ ರೈತರ ಮೇಲೂ ಪರಿಣಾಮ ಬೀರಲಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರ್ಕಾರ ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದರು. ಈ ಸಂಬಂಧ ಕಾಂಪಿಟೇಷನ್ ಕಮೀಷನ್ ಇಂಡಿಯಾಗೆ ಪತ್ರ ಬರೆಯುತ್ತೇನೆ ಹಾಗೂ ಇದರ ವಿರುದ್ಧ ಕ್ರಮಕ್ಕೆ ಮನವಿ ಮಾಡುತ್ತೇನೆ. ರೈತರ ಹಿತವನ್ನು ಎಂಎನ್‌ಸಿ ಕಂಪನಿಗಳು ಹಾಳುಮಾಡುತ್ತಿವೆ. ಅವರು ಎಷ್ಟು ದಿನ ಒಂದು ರೂ.ಗೆ ಒಂದು ಲೀಟರ್ ಹಾಲು ಕೊಡುತ್ತಾರೆ? ಅದರ ಬಗ್ಗೆ ಅವರು ಸ್ಪಷ್ಟಪಡಿಸಬೇಕು. ಪ್ರಚಾರಕ್ಕಾಗಿ ರೈತರನ್ನು ಬಲಿಕೊಡುತ್ತಿದ್ದಾರೆ ಎಂದು ಸುರೇಶ್ ಆಕ್ರೋಶ ವ್ಯಕ್ತಪಡಿಸಿದರು. ಪ್ರಚಾರಕ್ಕಿಂತ ರೈತರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು. ಈಗಾಗಲೇ ಹಾಲು ನೀಡುವ ಬಗ್ಗೆ ಜಾಹೀರಾತು ಕೊಡುತ್ತಿದ್ದಾರೆ. 14.5 ಲಕ್ಷ ಲೀಟರ್ ಹಾಲು ಮಾರಾಟವಾಗಿದೆ. ಒಂದು ರೂ.ಗೆ ಒಂದು ಲೀಟರ್ ಹಾಲನ್ನು ಒಂದು ವರ್ಷ ಕೊಡುತ್ತಾರೋ ಅಥವಾ ಎರಡು ವರ್ಷ ಕೊಡುತ್ತಾರೋ ಎಂಬುದನ್ನು ಹೇಳಬೇಕು.



**ಹಾಲು ಪರಿಶೀಲನೆ:** ಹಾಲನ್ನು ಪರಿಶೀಲನೆ ಮಾಡಿ, ಪೌಡರ್ ಹಾಲು ಅಥವಾ ನೇರ ಹಾಲು ಎಂಬುದನ್ನು ನೋಡಬೇಕು. ಇವತ್ತು ಆ ಹಾಲನ್ನು ಸಂಗ್ರಹ ಮಾಡುವಂತೆ ಹೇಳಿದ್ದೇನೆ. ಹಾಲಿನ ಗುಣಮಟ್ಟವನ್ನು ಪರಿಶೀಲಿಸುತ್ತೇವೆ. ನಾವು ರೈತರಿಗೆ ಒಂದು ಲೀಟರ್‌ಗೆ 39 ರೂ. ಕೊಡುತ್ತಿದ್ದೇವೆ. ಒಂದು ರೂ.ಗೆ ಹೇಗೆ ಹಾಲು ಕೊಡಲು ಸಾಧ್ಯ ಎಂದು ಅವರು ಪ್ರಶ್ನಿಸಿದರು. ಇವರಿಂದ ನಮ ಹಾಲು ಉತ್ಪಾದನೆಗೆ ಹೊಡೆತ ಬೀಳಲಿದೆ. ಸುಮಾರು 50 ಸಾವಿರ ಲೀಟರ್ ನಷ್ಟವಾಗುತ್ತಿದ್ದರೂ ನಾವು ರೈತರಿಗೆ ಎಚ್ಚರಿಕೆ ಕೊಡುತ್ತಿಲ್ಲ. ಬದಲಿಗೆ ಈ ರೀತಿ ಹಾಲು ನೀಡುವುದರ ವಿರುದ್ಧ ನೇರ ಹೋರಾಟಕ್ಕೆ ಕರೆ ಕೊಡುತ್ತಿದ್ದೇನೆ ಎಂದರು.

**ಕೇಂದ್ರದ ಮೇಲೆ ಒತ್ತಡ :** ರಾಜ್ಯದ ಹಿತ ಕಾಪಾಡುವುದು ಮುಖ್ಯ ಆ ಕೆಲಸವನ್ನ ಎಲ್ಲಾ ಸಂಸದರು ಮಾಡಬೇಕು. ಎರಡೂ ಪಕ್ಷದವರು ರಾಜ್ಯಕ್ಕೆ ನ್ಯಾಯ ಒದಗಿಸಬೇಕು. ಕರ್ನಾಟಕಕ್ಕೆ ಪದೇ ಪದೇ ಅನ್ಯಾಯ ಆಗುತ್ತಿದೆ. ಇದನ್ನು ಸರಿಪಡಿಸಲು ಯಾರೂ ಪ್ರಯತ್ನಿಸುತ್ತಿಲ್ಲ. ನೀರಾವರಿಗೆ ಸಂಬಂಧಿಸಿದಂತೆ ಮೇಕೆದಾಟು, ಮಹಾದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆಗಳಿವೆ. ಹೀಗಾಗಿ ಎಂಪಿಗಳ ಸಹಕಾರ ಬೇಕು. ನಾನು ಸಂಸದನಾಗಿದ್ದಾಗ ಕೂಡ ಸಂಸದರ ಸಭೆಯನ್ನು ಸರ್ಕಾರ ನಡೆಸಿತ್ತು. ಈಗಲೂ ಸರ್ಕಾರ ಸಂಸದರ ಸಭೆ ಕರೆದಿರುವುದು. ಕೇಂದ್ರ ಸರ್ಕಾರದ ಮೇಲೆ ಸಂಸದರು ಒತ್ತಡ ತರಬೇಕು ಎಂದು ಹೇಳಿದರು.

# ಅನಧಿಕೃತವಾಗಿ ವೃಕ್ಷಗಳ ಕಡಿಯುವವರಿಗೆ ಕಾನೂನು ಪಾಠ : ಅರಣ್ಯ ಅಧಿಕಾರಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಅನಧಿಕೃತವಾಗಿ ವೃಕ್ಷಗಳ ಕಡಿಯುವವರಿಗೆ ಕಾನೂನು ಪಾಠ ಕಲಿಸಲಾಗುತ್ತದೆ ಎಂದು ಸ್ಥಳೀಯ ವಲಯ ಅರಣ್ಯ ಅಧಿಕಾರಿ ಆಶಾ ಎಚ್ಚರಿಕೆ ನೀಡಿದರು.

ಬೆಂ.ಪೂ.ತಾಲ್ಲೂಕು ಆಸ್ಪತ್ರೆ ಅಂಗಳದಲ್ಲಿ ಪರಿಸರ ಮಂಜು ನೇತ್ರತ್ವದಲ್ಲಿ ಮಿಡಿತ ಫೌಂಡೇಶನ್ ಹಮ್ಮಿಕೊಂಡಿದ್ದ ವೃಕ್ಷ ರಕ್ಷಾ ಬಂಧನ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು. ಸಣ್ಣ ನೆಪಗಳನ್ನು ಹೇಳಿ ಮರಗಳನ್ನು ತಿರುವು ಮಾಡುವಂತೆ ಮನೆಗಳನ್ನು ಸಲ್ಲಿಸುತ್ತಿರುವುದು ಸೂಕ್ತವಲ್ಲ ವೃಕ್ಷಗಳ ಮಹತ್ವವನ್ನು ಅರಿತು ಮರಗಳ ಉಳಿಬೇಕಿಗಾಗಿ ಪರಿಸರ ಮಂಜು ಅವರಂತಹ ಮನೋಭಾವವನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಎಂದರು.


ವೃಕ್ಷ ಬಚಾವೋ ಆಂದೋಲನ ಸಮಿತಿ ಮುಖ್ಯಸ್ಥ ಪರಿಸರ ಮಂಜು ಮತನಾಡಿ, ವೃಕ್ಷಗಳ ರಕ್ಷಣೆಗೆಗಾಗಿ ವೃಕ್ಷ ರಕ್ಷ ಬಂಧನ ಕಾರ್ಯಕ್ರಮವನ್ನು ಮಾಡುವ ಮೂಲಕ ಸರ್ಕಾರದ ಗಮನಕ್ಕೆ ಮರಗಳ ಕಡಿಯಬಾರದೆಂದು ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗಿದೆ ಎಂದರು. ಇದೇವೇಳೆ ಪರಿಸರ ಮಂಜು ಅವರ 4ನೇ ಕೃತಿ, ಕೊನೊಕರ್ಪಸ್ ದುಬೈ ಗಿಡ ಎಂಬ ಶೀರ್ಷಿಕೆಯ ಪುಸ್ತಕದ ಮುಖಬಿಡುಗಡೆಗೊಂದಿತ್ತು. ಕಾರ್ಯಕ್ರಮದಲ್ಲಿ 101 ಸಸಿಗಳ ವಿತರಣೆ, ಗಿಡ ನೆಡುವ ಹಾಗೂ ಪರಿಸರ ಮಂಜು ಅವರಿಂದ ಪರಿಸರ ಸೇವಾ ಕಾರ್ಯಗಳನ್ನು ಹಮ್ಮಿಕೊಂಡಿದರು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಎಂ.ಎನ್ ಮಹದೇವಗೌಡ, ಮುಖಂಡರಾದ ಮಾರಪ್ಪ, ಕುರುಡುಸೋಣೆನಹಳ್ಳಿ ಸೂರಿ, ಎಂ.ಆರ್ ವೆಂಕಟೇಶ್, ಗಂಧರ್ವ ರಮೇಶ್, ಬೆನ್ನಿಗೆನಹಳ್ಳಿ ರವಿ, ದೇವರಾಜ್ ಸೂರ್ಯವಂಶಿ, ಮುನಿಮಾರಪ್ಪ, ಜೈಭೀಮ್ ಶ್ರೀನಿವಾಸ್, ಲಕ್ಷ್ಮಣ್, ಕೃಷ್ಣಮೂರ್ತಿ, ಆದೂರು ದೇವರಾಜ್, ಭಾಗ್ಯ, ದೇವಿಲಯ , ಸೌಮ್ಯ ಪವಾರ್, ಸಾಹಿತಿ ಕೃಪಾಕರರೆಡ್ಡಿ ಇದ್ದರು.

# ಒಳಮೀಸಲಾತಿ ಗೊಂದಲ : ಮಾಜಿ ಸಚಿವೆ ಲಲಿತಾ ನಾಯಕ್ ಅಸಮಾಧಾನ

• ಉದಯವಾಹಿನಿ, ಬೆಂಗಳೂರು

ಒಳ ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರದಿಂದ ಖಚಿತವಾದ ನಿರ್ಧಾರವಾಗಿಲ್ಲ ಎಂದು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಅವರು ಅಸಮಾಧಾನ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಏಕೆ ಒಂದೇ ರೀತಿ ಮಾಡುತ್ತಿಲ್ಲ? ನಾವೆಲ್ಲಾ ದಲಿತರು ಪ್ರೀತಿಯಿಂದ ಇದ್ದೆವು. ಈಗ ನಮ್ಮ ನಮ್ಮಲ್ಲೇ ಯುದ್ಧ ಶುರುವಾಗಿದೆ. 101 ಜಾತಿಗಳ ಬಗ್ಗೆ ಮಾತನಾಡುತ್ತಾರೆ. ಮೊದಲಿದ್ದಂತೆ ಮೀಸಲಾತಿ ಮುಂದುವರೆಸಿದರೆ ಸಾಕು ಎಂದರು.



ನಾವೆಲ್ಲರೂ ಸಮಪ್ರಮಾಣದಲ್ಲಿ ಮೀಸಲಾತಿ ಪಡೆಯುತ್ತಿದ್ದೆವು. ಬಲಗೈ ಸಮುದಾಯದವರು ಅದನ್ನೇ ಹೇಳುತ್ತಿದ್ದಾರೆ. ಆದರೆ, ಎಡಗೈ ಸಮುದಾಯ ವಿರೋಧ ಮಾಡುತ್ತಿದೆ. ಈಗ ಒಳಮೀಸಲಾತಿ ಬೇಕು ಎನ್ನುತ್ತಾರೆ. ಇದರಿಂದ ಬೇರೆಯವರಿಗೆ ತೊಂದರೆಯಾಗುತ್ತಿದೆ. ಗೊಂದಲವೂ ಹೆಚ್ಚಾಗುತ್ತಿದೆ. ಅವರವರ ಜನಾಂಗದ ಹಿತವನ್ನು ನೋಡುತ್ತಿದ್ದಾರೆ. ಯಾರೂ ಕೂಡ ತಮ್ಮ ತನವನ್ನ ಬಿಟ್ಟುಕೊಡುತ್ತಿಲ್ಲ ಎಂದು ಅವರು ಹೇಳಿದರು. ಮುಂಚೆ ಜಾತಿ ಹೇಳಲು ನಾಚಿಕೆ ಆಗುತಿತ್ತು. ಈಗ ಜಾತಿಯನ್ನೇ ಮುಂದೆ ಮಾಡುತ್ತಿದ್ದಾರೆ. ಒಳಮೀಸಲಾತಿ ಮಾಡಿದರೂ, ಮಾಡದಿದ್ದರೂ ಇದು ಬಗೆಹರಿಯುವಂತಹದ್ದು ಅಲ್ಲ. ಕೋರ್ಟ್ ಹೇಳಿರುವಂತೆ ನಡೆದುಕೊಳ್ಳುವುದು ಒಳ್ಳೆಯದು. ಒಳಮೀಸಲಾತಿಯೇ ನಮಗೆ ಬೇಡ. ಇದನ್ನು ಮಾಡಿದರೆ ಗೊಂದಲ ಆಗುತ್ತದೆ. ಈಗ ಹೇಗಿದೆ ಅಷ್ಟೇ ಇರಬೇಕು. ಸರ್ಕಾರ ಸುಮ್ಮನೆ ಇರುತ್ತದೆ ಎಂದು ಭಾವಿಸಿದ್ದೇವೆ ಎಂದು ಅವರು ತಿಳಿಸಿದರು.

# 2025ನೇ ಸಾಲಿನ ಅಭಿಮಾನಿ, ಅರಗಿಣಿ ದತ್ತಿ ಪ್ರಶಸ್ತಿ ಪ್ರದಾನ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ಸ್ಥಾಪಿಸಿರುವ ಅಭಿಮಾನಿ ದತ್ತಿ ಪ್ರಶಸ್ತಿಯನ್ನು ವಿಜಯವಾಣಿ ಪತ್ರಿಕೆಯ ಹುಣಸೂರು ವರದಿಗಾರ ಶಿವಕುಮಾರ್ ವಿ.ರಾವ್ ಅವರಿಗೆ, ಅರಗಿಣಿ ದತ್ತಿ ಪ್ರಶಸ್ತಿಯನ್ನು ಹಿರಿಯ ಸಿನಿಮಾ ಪತ್ರಕರ್ತ ಚೇತನ್ ನಾಡಿಗೇರ ಅವರಿಗೆ ಪ್ರದಾನ ಮಾಡಲಾಯಿತು. ಕರ್ನಾಟಕ ಮಾಧ್ಯಮ ಅಕಾಡೆಮಿ ನಿನ್ನೆ ಸಂಜೆ ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಆಯೋಜಿಸಿದ್ದ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ವಿವಿಧ ದತ್ತಿ ಪ್ರಶಸ್ತಿಗಳು, ಸರಿತಾ ರೈ ಅವರಿಗೆ ವಿಶೇಷ ಪ್ರಶಸ್ತಿ ಹಾಗೂ ಸಾಧಕ ಪತ್ರಕರ್ತರಿಗೆ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗಣ್ಯರು ಪ್ರದಾನ ಮಾಡಿದರು.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನದ ನಡುವೆಯೂ ಪತ್ರಿಕೆಗಳು ಇನ್ನೂ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿವೆ. ನಾನು ನಿತ್ಯ ದಿನಪತ್ರಿಕೆಗಳನ್ನು ಓದಿದ ಬಳಿಕವೇ ಇತರ ಕಾರ್ಯಗಳಿಗೆ ಮುಂದಾಗುತ್ತೇನೆ. ನಾನು ಸುದ್ದಿ ವಾಹಿನಿಗಳನ್ನು ನೋಡುವುದು ಕಡಿಮೆ ಎಂದರು. ಈಗ ಊಹಾ ಪತ್ರಿಕೋದ್ಯಮದ ಹಾವಳಿ ಹೆಚ್ಚುತ್ತಿದೆ. ಸತ್ಯ ಬರೆಯುವ ಮತ್ತು ಸಂಶೋಧನೆ ನಡೆಸಿ ಬರೆಯುವ ಪತ್ರಕರ್ತರ ಸಂಖ್ಯೆ ಸುಳ್ಳು ಬರೆಯುವ ಪತ್ರಕರ್ತರ ಸಂಖ್ಯೆಗಿಂತ ಹೆಚ್ಚಾಗಬೇಕು ಎಂದು ಅವರು ಸಲಹೆ ಮಾಡಿದರು.

ನಾವು ಯಾರ ಪರವಾಗಿ ಇದ್ದೇವೆ ಎನ್ನುವ ಸ್ಪಷ್ಟ ಅರಿವು ಮಾಧ್ಯಮದವರಿಗೆ ಇರಬೇಕು. ಸರ್ಕಾರ ಕಟ್ಟ ಕಡೆಯ ಮನುಷ್ಯರ ಪರವಾಗಿ ಇದೆಯೇ ಎನ್ನುವ ಬಗ್ಗೆ ಗಮನ ಹರಿಸಿ, ವೃತ್ತಿಧರ್ಮವನ್ನು ಬಹಳ ಮುಖ್ಯವಾಗಿ ಕಾಪಾಡಿಕೊಳ್ಳಬೇಕು.

ಪತ್ರಕರ್ತರೂ ಆಗಿದ್ದ ಮಹಾತ್ಮಗಾಂಧಿಯವರ ಮಾತಿನಂತೆ ಸರ್ವೋದಯ, ಅಂತ್ಯೋದಯದ ಪರವಾಗಿ ಪತ್ರಕರ್ತರು ಇರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇನ್ನೂ ಅಸಮಾನತೆ ಕಾಣುತ್ತಿದ್ದೇವೆ. ಅಂಬೇಡ್ಕರ್ ಅವರೂ ಪತ್ರಕರ್ತರಾಗಿದ್ದರು. ಅಸಮಾನತೆ ನಿವಾರಣೆಯಾಗದೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎನ್ನುವ ಮಾತನ್ನು ಅಂಬೇಡ್ಕರ್ ಹೇಳಿದ್ದನ್ನು ಮುಖ್ಯಮಂತ್ರಿಗಳು ಉಲ್ಲೇಖಿಸಿದರು. ಒಂದು ಗುಂಪು, ಒಂದು ಸಿದ್ಧಾಂತಕ್ಕೆ ಮಾರು ಹೋಗದೆ ವಾಸ್ತವಾಂಶಕ್ಕೆ ಕನ್ನಡಿ ಹಿಡಿಯಬೇಕು. ಹೊಸ ತಂತ್ರಜ್ಞಾನದ ಜೊತೆಗೆ ಹೊಸ ಸವಾಲುಗಳಿಗೆ ತಮ್ಮನ್ನು ತಾವು ಸಜ್ಜುಗೊಳಿಸಿಕೊಂಡು ಹದಗೊಳ್ಳಬೇಕು ಎಂದರು. ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, ಮಾನವ ಹಕ್ಕುಗಳು, ಜನಪರ ಆಡಳಿತ ಹಾಗೂ ಪ್ರಜಾಪ್ರಭುತ್ವದ ಉಳಿವಿನಲ್ಲಿ ಮಾಧ್ಯಮಗಳ ಪಾತ್ರ ಹೆಚ್ಚಿದೆ. ಡಿಜಿಟಲ್ ಮಾಧ್ಯಮದ ಸವಾಲಿನಲ್ಲಿ ಪತ್ರಿಕೆಗಳನ್ನು ಮುನ್ನಡೆಸಬೇಕಾದ ಕಷ್ಟದ ಪರಿಸ್ಥಿತಿ ಇದೆ ಎಂದು ಹೇಳಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ ಮಾತನಾಡಿ, ಮುಂದಿನ ವರ್ಷ ಪ್ರಶಸ್ತಿಗಳ ಸಂಖ್ಯೆಯನ್ನು 31ರಿಂದ 35ಕ್ಕೆ ಹೆಚ್ಚಿಸಲಾಗುವುದು. ಇನ್ಫೋಸಿಸ್ ಸಹಯೋಗದೊಂದಿಗೆ ಪತ್ರಕರ್ತರಿಗೆ ತರಬೇತಿ ನೀಡಲಾಗುತ್ತಿದೆ. ಮಹಿಳಾ ಪತ್ರಕರ್ತರಿಗೆ ವಿಶೇಷ ತರಬೇತಿ ನೀಡಲಾಗುವುದು ಎಂದರು.

# ಒಡಿಸ್ಸಾ ಕೈ ಶಾಸಕರನ್ನು ಡಿಕೆಶಿ ಸುಪರ್ದಿಗೆ ಕಳುಹಿಸಿದ ಹೈಕಮಾಂಡ್

## ಒಡಿಸ್ಸಾದ ರಾಜ್ಯ ಸಭಾ ಚುನಾವಣೆಯಲ್ಲಿ ಕುದುರೆ ವ್ಯಾಪಾರ ನಡೆಯಬಹುದು ಎನ್ನುವ ಕಾರಣಕ್ಕಾಗಿ, ಕಾಂಗ್ರೆಸ್ ಶಾಸಕರು ಬಿಡದಿಯಲ್ಲಿದ್ದಾರೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಪಾಳಯಕ್ಕೆ ಯಾವುದೇ ಮುನ್ಸೂಚನೆಯಿಲ್ಲದೇ ಒಡಿಸ್ಸಾದ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಆಗಮಿಸಿದ್ದರು. ಅವರಿಗೆಲ್ಲಾ, ಬಿಡದಿಯ ರೆಸಾರ್ಟ್ಸ್ ಒಂದರಲ್ಲಿ ವ್ಯವಸ್ಥೆಯನ್ನು ಕೆಪಿಸಿಸಿ ಅಧ್ಯಕ್ಷರೂ ಆದ ಡಿಕೆ ಶಿವಕುಮಾರ್ ಮಾಡಿದ್ದಾರೆ. ಮಾಗಡಿ ಶಾಸಕ ಬಾಲಕೃಷ್ಣ, ಚನ್ನಪಟ್ಟಣ ಶಾಸಕ ಸಿಪಿ ಯೋಗೇಶ್ವರ್, ಇವರ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ದೂರದ ಒಡಿಸ್ಸಾದಿಂದ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಯಾಕೆ ಬಂದಿದ್ದಾರೆ ಎನ್ನುವ ವಿವರಣೆಯನ್ನು ಅವರನ್ನೆಲ್ಲಾ ಭೇಟಿಯಾದ ನಂತರ ಡಿಕೆ ಶಿವಕುಮಾರ್ ನೀಡಿದ್ದಾರೆ. ಒಡಿಸ್ಸಾದಲ್ಲಿ ರಾಜ್ಯಸಭಾ ಚುನಾವಣೆಯ ಹಿನ್ನಲೆಯಲ್ಲಿ ಅವರಿಲ್ಲಿದ್ದಾರೆ. ಇದೆಕ್ಕೆಲ್ಲಾ ಕಾರಣ, ಬಿಜೆಪಿಯ ಕುದುರೆ ವ್ಯಾಪಾರದ ರಾಜಕಾರಣ ಎಂದು ಹೇಳಿದ್ದಾರೆ. ಮಾರ್ಚ್ ಹದಿನಾರಕ್ಕೆ ರಾಜ್ಯಸಭಾ ಚುನಾವಣೆ ನಡೆಯಲಿದೆ.

**1 ರಾಜ್ಯಸಭೆ ಸ್ಥಾನದ ಕದನ ಕುತೂಹಲ**

**ಬಿಜೆಪಿಯತ್ತ ಡಿಸಿಎಂ ಬೊಟ್ಟು:** ಒಡಿಸ್ಸಾ ಶಾಸಕರು ಬೆಂಗಳೂರಿನಲ್ಲಿ ಇರುವುದಕ್ಕೆ, ಬಿಜೆಪಿಯತ್ತ ಬೆರಳು ತೋರಿದ ಡಿಕೆಶಿ, ನಮ್ಮ ಶಾಸಕರನ್ನು ಸುರಕ್ಷಿತವಾಗಿರಿಸುವುದು ನನ್ನ ಕರ್ತವ್ಯ ಎಂದು ಹೇಳಿದ್ದಾರೆ. ನಾವೆಲ್ಲಾ, ಜಾತ್ಯಾತೀಯ ಪಾರ್ಟಿಗಳೆಲ್ಲಾ ಒಂದಾಗಿದ್ದೇವೆ, ರಾಜ್ಯಸಭಾ ಚುನಾವಣೆಯನ್ನು ನಾವು ಗೆಲ್ಲುತ್ತೇವೆ ಎನ್ನುವ ವಿಶ್ವಾಸದ ಮಾತನ್ನು ಡಿಸಿಎಂ ಆಡಿದ್ದಾರೆ.ರಾಜನ್ ಎಕ್ಕ, ಅಶೋಕ್ ದಾಸ್, ಅಪ್ಪಲ ಕುಮಾರ್ ಸ್ವಾಮಿ, ಮಂಗು ಕಿಲ್ಲೋ, ಪವಿತ್ರ ಸೌಂತಾ, ನೀಲಮಾಧವ್ ಹಿಕ್ಕ, ಪ್ರಫುಲ್ಲ ಪ್ರಧಾನ್ ಮತ್ತು ಸತ್ಯಜಿತ್ ಗೋಮಂಗೋ – ಈ ಶಾಸಕರು ಈಗ ಡಿಸಿಎಂ ಡಿಕೆ ಶಿವಕುಮಾರ್ ಸುಪರ್ದಿಯಲ್ಲಿದ್ದಾರೆ.



ಉದಯವಾಹಿನಿ ಚಿತ್ರ

**ಒಡಿಸ್ಸಾ ಚುನಾವಣೆ:** ಒಡಿಸ್ಸಾದಲ್ಲಿ ಒಟ್ಟು ಹತ್ತು ರಾಜ್ಯಸಭಾ ಸ್ಥಾನಗಳಿವೆ. ಈ ಪೈಕಿ, ನಾಲ್ಕು ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಐದು ಮಂದಿ ಕಣದಲ್ಲಿದ್ದಾರೆ, ಬಿಜೆಪಿ 3, ಬಿಜೆಡಿ 1, ಬಿಜೆಡಿ+ಕಾಂಗ್ರೆಸ್ ಸಂಯುಕ್ತ ಅಭ್ಯರ್ಥಿ 1 ಕಣದಲ್ಲಿದ್ದಾರೆ ಮತ್ತು ನಾಮಪತ್ರವನ್ನೂ ಸಲ್ಲಿಸಿದ್ದಾರೆ. ಬಿಜೆಡಿ ಮತ್ತು ಕಾಂಗ್ರೆಸ್ ಸಂಯುಕ್ತ ಅಭ್ಯರ್ಥಿಯ ಗೆಲುವಿಗಾಗಿ ಕುದುರೆ ವ್ಯಾಪಾರ ನಡೆಯುತ್ತಿದೆ ಎನ್ನುವುದು ಕಾಂಗ್ರೆಸ್ ಆರೋಪ. ಈ ಹಿನ್ನಲೆಯಲ್ಲಿ, ಕಾಂಗ್ರೆಸ್ ಶಾಸಕರನ್ನು ಹಿಡಿದಿಟ್ಟುಕೊಳ್ಳಲು, ಅವರನ್ನು ಕಾಂಗ್ರೆಸ್ ಹೈಕಮಾಂಡ್, ಡಿಕೆ ಶಿವಕುಮಾರ್ ಅವರ ಸುಪರ್ದಿಗೆ ಕಳುಹಿಸಿದೆ. ಅವರನ್ನೆಲ್ಲಾ, ಬಿಡದಿ ಬಳಿಯ ರೆಸಾರ್ಟ್‌ನಲ್ಲಿರಲು ಡಿಕೆಶಿ ವ್ಯವಸ್ಥೆಯನ್ನು ಮಾಡಿದ್ದಾರೆ.

**ಕಾಂಗ್ರೆಸ್ ಶಾಸಕರಿಗೆ ಆಫರ್**
ಬಿಜೆಪಿಯವರು ಆಪರೇಷನ್ ಕಮಲದ ಪಿತಾಮಹರು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಕುದುರೆ ವ್ಯಾಪಾರಕ್ಕೆ ಬಿಜೆಪಿಯವರು ಹೆಸರುವಾಸಿ. ನಾವು ಅದಕ್ಕೆ ಅವಕಾಶವನ್ನು ನೀಡುವುದಿಲ್ಲ ಎಂದು ಅವರು ಹೇಳಿದ್ದಾರೆ.

**ಒಡಿಸ್ಸಾ ವಿಧಾನಸಭೆ:** ದಶಕಗಳಿಂದ ಒಡಿಸ್ಸಾವನ್ನು ಆಳುತ್ತಿದ್ದ ಪಾಟ್ನಾಯಿಕ್ ಕುಟುಂಬದ ಪ್ರಾಬಲ್ಯವನ್ನು ಕಳೆದ ಚುನಾವಣೆಯಲ್ಲಿ ಬಿಜೆಪಿ ಬ್ರೇಕ್ ಮಾಡಿತ್ತು. 147 ಸದಸ್ಯತ್ವ ಬಲದ ಒಡಿಸ್ಸಾದ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿ 78, ಬಿಜೆಡಿ 51, ಕಾಂಗ್ರೆಸ್ 14 ಸ್ಥಾನದಲ್ಲಿ ಗೆಲುವನ್ನು ಸಾಧಿಸಿತ್ತು. ಈಗ ಅಲ್ಲಿ, ರಾಜ್ಯಸಭಾ ಚುನಾವಣೆ ನಡೆಯುತ್ತಿದೆ. ಇದು ಭಾರೀ ಕುತೂಹಲಕ್ಕೆ ಕಾರಣವಾಗಿದೆ. ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜನತಾ ದಳ (ಬಿಜೆಡಿ) ಸಂಯುಕ್ತ ಅಭ್ಯರ್ಥಿಯಾಗಿ, ಡಾ. ದತ್ತೇಶ್ವರ್ ಹೋಟ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ. ಇವರು, ಒಡಿಸ್ಸಾ ಮೆಡಿಕಲ್ ಯೂನಿವರ್ಸಿಟಿ ಮಾಜಿ ನಿರ್ದೇಶಕರು ಮತ್ತು ಖ್ಯಾತ ನ್ಯೂರೋಲಾಜಿಸ್ಟ್ ಆಗಿದ್ದಾರೆ.

> ರಾಜಕೀಯ ಪಕ್ಷಗಳಿಗೆ ಕುದುರೆ ವ್ಯಾಪಾರದ ಭೀತಿ ಇದ್ದೇ ಇರುತ್ತದೆ. ರಾಜಕೀಯ ರಂಗದಲ್ಲಿ ಎಲ್ಲಾ ಪಕ್ಷಗಳು ಎದುರಿಸುವ ವಿಚಾರ ಇದಾಗಿದೆ. ಅವರು ಇಲ್ಲಿಗೆ ಬಂದಿರುವಾಗ ಅವರಿಗೆ ನೆರವು ನೀಡುವುದು ನಮ್ಮ ಕರ್ತವ್ಯ. ನಾನು ಹಾಗೂ ನಮ್ಮ ಶಾಸಕರು ಅವರನ್ನು ಭೇಟಿ ಮಾಡಿದ್ದೇವೆ.
> –ಡಿಕೆ ಶಿವಕುಮಾರ್, ಡಿಸಿಎಂ

**ಬಿಜೆಪಿಯ ರಾಜಕಾರಣ:** ರಾಜ್ಯಸಭಾ ಕ್ಷೇತ್ರವನ್ನು ಗೆಲ್ಲಲು ಬೇಕಿರುವ ಮತಗಳು ಒಟ್ಟು ಮತಗಳು – 30 ಲಭ್ಯವಿರುವ ಮತಗಳು 32ಬಿಜೆಡಿ –18 ಕಾಂಗ್ರೆಸ್ – 14ಸಿಪಿಐ (ಎಂ) – 1 ಮೊದಲ ಬಾರಿ ಗೆದ್ದಿರುವ ಎಂಟು ಮಂದಿ ಕಾಂಗ್ರೆಸ್ ಶಾಸಕರನ್ನು ವಿರೋಧಿಗಳು (ಬಿಜೆಪಿ) ಟಾರ್ಗೆಟ್ ಮಾಡುತ್ತಿದೆ ಎನ್ನುವುದು ಕಾಂಗ್ರೆಸ್ಸಿನ ಆರೋಪ. ಬಿಜೆಪಿಯವರು ಆಪರೇಷನ್ ಕಮಲದ ಪಿತಾಮಹರು, ಕುದುರೆ ವ್ಯಾಪಾರಕ್ಕೆ ಹೆಸರುವಾಸಿ ಎಂದು ಡಿಕೆ ಶಿವಕುಮಾರ್ ಲೇವಡಿ ಮಾಡಿದ್ದಾರೆ.

# ಉಚಿತ ಆರೋಗ್ಯ ತಪಾಸಣೆ ಶಿಬಿರ : ಸಂಸ್ಥೆ ಕಾಳಜಿಗೆ ವ್ಯಾಪಕ ಪ್ರಶಂಸೆ

• ಉದಯವಾಹಿನಿ, ಗುಂಡ್ಲುಪೇಟೆ

ನಾಡಿನಿಂದ ಕಾಡಿನ ಕಡೆಗೆ ನಮ್ಮ ನಡೆ ಘೋಷವಾಕ್ಯದೊಂದಿಗೆ ಮದ್ದೂರು ಧ್ವನಿ ಲಯನ್ಸ್ ಕ್ಲಬ್ ವತಿಯಿಂದ ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದಲ್ಲಿ ವಾಸಿಸುವ ಜೇನುಕುರು, ಬುಡಕಟ್ಟು ಸಮುದಾಯದ ಜನರಿಗೆ ಉಚಿತ ಆರೋಗ್ಯ ತಪಾಸಣೆ, ಕಾನೂನು ಅರಿವು ಕಾರ್ಯಕ್ರಮವನ್ನ ಆಯೋಜನೆ ಮಾಡಲಾಗಿತ್ತು ಇನ್ನು ಸಂಸ್ಥೆ ಅಧ್ಯಕ್ಷೆ ರಜನಿರಾಜ್ ಅವರ ಸೇವಾ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ಬಂಡೀಪುರದ ಹಳೆ ಸಫಾರಿ ಕೇಂದ್ರದ ಬಳಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಸಾಕಷ್ಟು ಮಂದಿ ಆರೋಗ್ಯ ತಪಾಸಣೆ ಮಾಡಿಸಿದರು. ಶಿಬಿರದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ, ಮೂಳೆ ತಪಾಸಣೆ, ಸ್ನಾಯು-ಸಂಧಿ ತಪಾಸಣೆ, ರಕ್ತದೊತ್ತಡ ಪರೀಕ್ಷೆ, ಮಧುಮೇಹ ತಪಾಸಣೆ, ನರ ಮತ್ತು ಹೃದಯ ಸಂಬಂಧಿತ ತಪಾಸಣೆ ಸೇರಿದಂತೆ ವಿವಿಧ ಸೇವೆಗಳನ್ನ



ಉದಯವಾಹಿನಿ ಚಿತ್ರ

ಒದಗಿಸಲಾಯಿತು. ಲಯನ್ಸ್ ಕ್ಲಬ್ ರಾಜಶೇಖರ್ ಮಾತನಾಡಿ ನಮ್ಮ ಸಂಸ್ಥೆಯು ಮೈಸೂರು ಮಂಡ್ಯ ಚಾಮರಾಜನಗರ ಸೇರಿದಂತೆ ಹಲವೆಡೆ 20 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ಭಾಗಗಳಲ್ಲಿ 3 ಸಾವಿರ ಸಿಬ್ಬಂದಿ ಸೇವೆ ಸಲ್ಲಿಸುತ್ತಲಿದ್ದಾರೆ. ಬಹುಮುಖ್ಯವಾಗಿ ಸಮಾಜದ ಮುಖ್ಯ ವಾಹಿನಿಯಿಂದ ದೂರ ಉಳಿದಿರುವ ಹಾಡಿ , ಬುಡಕಟ್ಟು ಜನರ ಆರೋಗ್ಯದ ಕುರಿತು ವಿಶೇಷ ಕಾಳಜಿ ತೋರಿರುವ ಧ್ವನಿ ಲಯನ್ಸ್ ಕ್ಲಬ್ ಸಂಸ್ಥಾಪಕ ಅಧ್ಯಕ್ಷರಾದ ರಜನಿ ರಾಜ್ ಅವರ ಕಾರ್ಯ ಮೆಚ್ಚುವಂತದ್ದಾಗಿದೆ, ಬಂಡೀಪುರ ಅಧಿಕಾರಿಗಳ ಸಹಕಾರದೊಂದಿಗೆ ಇಲಾಖೆಯ ಸಿಬ್ಬಂದಿಗಳಿಗೆ ಹಾಗೂ ಸುತ್ತಲಿನ ಬುಡಕಟ್ಟು ಸಮುದಾಯದ ಮಂದಿಗೆ ಆರೋಗ್ಯದ ಕುರಿತು ಅರಿವು ಮೂಡಿಸುವ ಜತೆಗೆ ಕಾನೂನು ಜಾಗೃತಿಗೆ ವಿಶೇಷ ಆಸಕ್ತಿ ತೋರಿರುವುದು ಶ್ಲಾಘನೀಯ ಎಂದರು.

**ಕಾನೂನು ಜಾಗೃತಿಗೆ ವಿಶೇಷ ಆಸಕ್ತಿ**

ಆರೋಗ್ಯ ವಿಚಾರಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ತಜ್ಞರ ಜೊತೆಗೂಡಿ ಆಯೋಜಿಸಿದ ಕಾರ್ಯಕ್ರಮ ಸಫಲತೆ ಕಂಡಿದೆ ಎಂದು ತಿಳಿಸಿದರು. ಧ್ವನಿ ಲಯನ್ಸ್ ಸಂಸ್ಥಾಪಕ ಅಧ್ಯಕ್ಷೆ ರಜನಿ ರಾಜ್ ಮಾತನಾಡುತ್ತ ಕಾಡಂಚಿನ ಪ್ರದೇಶದ ಜನರ ಆರೋಗ್ಯ ಸುಧಾರಣೆಗೆ ಸಂಸ್ಥೆ ವಿಶೇಷ ಮುತುವರ್ಜಿವಹಿಸಿದೆ, ಆರ್ಥಿಕವಾಗಿ ಸಬಲರಾಗಿರದ ಮಂದಿ ವೈದ್ಯರ ಬಳಿ ತೆರಳಲಾಗದೆ ಸಂಕಷ್ಟಕ್ಕೆ ಸಿಲುಕಿರುವ ಮಾಹಿತಿಯನ್ನರಿತು ತಜ್ಞ ವೈದ್ಯರನ್ನೆ ಜನರ ಬಳಿ ಕರೆತಂದು ತಪಾಸಣೆ ಮಾಡಿಸಲಾಗುತ್ತಿದೆ ಎಂದರು. ನಮ್ಮ ಸಂಸ್ಥೆಯು ಲಯನ್ಸ್ ಕ್ಲಬ್ ಆಫ್ ಮೈಸೂರು ಚಾಮುಂಡಿ ಹಾಗೂ ಲಯನ್ಸ್ ಕ್ಲಬ್ ಆಫ್ ಮೈಸೂರು ಗ್ರೀನ್ ಸಿಟಿ ಸಂಯುಕ್ತಾಶ್ರಯದಲ್ಲಿ ಹಲವೆಡೆ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನ ನಿರಂತರವಾಗಿ ಆಯೋಜನೆ ಮಾಡುತ್ತಿದೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಬಂಡೀಪುರದಲ್ಲಿನ ವನ್ಯ ಜೀವಿಗಳ ರಕ್ಷಣೆ ಹಾಗೂ ಆರೋಗ್ಯದ ಕುರಿತು ವಿಶೇಷ ಕಾರ್ಯಕ್ರಮಗಳನ್ನ ರೂಪಿಸಲು ಉತ್ಸುಕಳಾಗಿದ್ದೇನೆ ಎಂದು ಅಭಿಪ್ರಾಯಪಟ್ಟರು. ಇದೆ ವೇಳೆ ಅರವಳಿಕೆ ತಜ್ಞೆ ಡಾ.ಹರಿಣಿ, ಡಾ.ಮಧು, ಸಂಜೀವಿನಿ ಆಸ್ಪತ್ರೆ ನಿರ್ದೇಶಕ ಡಾ.ಪ್ರಸನ್ನ, ಡಾ.ಲೋಹಿತ್, ಪ್ರವೀಣ್ ಕುಮಾರ್ ಸೇರಿ ವಿವಿಧ ಖಾಯಿಲೆಗಳ ಗುಣಪಡಿಸುವಿಕೆ ಮತ್ತು ಮುಂಜಾಗೃತಾ ಕ್ರಮಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಎಸಿಎಫ್ ನವೀನ್ ಕುಮಾರ್, ಆರ್‌ಎಫ್‌ಓ ಮಲ್ಲೇಶ್, ವಾಸನ್ ಐ ಕೇರ್ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.






## ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಶಿಡ್ಲಘಟ್ಟ

ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಸರ್ಕಾರ ಹಮ್ಮಿಕೊಂಡಿರುವ ಎಚ್.ಪಿ.ವಿ ಲಸಿಕಾ ಅಭಿಯಾನಕ್ಕೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಾಲನೆ ನೀಡಲಾಯಿತು. ಲಸಿಕೆ ಪಡೆಯಲು ಬಂದಿದ್ದ 14-15 ವರ್ಷದ ಫಲಾನುಭವಿ ವಿದ್ಯಾರ್ಥಿನಿಯರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅರಿವು ಮೂಡಿಸಿದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ತಾಲ್ಲೂಕು ಆರೋಗ್ಯ ಅಧಿಕಾರಿ ವೆಂಕಟೇಶ್ ಮೂರ್ತಿ, ಹೆಣ್ಣು ಮಕ್ಕಳ ಭವಿಷ್ಯದ ಆರೋಗ್ಯದ ದೃಷ್ಟಿಯಿಂದ ಈ ಅಭಿಯಾನ ಅತ್ಯಂತ ನಿರ್ಣಾಯಕ. ಗರ್ಭಕಂಠದ ಕ್ಯಾನ್ಸರ್ ಮಹಿಳೆಯರನ್ನು ಕಾಡುತ್ತಿರುವ ದೊಡ್ಡ ಪಿಡುಗು. ಇದನ್ನು ಆರಂಭಿಕ ಹಂತದಲ್ಲಿ ತಡೆಗಟ್ಟಲು 14 ವರ್ಷದ ಹೆಣ್ಣು ಮಕ್ಕಳಿಗೆ (2011ರಲ್ಲಿ ಜನನವಾದ ) ಈ ಲಸಿಕೆ ನೀಡಲಾಗುತ್ತಿದೆ. ಈ ವಯಸ್ಸಿನಲ್ಲಿ ನೀಡುವ ಲಸಿಕೆಯು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿ, ಕ್ಯಾನ್ಸರ್ ಬರದಂತೆ ರಕ್ಷಣೆ ನೀಡುತ್ತದೆ ಎಂದರು.

ಸರ್ಕಾರವು ಉಚಿತವಾಗಿ ನೀಡುವ ಈ ಲಸಿಕೆ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸಬೇಕು. ಯಾವುದೇ ರೀತಿಯ ಅಡ್ಡಪರಿಣಾಮಗಳ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ತಾಲ್ಲೂಕಿನ ಎಲ್ಲಾ ಅರ್ಹ ಹೆಣ್ಣು ಮಕ್ಕಳು ಈ ಲಸಿಕೆಯ ಸದುಪಯೋಗ ಪಡಿಸಿಕೊಳ್ಳಬೇಕು. ಆಸ್ಪತ್ರೆ ಸಿಬ್ಬಂದಿ ಮನೆ-ಮನೆಗೆ ಮತ್ತು ಶಾಲೆಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸುತ್ತಾರೆ ಎಂದು ಮಾಹಿತಿ ನೀಡಿದರು. ತಾಲ್ಲೂಕಿನಲ್ಲಿ 1780 ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಲು ಪಟ್ಟಿ ಸಿದ್ಧಪಡಿಸಲಾಗಿದೆ. ಈಗಾಗಲೇ 980 ಡೋಸ್ ಬಂದಿದೆ. ಪ್ರತಿ ಬುಧವಾರ ಮತ್ತು ಶುಕ್ರವಾರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆ ಹಾಕಲಾಗುವುದು. ಲಸಿಕೆ ಪಡೆಯಲು ಹೆಣ್ಣುಮಕ್ಕಳು ಜನ್ಮದಿನಾಂಕದ ಪುರಾವೆ ತರಬೇಕು ಎಂದು ಹೇಳಿದರು.

# ಆಟೋ ಗ್ಯಾಸ್‌ಗೂ ಹೆಚ್ಚಿದ ಬೇಡಿಕೆ

### ಅನಿಲ ಕೊರತೆ ಭೀತಿ: ಸಿಲಿಂಡರ್ ಖರೀದಿಗೆ ಅಂಗಡಿಗಳ ಮುಂದೆ ಸಾಲುಗಟ್ಟಿರೋ ಗ್ರಾಹಕರು

• ಉದಯವಾಹಿನಿ, ಬಂಗಾರಪೇಟೆ

ಮಧ್ಯಪ್ರಾಚ್ಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧದ ಪರಿಣಾಮ ಅಡುಗೆ ಗ್ಯಾಸ್, ಆಟೋ ಗ್ಯಾಸ್ ಪೂರೈಕೆ ಕಡಿಮೆಯಾಗಿದೆ ಎಂದು ಗ್ರಾಹಕರು ಗ್ಯಾಸ್ ವಿತರಕರ ಕಚೇರಿಗಳ ಎದುರು ಸಾಲುಕಟ್ಟಿ ನಿಂತು ಬುಕಿಂಗ್ ಮಾಡಲು ಮುಂದಾಗುತ್ತಿದ್ದಾರೆ. ಇರಾನ್, ಇಸ್ರೇಲ್ ರಾಷ್ಟ್ರಗಳ ನಡುವೆ ಯುದ್ಧ ನಡೆಯುತ್ತಿರುವ ಪರಿಣಾಮ ಗ್ಯಾಸ್, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆ ಕಡಿಮೆಯಾಗುತ್ತಿದ್ದು, ಮುಂದೆ ಪೂರೈಕೆ ಸ್ಥಗಿತಗೊಂಡು ಬೆಲೆಯೂ ಅಧಿಕವಾಗಲಿದೆ ಎಂಬ ಅಪಪ್ರಚಾರದ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಇದಕ್ಕೆ ತಕ್ಕ ನಿದರ್ಶನ ಎಂಬಂತೆ ಕೆಲವು ಗ್ಯಾಸ್ ಡೀಲರ್‌ಗಳು ಬುಕಿಂಗ್ ಮತ್ತು ಪೂರೈಕೆ ವಿಳಂಬ ಮಾಡುತ್ತಿದ್ದಾರೆ.

ಇದರಿಂದಾಗಿ ಜನ ಆತಂಕಕ್ಕೆ ಒಳಗಾಗಿದ್ದು, ಜೀವನ ನಿರ್ವಹಣೆಗೆ ಬಹಳ ಪ್ರಮುಖವಾಗಿ ಬೇಕಿರುವ ಗ್ಯಾಸ್ ಖರೀದಿಗೆ ಸರತಿ ಸಾಲಿನಲ್ಲಿ ನಿಲ್ಲುವುದು ಸಾಮಾನ್ಯವಾಗಿದೆ. ಈ ಹಿಂದೆ ಫೋನ್‌ಮೂಲಕ ಬುಕ್ ಮಾಡಿ ಖರೀದಿಸುತ್ತಿದ್ದ ಗ್ರಾಹಕರು ಕಳೆದ ಮೂರ್ನಾಲ್ಕು ದಿನಗಳಿಂದ ಪಟ್ಟಣದ ಗ್ಯಾಸ್ ವಿತರಕರ ಅಂಗಡಿಗಳ ಮುಂದೆ ಬೆಳ್ಳಂಬೆಳಗ್ಗೆಯಿಂದಲೇ ನಿಂತು ಬುಕಿಂಗ್ ಮಾಡಿಕೊಳ್ಳುತ್ತಿದ್ದಾರೆ. ಫೋನ್ ಮೂಲಕ ಬುಕ್ ಮಾಡಿದರೆ ಸ್ವಲ್ಪ ತಡವಾದರೂ ಏಜೆನ್ಸಿಯಿಂದಲೇ ಮನೆಗೆ ಸಿಲಿಂಡರ್ ತಲುಪಿಸಲಾಗುತ್ತದೆ ಎಂದು ಹೇಳಿದರೂ ಸಾರ್ವಜನಿಕರು ಏಜೆನ್ಸಿಗಳ ಮುಂದೆ ನಿಲ್ಲುವುದನ್ನೂ ಬಿಡುತ್ತಿಲ್ಲ.

**ಕಮರ್ಷಿಯಲ್ ಗ್ಯಾಸ್ ವಿತರಣೆಯೂ ವಿಳಂಬ:** ಇತ್ತ ಕಮರ್ಷಿಯಲ್ ಗ್ಯಾಸ್ ವಿತರಣೆಯಲ್ಲಿ ವಿಳಂಬವಾಗುತ್ತಿದ್ದು, ಹೋಟೆಲ್ ಮಾಲೀಕರಿಗೆ ತಲೆನೋವು ಹೆಚ್ಚಾಗಿದೆ. ಸಣ್ಣ ಪುಟ್ಟ ಹೋಟೆಲ್ ನವರು ಗೃಹ ಬಳಕೆಯ ಸಿಲಿಂಡರ್‌ಗಳನ್ನು ತಂದು ಆಹಾರ


ಉದಯವಾಹಿನಿ ಚಿತ್ರ

> ಪ್ರತಿಯೊಂದು ಗ್ಯಾಸ್ ಏಜೆನ್ಸಿಗೂ ದಿನಕ್ಕೆ ಕನಿಷ್ಠ ಎರಡು ಲೋಡ್ ಗ್ಯಾಸ್ ಸಿಲಿಂಡರ್‌ಗಳು ಸರಬರಾಜು ಆಗುತ್ತಿದ್ದು, ಎಲ್ಲರೂ ಪಡೆಯುತ್ತಿದ್ದಾರೆ. ಪೆಟ್ರೋಲ್ ಡೀಸೆಲ್‌ನಲ್ಲಿ ಯಾವುದೇ ವ್ಯತಯವಾಗಿಲ್ಲ ಎಂದಿನಂತೆ ಟ್ಯಾಂಕರ್‌ಗಳು ಬರುತ್ತಿದೆ. ವಾಹನ ಸವಾರರು ಸಹ ಯಾವುದೇ ಸಮಸ್ಯೆಯಿಲ್ಲದೆ ಇಂಧನ ಪಡೆಯುತ್ತಿದ್ದಾರೆ.
>
> -ಸತ್ಯನಾರಾಯಣ, ಮುಖ್ಯಾಧಿಕಾರಿ

**ಹೋಟೆಲ್ ಮಾಲೀಕರಿಗೆ ತಲೆನೋವು**

ಪದಾರ್ಥಗಳನ್ನು ತಯಾರಿಸಿ ಗ್ರಾಹಕರ ಹೊಟ್ಟೆ ತುಂಬಿಸುತ್ತಿರುವ ಘಟನೆಗಳು ನಡೆಯುತ್ತಿವೆ. ಕೆಲವು ಕಡೆ ಬೀದಿಬದಿಯ ವ್ಯಾಪಾರಿಗಳು ಗೃಹ ಬಳಕೆಯ ಗ್ಯಾಸ್ ಮೊರೆ ಹೋಗಿರುವ ಪರಿಣಾಮ ಅದರ ಬೇಡಿಕೆಯೂ ಹೆಚ್ಚಿದೆ. ಮುಂದೆ ಯುದ್ಧ ಇನ್ನಷ್ಟು ದಿನಗಳು ಮುಂದುವರಿದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಬಹುದು ಎಂಬ ಊಹಾಪೋಹಗಳು ವ್ಯಾಪಕವಾಗಿ ಕೇಳಿ ಬರುತ್ತಿದ್ದು, ಜನಸಾಮಾನ್ಯರು ದಿಗ್ಭ್ರಾಂತರಾಗಿದ್ದಾರೆ. ಆಟೋಗಳಿಗೆ ಪೂರೈಸುವ ಗ್ಯಾಸ್‌ನಲ್ಲೂ ವ್ಯತ್ಯಯ ಉಂಟಾಗಿದ್ದು, ಆಟೋ ಚಾಲಕರು ಸಮಸ್ಯೆ ಸಿಲುಕಿದ್ದಾರೆ. ಗ್ಯಾಸ್ ಬಂಕ್‌ಗಳ ಮುಂದೆ ನಾಮಫಲಕಗಳನ್ನು ಅಳವಡಿಸಿರುವ ಮಾಲೀಕರು

> ತಾಲ್ಲೂಕಿನಲ್ಲಿ ಯುದ್ಧದಿಂದ ಯಾವುದೇ ಸಮಸ್ಯೆ ಎದುರಾಗಿಲ್ಲ. ಆದರೂ ಸಹ ಜನ ಗಾಬರಿಗೆ ಒಳಗಾಗಿ ಗ್ಯಾಸ್ ಅಂಗಡಿಗಳಿಗೆ ಮುಗಿಬೀಳುತ್ತಿದ್ದಾರೆ. ಜನ ಸಾಮಾನ್ಯರಿಗೆ ಯಾವುದೇ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ನಿಗಾವಹಿಸುತ್ತಿದ್ದು, ಸಾರ್ವಜನಿಕರು ಊಹಾಪೋಹಗಳಿಗೆ ತಲೆಕೆಡಿಸಿಕೊಳ್ಳದೇ ಇರುವುದು ಸೂಕ್ತ.
>
> -ಕೆ.ಎನ್.ಸುಜಾತ, ತಹಶೀಲ್ದಾರ್, ಬಂಗಾರಪೇಟೆ

ಯುದ್ಧದ ಪರಿಣಾಮ ಗ್ಯಾಸ್ ಕೊರತೆ ಉಂಟಾಗಿರುವ ಕಾರಣ ತಾತ್ಕಾಲಿಕವಾಗಿ ಬೆಲೆ ಏರಿಕೆ ಮಾಡಲಾಗಿದೆ. ಯುದ್ಧದ ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಬಂದ ನಂತರ ಬೆಲೆ ಇಳಿಕೆ ಮಾಡಲಾಗುತ್ತದೆ ಎಂದು ನಮೂದಿಸಿದ್ದಾರೆ. ಗ್ಯಾಸ್ ಪೂರೈಕೆ ಇರುವ ಬಂಕ್ ಮುಂದೆ ಗ್ಯಾಸ್ ಪಡೆಯಲು ನೂರಾರು ಆಟೋ ಚಾಲಕರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿಂದೆ ಲೀಟರ್‌ಗೆ 55 ರೂಗಳಿಗೆ ಮಾರಾಟವಾಗುತ್ತಿದ್ದ ಆಟೋ ಗ್ಯಾಸ್ ಅನ್ನು ಬಂಕ್ ಮಾಲೀಕರು 75 ರೂ.ಗೆ ಮಾರಾಟ ಮಾಡುತ್ತಿರುವ ಕಾರಣ ಆಟೋ ಚಾಲಕರ ಕಣ್ಣು ಕೆಂಪಗೆ ಮಾಡಿದೆ.

ಯುದ್ಧದಿಂದ ಯಾವುದೇ ಸಮಸ್ಯೆ ಉಂಟಾಗಿಲ್ಲ ಎಲ್ಲಾ ವಸ್ತುಗಳು ಎಂದಿನಂತೆ ಸಿಗುತ್ತದೆ ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದರೂ ಗ್ರಾಮೀಣ ಭಾಗದ ಜನರು ಅಡುಗೆ ಎಣ್ಣೆ ಸಿಗುತ್ತಿಲ್ಲವಂತೆ, ಗ್ಯಾಸ್ ಬೆಲೆ ಅಧಿಕವಾಗಲಿದೆಯಂತೆ ಮುಂದೆ ಪೆಟ್ರೋಲ್ ಡೀಸೆಲ್‌ಗೂ ಸಮಸ್ಯೆ ಎದುರಾಗುತ್ತದೆ ಎಂಬ ಗಾಬರಿಗೆ ಒಳಗಾಗುತ್ತಿದ್ದಾರೆ. ಪಟ್ಟಣದಲ್ಲಿ ಗ್ಯಾಸ್ ಪೂರೈಕೆ ಸಮಸ್ಯೆ ನೋಡಿದರೆ ಜನರ ಗಾಬರಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

## ಅನ್ನಭಾಗ್ಯ ಅಕ್ಕಿ ಸಾಗಣೆ : ಇಬ್ಬರು ಆರೋಪಿಗಳ ಬಂಧನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಅನ್ನಭಾಗ್ಯ ಅಕ್ಕಿ ಸಾಗಣೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನ ತೆರಕಣಾಂಬಿ ಠಾಣೆ ಪೊಲೀಸರು ಬಂಧಿಸಿರುವ ಘಟನೆ ತಾಲ್ಲೂಕಿನ ಪರಮಾಪುರ ಗ್ರಾಮದ ಬಳಿ ನಡೆದಿದೆ. ಟಿ.ನರಸೀಪುರ ತಾಲ್ಲೂಕಿನ ಹಳೇ ನರಿಪುರ ಗ್ರಾಮದ ಹುಸೇನ್(28), ನಿಸಾರ್ ಅಹಮದ್(52) ಬಂಧಿತ ಆರೋಪಿಗಳು. ಚಾಲಕ ಹುಸೇನ್, ನಿಸಾರ್ ಅಹಮದ್ ಇಬ್ಬರು ಕೆ.ಎ-55, 4047 ಮಹೀಂದ್ರ ಮ್ಯಾಕ್ಸಿಮ್ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಣೆ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ತೆರಕಣಾಂಬಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕ ಮಹೇಶ್ ಕೆ.ಎಂ. ನೇತೃತ್ವದ ತಂಡ ದಾಳಿ ನಡೆಸಿ ಗೂಡ್ಸ್ ವಾಹನದಲ್ಲಿದ್ದ 37 ಮೂಟೆಯಲ್ಲಿರಿಸಿದ್ದ 1,846 ಕೆ.ಜಿ. ಪಡಿತರ ಅಕ್ಕಿಯನ್ನು ವಶಕ್ಕೆ ಪಡೆದು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಾಲು ಉತ್ಪಾದಕರಿಗೆ 11 ಕೋಟಿ ಲಾಭಾಂಶ

• ಉದಯವಾಹಿನಿ, ಚನ್ನಪಟ್ಟಣ


ಬಮೂಲ್ ಲಾಭಾಂಶದಲ್ಲಿ ಪ್ರತಿ ಲೀಟರ್ ಹಾಲಿಗೆ ನೀಡಲಿರುವ 1 ಹೆಚ್ಚುವರಿ ಹಣದಿಂದ ಚನ್ನಪಟ್ಟಣ ತಾಲ್ಲೂಕಿನ ಹಾಲು ಉತ್ಪಾದಕ ರೈತರಿಗೆ ಸುಮಾರು 11.13 ಕೋಟಿ ಹಣ ದೊರೆಯಲಿದೆ ಎಂದು ಬಮೂಲ್ ನಿರ್ದೇಶಕ ಎಸ್.ಲಿಂಗೇಶ್ ಕುಮಾರ್ ತಿಳಿಸಿದರು. ಇಡೀ ಬಮೂಲ್ ವ್ಯಾಪ್ತಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ರೈತರಿಗೆ ಹೆಚ್ಚು ಲಾಭಾಂಶ ಹಣ ದೊರೆಯುತ್ತಿದೆ. ಈ ಹಣವು ಮಾರ್ಚ್ 31ರ ಒಳಗೆ ಹಾಲು ಉತ್ಪಾದಕ ರೈತರ ಖಾತಗೆ ಜಮೆಯಾಗಲಿದೆ ಎಂದು ಪತ್ರಿಕಾಗೋಷ್ಠಿ ತಿಳಿಸಿದರು. ತಾಲ್ಲೂಕಿನಲ್ಲಿ ಪ್ರತಿದಿನ 3.5 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಈ ವರ್ಷದ ಅಂತ್ಯಕ್ಕೆ ತಾಲ್ಲೂಕಿನಿಂದ ಪ್ರತಿದಿನ 5 ಲಕ್ಷ ಲೀಟರ್‌ಹಾಲು ಸಂಗ್ರಹದ ಗುರಿಯನ್ನು ಹೊಂದಿದ್ದೇವೆ. ಇದಕ್ಕಾಗಿ ಬಮೂಲ್‌ಹಲವು ಯೋಜನೆಗಳನ್ನು ಹಾಕಿಕೊಂಡಿದೆ ಎಂದು ತಿಳಿಸಿದರು.

## 100ರೂ. ಕೇಳಿದ್ರೆ 5ರೂ. ಆದ್ರೂ ಕೊಡಬಾರ್ದಾ?: ಶಾಸಕ

• ಉದಯವಾಹಿನಿ, ರಾಮನಗರ

ಪ್ರವಾಹದಿಂದ ನನ್ನ ಕ್ಷೇತ್ರದಲ್ಲಾಗಿರುವ ಹಾನಿಯ ಚಿತ್ರಗಳನ್ನು ಮುಖ್ಯಮಂತ್ರಿಗೆ ತೋರಿಸಿ ಅನುದಾನ ಕೇಳಿದ್ದೆ. 100 ಕೇಳಿದ್ರೆ ಕನಿಷ್ಠ 5 ಆದ್ರೂ ಕೊಡಬಾರದಾ? ಬಜೆಟ್‌ನಲ್ಲಿ ನನ್ನ ಕ್ಷೇತ್ರಕ್ಕೆ ಏನು ಆಗಬೇಕಿತ್ತೋ ಅದು ಆಗಿಲ್ಲ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಬಜೆಟ್ ಕುರಿತು ಮತ್ತೆ ತಮ್ಮ ಅಸಮಾಧಾನ ಹೊರ ಹಾಕಿದರು.

ಬಜೆಟ್ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಕ್ಕಾಗಿ ಪಕ್ಷದಿಂದ ಹೊರ ಹಾಕಬೇಕು ಎಂದು ಸ್ವಪಕ್ಷದವರೇ ಆಕ್ರೋಶ ವ್ಯಕ್ತಪಡಿಸಿರುವುದರ ಕುರಿತು ನಗರದಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನನಗೆ, ಕ್ಷೇತ್ರಕ್ಕೆ ಆಗಿರುವ ನೋವನ್ನು ನಾನು ತೋಡಿಕೊಂಡಿದ್ದೇನೆ. ಯಾರು ಏನಾದರೂ ಹೇಳಿಕೊಳ್ಳಲಿ ಎಂದರು.



ಬೇರಾವುದೇ ವಿಷಯದ ಬಗ್ಗೆ ನಾನು ಮಾತನಾಡಿಲ್ಲ. ನಾನು ಹೇಳಿದ್ದು ಒಳ್ಳೆಯದಾಗಿದ್ದರೆ ಒಪ್ಪಿಕೊಳ್ಳಲಿ. ಕೆಟ್ಟದಾಗಿದ್ದರೆ ತಿರಸ್ಕರಿಸಲಿ ಕ್ಷೇತ್ರದ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಲ ಸಿಎಂ, ಡಿಸಿಎಂಅನ್ನು ಮುಖಾಮುಖಿ ಭೇಟಿಯಾಗಿದ್ದೇನೆ. ಮೂರು ವರ್ಷದ ಹಿಂದೆ ಪ್ರವಾಹದ ಫೋಟೊಗಳ ಸಮೇತ ವಾಸ್ತವ ಸ್ಥಿತಿ ವಿವರಿಸಿದ್ದೇನೆ. ಆದರೂ, ನನ್ನ ಮನವಿಗೆ ಸ್ಪಂದಿಸಿಲ್ಲ ಎಂಬ ನೋವಿದೆ ಎಂದು ಬೇಸರ ವ್ಯಕ್ತಪಡಿಸಿದರು.


ಮೈಕ್ರೋ ಫೈನಾನ್ಸ್ ಇಂದಾಗಿ ಕ್ಷೇತ್ರದಲ್ಲಿ 2,800 ಮನೆಗಳು ಹರಾಜಿಗೆ ಬಂದಿವೆ. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ (ಕೆಎಸ್‌ಎಂಬಿ) ಪುನರುಜ್ಜೀವನಕ್ಕಾಗಿ ಕೇಳಿದ್ದ 100 ಕೋಟಿ ಅನುದಾನ ಸಹ ಕೊಟ್ಟಿಲ್ಲ. ರಸ್ತೆ ಮತ್ತು ಚರಂಡಿ ದುರಸ್ತಿಗೂ ಹಣವಿಲ್ಲ. ನನ್ನ ಕ್ಷೇತ್ರಕ್ಕಾಗಿರುವ ನೋವನ್ನು ಹೇಳಿದ್ದೇನೆಯೇ ಹೊರತು ಬಜೆಟ್ ಬಗೆಯಲ್ಲ ಎಂದು ಸ್ಪಷ್ಟಪಡಿಸಿದರು.

ಬಹಿರಂಗ ಹೇಳಿಕೆ ನೀಡಿದರೆ, ಮುಂದೆ ಟಿಕೆಟ್ ನೀಡುವಾಗ ಹೈಕಮಾಂಡ್ ಅದನ್ನು ಗಮನಿಸುತ್ತದೆ ಎಂಬ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿಕೆ ಕುರಿತ ಪ್ರಶ್ನೆಗೆ, ಅವರು ನಮ್ಮ ನಾಯಕರು. ಏನು ಬೇಕಾದರೂ ಹೇಳಲಿ. 2018ರಲ್ಲಿ ನಾನು ಸೋತಾಗ ಅವರೇ ಟಿಕೆಟ್ ಕೊಟ್ಟಿದ್ದರು. ನೀನು ಗೆಲ್ಲಬೇಕು ಎಂದು ಬೆನ್ನು ತಟ್ಟಿದ್ದರು. ಕೆಲವು ಸಂದರ್ಭದಲ್ಲಿ ಅವರ ಆಶೀರ್ವಾದ ನನಗೆ ಇರುತ್ತದೆ ಎಂದು ಪ್ರತಿಕ್ರಿಯಿಸಿದರು.

## ಜಾತಿ, ಹಸಿವು ಮುಕ್ತ ಸಮಾಜಕ್ಕೆ ದಸಂಸ ಕೊಡುಗೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕಳೆದ 50 ವರ್ಷಗಳಿಂದ ದಲಿತರು, ದಮನಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯುವ ಜೊತೆಗೆ ಜಾತಿಮುಕ್ತ, ಹಸಿವು ಸಮಾಜ ನಿರ್ಮಾಣಕ್ಕಾಗಿ ದಲಿತ ಸಂಘರ್ಷ ಸಮಿತಿಯು ನಿರಂತರವಾಗಿ ಶ್ರಮಿಸುತ್ತಿದೆ ಎಂದು ದಸಂಸ ರಾಜ್ಯ ಮುಖಂಡ ಕೆ.ಸಿ. ರಾಜಕಾಂತ್ ತಿಳಿಸಿದರು. ಚಿಕ್ಕಬಳ್ಳಾಪುರ ತಾಲ್ಲೂಕಿನ ಕಸಬಾ ಹೋಬಳಿ ಶೇಟ್ ದಿನ್ನೆ ಬಳಿ ದಸಂಸ ವತಿಯಿಂದ ಏರ್ಪಡಿಸಿದ್ದ ಹೋಬಳಿ ಮಟ್ಟದ ನೂತನ ಪದಾಧಿಕಾರಿಗಳ ಆಯ್ಕೆ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಎನ್.ಎ. ವೆಂಕಟೇಶ್ ಮಾತನಾಡಿ, ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳು ಎದುರಿಸುತ್ತಿರುವ ಸವಾಲುಗಳ ವಿರುದ್ಧ ದಸಂಸ ನಿರಂತರ ಹೋರಾಟ ಮಾಡುತ್ತಿದೆ


ಉದಯವಾಹಿನಿ ಚಿತ್ರ

ಎಂದರು. ಸಭೆಯಲ್ಲಿ ಹೋಬಳಿ ಮಟ್ಟದ ನೂತನ ಪದಾಧಿಕಾರಿಗಳಿಗೆ ಸಂವಿಧಾನ ಬೋಧಿಸಲಾಯಿತು.

**ನೂತನ ಪದಾಧಿಕಾರಿಗಳು:** ಹೋಬಳಿ ಮಟ್ಟದ ಸಂಚಾಲಕ ಆಗಿ ವಿ.ವೆಂಕಟೇಶ್ ದಿನ್ನೆಹೊಸಹಳ್ಳಿ, ಲಕ್ಷ್ಮಣ ವನಗಿರಿಯಪ್ಪನಹಳ್ಳಿ, ಸಂಘಟನಾ ಸಂಚಾಲಕರಾಗಿ ಮುನಿಕೃಷ್ಣಪ್ಪ ಪಟ್ರೇನ ಹಳ್ಳಿ, ಸಿಂಹಾದ್ರಿ, ನರಸಿಂಹಪ್ಪ ಚಲಕಾಯಲಪರ್ತಿ, ಲಕ್ಷ್ಮೀನಾರಾಯಣ ತಿಪ್ಪೇನಹಳ್ಳಿ, ಸಹ ಸಂಘಟನಾ ಸಂಚಾಲಕರಾಗಿ ನಾರಾಯಣಸ್ವಾಮಿ ವನಗಿರಿಯಪ್ಪನಹಳ್ಳಿ, ಖಜಾಂಚಿಯಾಗಿ ಶ್ರೀನಿವಾಸ್ ಮುಷ್ಟೂರು ಆಯ್ಕೆಯಾಗಿದ್ದಾರೆ.

## ಮನರೇಗಾ ಉಳಿವಿಗಾಗಿ ಬಲಿಷ್ಠ ಚಳವಳಿ

• ಉದಯವಾಹಿನಿ, ಗುಡಿಬಂಡೆ

ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಗುಡಿಬಂಡೆ ತಾಲ್ಲೂಕಿನ 2ನೇ ಸಮ್ಮೇಳನ ಸೋಮೇನಹಳ್ಳಿಯಲ್ಲಿ ನಡೆಯಿತು. ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ರಾಜ್ಯ ಉಪಾಧ್ಯಕ್ಷ ಎಂ.ಪಿ. ಮುನಿವೆಂಕಟಪ್ಪ ಮಾತನಾಡಿ, ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕಾರ್ಮಿಕರ ಜೀವನ ತುಂಬಾ ಕಷ್ಟಕರವಾಗಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕಾರ್ಮಿಕರ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿದೆ ಎಂದರು.

ಮನರೇಗಾ ಯೋಜನೆಯು ಗ್ರಾಮೀಣ ಬಡವರಿಗೆ ಆಸರೆ ಆಗಿತ್ತು. ಇದು ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಉದ್ಯೋಗ ಕಲ್ಪಿಸುವ ಯೋಜನೆಯಾಗಿತ್ತು. ಆದರೆ, ಜಿ-ರಾಮ್ ಜಿ ಯೋಜನೆಯಿಂದ ಗ್ರಾಮೀಣ ಜನರ ಬದುಕಿನ ಮೇಲೆ ಪರಿಣಾಮ ಬೀರಲಿದೆ ಎಂದರು.

## ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಿ

• ಉದಯವಾಹಿನಿ, ಮಳವಳ್ಳಿ

ಶಿಕ್ಷಣವು ಕೇವಲ ಸಾಕ್ಷರತೆ ಅಲ್ಲ, ಅದು ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವ ಸಾಧನವಾಗಿದ್ದು, ಅಭಿವೃದ್ಧಿ ಗುರಿ ತಲುಪಲು ಸಹಕಾರಿಯಾಗಿದೆ ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು. ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಈಚೆಗೆ ನಡೆದ ಯೂರೋ ಕಿಡ್ಸ್ ಶಾಲೆಯ ವಾರ್ಷಿಕೋತ್ಸವದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಮಕ್ಕಳಿಗೆ ಶಿಕ್ಷಣ ಸಿಕ್ಕಾಗ ಸ್ವಾಭಾವಿಕವಾಗಿಯೇ ಸಮಾನತೆ ಮೂಡುತ್ತದೆ. ಮಕ್ಕಳು ತಮ್ಮ ಜೀವನದಲ್ಲಿ ಶಿಕ್ಷಣ ಸಿಗುವುದನ್ನು ಪುಣ್ಯದ ಕೆಲಸ ಎಂದು ತಿಳಿದು ಶಿಕ್ಷಕರು ಹಾಗೂ ಗುರುಹಿರಿಯರನ್ನು ಬಾಲ್ಯದಿಂದಲೇ ಗೌರವಿಸುವುದನ್ನು ರೂಢಿಸಿಕೊಳ್ಳಬೇಕು. ಪ್ರಾಥಮಿಕ ವ್ಯವಸ್ಥೆಯಲ್ಲಿಯೇ ಶಿಕ್ಷಣದ ಜೊತೆಗೆ ಸಂಸ್ಕಾರ ಮುಖ್ಯವಾಗಿದೆ ಎಂದರು.

# ಖಾತೆ ಮಾಡಿಕೊಡಲು 35 ಸಾವಿರ ಲಂಚ ಡಿಸಿಗೆ ದೂರು

• ಉದಯವಾಹಿನಿ, ಶಿರಾ

ತಾಲ್ಲೂಕಿನ ಮಾದೇನಹಳ್ಳಿ ಬಗರ್ ಹುಕುಂ ಯೋಜನೆಯಲ್ಲಿ ಮಂಜೂರಾದ 34 ಗುಂಟೆ ಜಮೀನಿಗೆ ಖಾತೆ ಮಾಡಿಕೊಡಲು 35 ಸಾವಿರ ಲಂಚ ಕೇಳುತ್ತಿದ್ದಾರೆ ಎಂದು ಆರೋಪಿಸಿ ರೈತರೊಬ್ಬರು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರಿಗೆ ದೂರು ನೀಡಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾಧಿಕಾರಿ ಜನ ಸಂಪರ್ಕ ಸಭೆಯಲ್ಲಿ ಕಂದಾಯ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಜಿಲ್ಲಾಧಿಕಾರಿ ಗಮನಕ್ಕೆ ತರಲಾಯಿತು. ಹತ್ತಿ ಮತ್ತು ಹಣ್ಣು ಬೆಳೆಗಳ ಬೀಜೋತ್ಪಾದನೆ ಬಗ್ಗೆ ರೈತರ ಜೊತೆ ಕರಾರು ಮಾಡಿಕೊಳ್ಳದೆ ರೈತರನ್ನು ವಂಚಿಸಲಾಗುತ್ತಿದೆ ಎಂದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ನಾದೂರು ಕೆಂಚಪ್ಪ ದೂರು ನೀಡಿದರು.

**ಅವ್ಯವಸ್ಥೆಯ ಆಗರ:** ಜನಸಂಪರ್ಕ ಸಭೆಗೆ ಸಮಸ್ಯೆಗಳನ್ನು ಹೊತ್ತು


ಉದಯವಾಹಿನಿ ಚಿತ್ರ

ಬಂದ ಜನರಿಗೆ ಕುಳಿತುಕೊಳ್ಳಲು ಜಾಗ ಸಹ ಇರಲಿಲ್ಲ. ನೂರುಜನರು ಕುಳಿತುಕೊಳ್ಳಬಹುದಾದ ಜಾಗದಲ್ಲಿ ಕಾರ್ಯಕ್ರಮ ನಡೆಸಿದ ಕಾರಣ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕುಳಿತುಕೊಳ್ಳಲು ಜಾಗವಿಲ್ಲದೆ ಸಭಾಂಗಣದ ಹೊರಗಡೆ ನಿಂತಿದ್ದು ಅವರ ಇಲಾಖೆಯ ಸಮಸ್ಯೆ ಬಂದಾಗ ಅಧಿಕಾರಿಗಳು ವೇದಿಕೆ ಬಳಿ ಬರುವುದಕ್ಕೆ ಹೆಚ್ಚಿನ ಸಮಯವಾಗುತ್ತಿತ್ತು. ಕನಿಷ್ಟ ಕುಡಿಯುವ ನೀರಿನ್ನು ಸಹ ಒದಗಿಲು ತಾಲ್ಲೂಕು ಆಡಳಿತ ವಿಫಲವಾಗಿತ್ತು. ಜಿಲ್ಲಾಧಿಕಾರಿ ಬರುವವರೆಗೂ ಅರ್ಜಿ ಸ್ವೀಕರಿಸದ ಅಧಿಕಾರಿಗಳು ಜಿಲ್ಲಾಧಿಕಾರಿಗಳು ಬಂದ ನಂತರ ಅರ್ಜಿ ಸ್ವೀಕರಿಸಿದರು. ಅರ್ಜಿ ಸಲ್ಲಿಸಲು ಜನರು ಸರದಿ ಸಾಲಿನಲ್ಲಿ ನಿಂತಿದ್ದರು.

ಒಟ್ಟು 279 ಅರ್ಜಿಗಳು ಸಲ್ಲಿಕೆಯಾಗಿದ್ದು ಅದರಲ್ಲಿ ಜಮೀನು ಖಾತೆ, ಪೌತಿ ಖಾತೆ, ಬಗರ್ ಹುಕುಂ ಸಾಗುವಳಿ ಖಾತೆ, ಜಮೀನಿಗೆ ರಸ್ತೆ ಬಿಡಿಸಿಕೊಡುವುದು ಸೇರಿದಂತೆ ಕಂದಾಯ ಇಲಾಖೆಗೆ ಸಂಬಂಧಿಸಿದ ಅರ್ಜಿಗಳು ಹೆಚ್ಚು ಬಂದಿದ್ದು ನೋಡಿದರೆ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡಿತು. ಜನಸಂಪರ್ಕ ಸಭೆಗೆ ಶಾಸಕ ಟಿ.ಬಿ.ಜಯಚಂದ್ರ ಬರುವವರೆಗೂ ಜಿಲ್ಲಾಧಿಕಾರಿಗಳ ಜನಸಂಪರ್ಕ ಸಭೆಯಾಗಿದ್ದು ಶಾಸಕರ ಬಂದ ನಂತರ ಶಾಸಕರ ಜನಸಂಪರ್ಕ ಸಭೆಯಾಗಿ ಮಾರ್ಪಾಡಾಯಿತು. ಜನರು ತಮ್ಮ ಅಹವಾಲುಗಳನ್ನು ಶಾಸಕರಿಗೆ ಸಲ್ಲಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬಹುತೇಕ ಕೈಗಾರಿಕೆಗಳು ಕೆಲಸಕ್ಕೆ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದ ಟಾಟಾ (ವಿಸ್ಟ್ರಾನ್) ಕಂಪನಿಯಲ್ಲಿ ಕಾರ್ಮಿಕರು ನಡೆಸಿದ ಗಲಾಟೆ ದೇಶಾದ್ಯಂತ ಸುದ್ದಿಯಾಗಿತ್ತು. ಇದರಿಂದ ಬೆಚ್ಚಿದ ಕಂಪನಿಗಳು ಕೆಲಸಕ್ಕೆ ತೆಗೆದುಕೊಳ್ಳುವಾಗ ಹೆಣ್ಣು ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

# ಕೈಗಾರಿಕೆಗಳಲ್ಲಿ ಹೊರಗಿನವರಿಗೆ ಹೆಚ್ಚಿನ ಆದ್ಯತೆ

### ಅನುಮಾನ ಮೂಡಿಸಿದ ಸರಕಾರದ ಅಂಕಿ-ಅಂಶಗಳು, ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವ ಖಾಸಗಿ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಆದ್ಯತೆಯಿಲ್ಲ

• ಉದಯವಾಹಿನಿ, ಕೋಲಾರ

ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವ ಖಾಸಗಿ ಕೈಗಾರಿಕೆಗಳು ಹಾಗೂ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆಯಿಲ್ಲ ಎಂಬ ದೂರುಗಳ ನಡುವೆಯೇ, ಜಿಲ್ಲೆಯಲ್ಲಿನ ಕೈಗಾರಿಕೆಗಳಲ್ಲಿ ಶೇ. 70 ರಷ್ಟು ಉದ್ಯೋಗಗಳು ಕನ್ನಡಿಗರಿಗೆ ನೀಡಲಾಗಿದೆ ಎಂಬ ಸರಕಾರದ ಅಂಕಿ-ಅಂಶಗಳು ಅನುಮಾನ ಮೂಡುವಂತೆ ಮಾಡಿದೆ. ರಾಜ್ಯ ಸರಕಾರದ ಕೈಗಾರಿಕಾ ಸ್ನೇಹಿ ಕಾನೂನುಗಳಿಂದ ರಾಜ್ಯದ ನಾನಾ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿ ನಿರ್ಮಾಣವಾಗುತ್ತಿರುವ ಕೈಗಾರಿಕೆಗಳಲ್ಲಿ ಸ್ಥಳೀಯರಿಗಿಂತಲೂ ಹೊರ ರಾಜ್ಯದವರಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು ಕನ್ನಡಿಗರ ಆಕ್ರೋಶಕ್ಕೆ ಕಾರಣ ಆಗಿದೆ. ಕೈಗಾರಿಕೆಗಳಲ್ಲಿ ತೊಂದರೆ ಆದ ಸಂದರ್ಭದಲ್ಲಿ ಸ್ಥಳೀಯರು ಸಂಘಟಿತರಾಗಿ ಪ್ರತಿಭಟನೆ ಮಾಡುತ್ತಾರೆ.

**ಹೊರ ರಾಜ್ಯದವರಿಗೆ ಮಣೆ ಯಾಕೆ?**

- ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಾರೆ
- ಕಾರ್ಮಿಕ ಕಾನೂನುಗಳ ಮಾಹಿತಿಯಿಲ್ಲ
- ಉದ್ಯೋಗ ಕಳೆದುಕೊಳ್ಳುತ್ತೇಂಬ ಭಯವಿರುತ್ತದೆ
- ಹೊರಗಿನವರಿಗೆ ಸ್ಥಳೀಯರ ಬೆಂಬಲ ಸಿಗುವುದಿಲ್ಲ

ಸ್ಥಳೀಯ ಜನಪ್ರತಿನಿಧಿಗಳಿಂದ ಒತ್ತಡ ಹೇರುತ್ತಾರೆ ಭಯದಿಂದ ಕೈಗಾರಿಕೆಗಳು ಹೊರರಾಜ್ಯಗಳ ಕಾರ್ಮಿಕರಿಗೆ ಮಣೆ ಹಾಕುತ್ತಿದ್ದು, ಉದ್ಯೋಗಕ್ಕಾಗಿ ಅರ್ಜಿ ಹಾಕಿದರೂ ಸ್ಥಳೀಯರೆಂಬ ಕಾರಣದಿಂದ ಉದ್ಯೋಗ ವಂಚಿತರಾಗುಗತ್ತಿದ್ದಾರೆಂಬ ದೂರುಗಳು ಸಾಮಾನ್ಯವಾಗಿವೆ.

**11 ತಿಂಗಳ ಗುತ್ತಿಗೆ ಪದ್ಧತಿ!:** ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಬೇಕಾಗುತ್ತದೆಂಬ ಉದ್ದೇಶದಿಂದ ಕೆಲವೊಂದು ಕಂಪನಿಗಳು 11


ಉದಯವಾಹಿನಿ ಚಿತ್ರ

ತಿಂಗಳ ಗುತ್ತಿಗೆ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಅದರಂತೆ 11 ತಿಂಗಳು ಕೆಲಸ ಮುಗಿದ ಬಳಿಕ ಒಂದು ತಿಂಗಳ ಬಿಡುಗಡೆ ಕೊಟ್ಟು ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಇದರಿಂದ ಕಾರ್ಮಿಕರಿಗೆ ಸಿಗಬೇಕಾದ ಕೆಲವೊಂದು ಸೌಲಭ್ಯ

**ಅಂಕಿ-ಅಂಶಗಳು**

- ನರಸಾಪುರ, ವೇಮಗಲ್‌ನಲ್ಲಿರುವ ಬೃಹತ್, ಮಧ್ಯಮ ಕೈಗಾರಿಕೆಗಳು - 48
- ಸೃಷ್ಟಿಯಾಗಿರುವ ಒಟ್ಟು ಉದ್ಯೋಗಗಳು - 43,542
- ಕೈಗಾರಿಕೆಗಳಿಗೆ ಕೆಲಸ ಕನ್ನಡಿಗರ ಸಂಖ್ಯೆ - 30,802

> ಜಿಲ್ಲೆಯಲ್ಲಿರುವ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಗಳನ್ನು ಒದಗಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಗಿದೆ. 11 ತಿಂಗಳ ಗುತ್ತಿಗೆ ಬದಲಿಗೆ ಗುತ್ತಿಗೆ ಆಧಾರದ ಮೇಲೆ ಅವರಿಗೆ ನಿರಂತರವಾಗಿ ಕೆಲಸ ನೀಡುವಂತೆ ಸಚಿವರನ್ನು ಕೋರಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.
>
> -ಎಂ.ಎಲ್.ಅನಿಲ್‌ಕುಮಾರ್, ವಿಧಾನಪರಿಷತ್ ಸದಸ್ಯರು

ತಪ್ಪಿದಂತಾಗಿದೆ. ಹೀಗೆ ಮೂರು ವರ್ಷ ಮಾಡಿ ನಂತರದಲ್ಲಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲವೆಂಬ ದೂರುಗಳಿದ್ದು, ಜನಪ್ರತಿನಿಧಿಗಳೇ ಸರಕಾರದ ಗಮನವನ್ನೂ ಸೆಳೆದಿದ್ದಾರೆ.

**ಎ-ಬಿ ವರ್ಗದಲ್ಲಿ ಕನ್ನಡಿಗರಲಿಲ್ಲ:** ರಾಜ್ಯದಲ್ಲಿರುವ ಬಹುತೇಕ ಕಂಪನಿಗಳಲ್ಲಿ ಎ-ಬಿ ವರ್ಗದ ಹುದ್ದೆಗಳಲ್ಲಿ ತಮಿಳುನಾಡು, ಆಂಧ್ರಪ್ರದೇಶ, ದೆಹಲಿ ಸೇರಿದಂತೆ

> ರಾಜ್ಯದ ಬಹುತೇಕ ಕೈಗಾರಿಕೆಗಳ ಎ-ಬಿ ವರ್ಗಗಳಲ್ಲಿ ಹೊರ ರಾಜ್ಯದವರ ಪಾರುಪತ್ಯ ಹೆಚ್ಚಾಗಿದ್ದು, ತೀರ್ಮಾನ ತೆಗೆದುಕೊಳ್ಳುವ ಹುದ್ದೆಗಳಲ್ಲಿ ಕನ್ನಡಿಗರಿಲ್ಲ. ಶೇ.70 ರಷ್ಟು ಕನ್ನಡಿಗರಿಗೆ ಉದ್ಯೋಗ ನೀಡಲಾಗಿದೆ ಎನ್ನುವುದು ಸತ್ಯಕ್ಕೆ ದೂರವಾಗಿದ್ದು, ಹೊರಗಿನವರಿಗೆ ಹೆಚ್ಚಿನ ಮಾನ್ಯತೆ ನೀಡಲಾಗಿದೆ. ಇನ್ನಾದರೂ, ಎ-ಬಿ ವರ್ಗಗಳಲ್ಲಿಕನ್ನಡಿಗರಿಗೆ ಶೇ.60ರಷ್ಟು ಹಾಗೂ ಸಿ-ಡಿ ವರ್ಗಗಳಲ್ಲಿ ಶೇ.100 ಉದ್ಯೋಗಗಳನ್ನು ಕನ್ನಡಿಗರಿಗೆ ನೀಡಬೇಕು.
>
> -ಮೇಡಿಹಾಳ ರಾಘವೇಂದ್ರ, ಜಿಲ್ಲಾಧ್ಯಕ್ಷ, ಕನ್ನಡ ರಕ್ಷಣಾ ವೇದಿಕೆ

ಇತರೆ ರಾಜ್ಯದವರೇ ಹೆಚ್ಚಾಗಿದ್ದು, ಕಂಪನಿಗಳ ಎ-ಬಿ ವರ್ಗಗಳಲ್ಲಿ ಶೇ.20-25 ರಷ್ಟು ಮಾತ್ರವೇ ಕನ್ನಡಿಗರಿದ್ದಾರೆ ಎನ್ನಲಾಗುತ್ತಿದೆ. ಇನ್ನು ಸಿ ಮತ್ತು ಡಿ ಗ್ರೂಪ್ ಹುದ್ದೆಗಳಲ್ಲಿಯೂ ಶೇ.40-50ರಷ್ಟು ಕಾರ್ಮಿಕರು ಹೊರ ರಾಜ್ಯದವರಿದ್ದು, ಕೆಲವೊಂದು ಕಂಪನಿಗಳಲ್ಲಿ ಶೇ. 60-70 ರಷ್ಟು ಕಾರ್ಮಿಕರು ಹೊರ ರಾಜ್ಯದವರೆಂಬ ದೂರುಗಳಿವೆ. ಈ ಬಗ್ಗೆ ಪ್ರಶ್ನಿಸಿದರೆ ಸ್ಥಳೀಯರಿಗೆ ನೈಪುಣ್ಯತೆಯ ಕೊರತೆಯಿದೆ, ಅನಗತ್ಯವಾಗಿ ಗಲಾಟೆ ಮಾಡುತ್ತಾರೆಂಬ ಉತ್ತರ ಆಡಳಿತ ವರ್ಗದಿಂದ ಬರುತ್ತದೆ.

**ಅನುಮಾನ ಮೂಡಿಸಿದ ಅಂಕಿ-ಅಂಶಗಳು:** ಜಿಲ್ಲೆಯಲ್ಲಿ ನರಸಾಪುರ ಹಾಗೂ ವೇಮಗಲ್ ಕೈಗಾರಿಕಾ ಪ್ರದೇಶಗಳಲ್ಲಿ 30,902 ಮಂದಿ ಕನ್ನಡಿಗರಿಗೆ ಉದ್ಯೋಗ ನೀಡಿರುವ ಬಗ್ಗೆ ಸರಕಾರ ನೀಡಿರುವ ಅಂಕಿ-ಅಂಶಗಳು ಅನುಮಾನ ಮೂಡುವಂತೆ ಮಾಡಿದೆ.ಕೆಲವೊಂದು ಕಂಪನಿಗಳಲ್ಲಿ 400-500 ಕನ್ನಡಿಗರಿದ್ದಾರೆಂದು ತಿಳಿಸಿದ್ದು, ವಾಸ್ತವದಲ್ಲಿ 50 ರಿಂದ 100 ಮಂದಿ ಮಾತ್ರವೇ ಕನ್ನಡಿಗರು ಕೆಲಸ ಮಾಡುತ್ತಿದ್ದಾರೆ.

**ರಾಜಕೀಯ ಮುಖಂಡರು ಹೊರ ರಾಜ್ಯದ ಕಾರ್ಮಿಕರಿಗೆ:** ನರಸಾಪುರ, ವೇಮಗಲ್ ಸೇರಿದಂತೆ ಕಾರ್ಮಿಕರು ವಾಸವಿರುವ ಸ್ಥಳಗಳ ವಿಳಾಸ ಕೊಟ್ಟು ಗುರುತಿನ ಚೀಟಿಯನ್ನು ಮಾಡಿಸಿಕೊಡುತ್ತಿದ್ದು, ಕಾರ್ಮಿಕರ ಗುರುತಿನ ಚೀಟಿಯನ್ನೇ ಮುಂದಿಟ್ಟುಕೊಂಡು ಶೇ.70 ರಷ್ಟು ಕನ್ನಡಿಗರಿಗೆ ಉದ್ಯೋಗ ನೀಡಿದ್ದೇವೆಂದು ಕಂಪನಿಗಳು ಹೇಳಿಕೊಳ್ಳುತ್ತಿದ್ದು, ಅವರನ್ನು ಕನ್ನಡಿಗರೆಂದು ಪರಿಗಣಿಸಲು ಸಾಧ್ಯವೇ? ಎನ್ನುವುದು ಕನ್ನಡ ಪರ ಹೋರಾಟಗಾರರ ಪ್ರಶ್ನೆಯಾಗಿದೆ.

# ಅಂತರಾಳದಿಂದ.. EDITORIAL

## ತಪ್ಪುಗಳ ತಿದ್ದಿಕೊಳ್ಳದ ಕೆಪಿಎಸ್‌ಸಿ ಅಭ್ಯರ್ಥಿಗಳ ಕನಸುಗಳೊಂದಿಗೆ ಆಟ



ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮ, ಭ್ರಷ್ಟಾಚಾರದ ಕಾರಣಕ್ಕೆ ಮತ್ತೊಮ್ಮೆ ಸುದ್ದಿಯಲ್ಲಿರುವ 'ಕರ್ನಾಟಕ ಲೋಕಸೇವಾ ಆಯೋಗ' ಹಳೆಯ ತಪ್ಪುಗಳಿಂದ ಪಾಠ ಕಲಿಯುವಂತೆ ಕಾಣಿಸುತ್ತಿಲ್ಲ; ಕಳಂಕದ ಭಾರದಿಂದ ಹೊರಬರುವ ಪ್ರಾಮಾಣಿಕ ಪ್ರಯತ್ನಗಳನ್ನೂ ನಡೆಸುತ್ತಿಲ್ಲ. ಮೂರು ದಶಕಗಳಿಂದೀಚೆಗೆ ಆಯೋಗದ ನೇಮಕಾತಿಗಳಲ್ಲಿ ಅರ್ಹರಿಗೆ ಹುದ್ದೆ ಕೊಟ್ಟ ನಿದರ್ಶನಗಳು ಅಪರೂಪ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಂತೂ ಪ್ರತಿಬಾರಿಯೂ ವಿವಾದದಿಂದ ಹೊರತಾಗಿದ್ದೇ ಇಲ್ಲ. ಈ ಅವಧಿಯಲ್ಲಿ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಮೂರೂ ಪಕ್ಷಗಳು ರಾಜ್ಯದಲ್ಲಿ ಆಡಳಿತ ನಡೆಸಿವೆ. ವಿರೋಧ ಪಕ್ಷದಲ್ಲಿದ್ದಾಗ ಕೆಪಿಎಸ್‌ಸಿಯ ಅಕ್ರಮ, ಸದಸ್ಯರ ಭ್ರಷ್ಟಾಚಾರದ ಬಗ್ಗೆ ಜೋರು ಧ್ವನಿಯಲ್ಲಿ ಅಬ್ಬರಿಸುವ ಜನಪ್ರತಿನಿಧಿಗಳು, ಅಧಿಕಾರದಲ್ಲಿದ್ದಾಗ ಆಯೋಗಕ್ಕೆ ಚಿಕಿತ್ಸೆ ನೀಡಲು ಮುಂದಾಗಿದ್ದಿಲ್ಲ. 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ 2024ರ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಹಿಂದೆಲ್ಲ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ ಬಳಿಕ, ಆಯೋಗಕ್ಕೆ ಆರೋಪಗಳು ಸುತ್ತಿಕೊಳ್ಳುತ್ತಿದ್ದವು. ಈ ಬಾರಿ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿನ ಲೋಪಗಳಿಂದ ಶುರುವಾದ ಪ್ರಮಾದಗಳ ಸರಮಾಲೆ, ಸಂದರ್ಶನಕ್ಕೆ ಆಯ್ಕೆಯಾದವರ ಪಟ್ಟಿಯವರೆಗೂ ಮುಂದುವರಿಯುತ್ತಿದೆ. ಪೂರ್ವಭಾವಿ ಪರೀಕ್ಷೆ 2024ರ ಆಗಸ್ಟ್‌ನಲ್ಲಿ ನಡೆಯಿತು. 1 ಮತ್ತು 2ನೇ ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡುವಾಗ ತಪ್ಪುಗಳೇ ವಿಜೃಂಭಿಸಿದ್ದವು. ಪ್ರಶ್ನೆ ಮತ್ತು ಆಯ್ಕೆ ಉತ್ತರಗಳು ತದ್ವಿರುದ್ಧವಾಗಿದ್ದರೆ, ಕೆಲವು ಪ್ರಶ್ನೆಗಳು ಅರ್ಥವೇ ಆಗದಂತೆ ಇದ್ದವು. ಆಗ ಮಧ್ಯ ಪ್ರವೇಶಿಸಿದ ಸರ್ಕಾರ, ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆ ನಡೆಸುವಂತೆ ಸೂಚಿಸಿತು. ಅದೇ ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆಯಿತು. 2025ರ ಮೇ ತಿಂಗಳಲ್ಲಿ ನಡೆದ ಮುಖ್ಯಪರೀಕ್ಷೆಯಲ್ಲಿ 5,700ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗಿಯಾಗಿದ್ದರು. ಅವರ ಪೈಕಿ 1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನಕ್ಕೆ) ಆಯ್ಕೆಯಾದ 1,152 ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗವು ಮಾರ್ಚ್ 2ರಂದು ಬಿಡುಗಡೆ ಮಾಡಿತು. ಇದು ಪ್ರಕಟವಾಗುತ್ತಿದ್ದಂತೆ, 'ಅರ್ಹತಾ ಪಟ್ಟಿ ಸಿದ್ಧಪಡಿಸುವ ವೇಳೆ ಭ್ರಷ್ಟಾಚಾರ ನಡೆದಿದ್ದು, ಒಂದು ಹುದ್ದೆಗೆ ಬಹುಕೋಟಿ ರೂಪಾಯಿ ಲಂಚ ಪಡೆಯಲಾಗಿದೆ' ಎಂಬ ಆರೋಪ ಎದುರಾಯಿತು. ಹಾಗಿದ್ದರೂ, ವ್ಯಕ್ತಿತ್ವ ಪರೀಕ್ಷೆ ವೇಳಾಪಟ್ಟಿಯನ್ನು ಆಯೋಗ ಹೊರಡಿಸಿತು. ಅರ್ಹತಾ ಪಟ್ಟಿ ಸಿದ್ಧಪಡಿಸುವಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿ ವರದಿ ನೀಡುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಆಯೋಗದ ಕಾರ್ಯದರ್ಶಿಗೆ ಸೂಚಿಸಿದರು. 'ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ಆಧಾರವಿಲ್ಲದೆ ಆರೋಪ ಮಾಡುವುದು ಸರಿಯಲ್ಲ' ಎಂದು ಆಯೋಗದ ಕಾರ್ಯದರ್ಶಿ ಕೆ. ಜ್ಯೋತಿ ಪ್ರತಿಪಾದಿಸಿದರು.

ಈ ಬೆಳವಣಿಗೆಗಳ ಮಧ್ಯೆಯೇ, ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸಿದ್ದ ವೇಳಾಪಟ್ಟಿಯನ್ನು ಆಡಳಿತಾತ್ಮಕ ಕಾರಣಗಳಿಗೆ ಹಿಂಪಡೆಯಲಾಗಿದೆ ಎಂದು ಆಯೋಗ ಹೇಳಿದೆ. ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪವು ವಿಧಾನಸಭೆ ಕಲಾಪದಲ್ಲೂ ಪ್ರತಿಧ್ವನಿಸಿದೆ. 'ಕೆಪಿಎಸ್‌ಸಿಯು ಉದ್ಯೋಗಾಕಾಂಕ್ಷಿಗಳ ಕನಸನ್ನೇ ಕೊಲ್ಲುವ ಕೇಂದ್ರ' ಎಂದು ವಿರೋಧ ಪಕ್ಷದ ಸದಸ್ಯರು ಆತಂಕ ವ್ಯಕ್ತಪಡಿಸಿದರೆ, 'ಆಯೋಗವನ್ನೇ ರದ್ದುಪಡಿಸಬೇಕು' ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಪಾದಿಸಿದ್ದಾರೆ. ಕೆಪಿಎಸ್‌ಸಿ ಕರ್ಮಕಾಂಡದ ಬಗ್ಗೆ ಕಲಾಪದಲ್ಲಿ ಚರ್ಚೆ ನಡೆಯುತ್ತಿರುವುದು ಹೊಸತೇನೂ ಅಲ್ಲ. 2025ರಲ್ಲಿ ನಡೆದ ಅಧಿವೇಶನದಲ್ಲಿ ನಡೆದ ಚರ್ಚೆಗೆ ಅದೇ ವರ್ಷದ ಮಾರ್ಚ್ 12ರಂದು ಉತ್ತರ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಆಯೋಗದಲ್ಲಿ ಪಾರದರ್ಶಕತೆ ತಂದು, ಉದ್ಯೋಗಾಕಾಂಕ್ಷಿಗಳಲ್ಲಿ ವಿಶ್ವಾಸ ತುಂಬಲು ಕಾಯ್ದೆಗಳಿಗೆ ತಿದ್ದುಪಡಿ ತಂದು, ನಿಯಮಗಳನ್ನು ಬದಲಾವಣೆ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಅಂತಹ ಸುಧಾರಣೆಯೇನೂ ಈ ಒಂದು ವರ್ಷದಲ್ಲಿ ಕಾಣಲಿಲ್ಲ. 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಅಧಿಸೂಚನೆ ಹೊರಬಿದ್ದ ಬಳಿಕ ಆಯೋಗದ ಕಾರ್ಯದರ್ಶಿಗಳಾಗಿದ್ದ ಲತಾಕುಮಾರಿ, ರಾಕೇಶ್‌ಕುಮಾರ್, ರಮಣದೀಪ್ ಚೌಧರಿ, ಆರ್. ವಿಶಾಲ್, ಹೀಗೆ ನಾಲ್ವರನ್ನು ವರ್ಗಾವಣೆ ಮಾಡಲಾಗಿದೆ. ಕಾಣದ ಕೈಗಳ ಒತ್ತಡಕ್ಕೆ ಮಣಿದು ಪ್ರಮುಖ ಹುದ್ದೆಯಲ್ಲಿರುವವರನ್ನು ವರ್ಗಾವಣೆ ಮಾಡಲಾಗಿದೆ ಎಂಬ ಆರೋಪವೂ ಇದೆ. ಆಯೋಗದ ಆಡಳಿತ ಕಾರ್ಯದರ್ಶಿಯದಾದರೂ ಪರೀಕ್ಷೆಯ ಉಸ್ತುವಾರಿ ನಿಯಂತ್ರಕರದ್ದಾಗಿದೆ. 'ನಾಲ್ಕು ವರ್ಷಗಳಿಂದ ಈ ಹುದ್ದೆಯಲ್ಲಿರುವ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಈವರೆಗೂ ವರ್ಗಾವಣೆ ಮಾಡಿಲ್ಲ. ಪರೀಕ್ಷೆಗಳಲ್ಲಿನ ಲೋಪಕ್ಕೆ ಅವರೇ ಕಾರಣ' ಎಂದು ವಿಧಾನಸಭೆಯಲ್ಲಿ ಶಾಸಕರೇ ಆಪಾದಿಸಿದ್ದಾರೆ. ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿರುವುದರಿಂದಾಗಿ, ತಪ್ಪಿತಸ್ಥ ಸದಸ್ಯರ ವಿರುದ್ಧ ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಆದರೆ, ಹೊಸದಾಗಿ ಸದಸ್ಯರ ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡುವಾಗ ಕಳಂಕರಹಿತರು, ಪ್ರಾಮಾಣಿಕರನ್ನು ಪರಿಗಣಿಸಲು ಸರ್ಕಾರ ಮುಂದಾಗಬೇಕು. ನಿವೃತ್ತ ನ್ಯಾಯಮೂರ್ತಿಗಳು, ಆಡಳಿತ ತಜ್ಞರ ಜತೆ ಸಮಾಲೋಚನೆ ನಡೆಸಿ ಆಯೋಗಕ್ಕೆ ಗಂಭೀರವಾದ ಚಿಕಿತ್ಸೆ ಮಾಡಲು ಸರ್ಕಾರ ಮುಂದಾಗಬೇಕಿದೆ. ಯುಪಿಎಸ್‌ಸಿ ಮಾದರಿಯಲ್ಲಿ ಕೆಪಿಎಸ್‌ಸಿ ರೂಪಿಸುವ ಮಾತುಗಳನ್ನು ಆಡುತ್ತಲೇ ಬಂದಿರುವ ಸರ್ಕಾರ, ಈಗಲಾದರೂ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು.

# ರಾಮಾಯಣ



## ಶ್ರೀರಾಮನು ಹನುಮಂತನಿಗೆ ತನ್ನ ಮುದ್ರೆಯುಂಗುರವನ ಕೊಟ್ಟಿದ್ದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಈ ಪ್ರಕಾರ ಸುಗ್ರೀವನು ಸೀತಾದೇವಿಯನ್ನರಸುವುದಕ್ಕೆ ಕಪಿನಾಯಕರನ್ನು ಕಳುಹಿಸಿ ಹನುಮಜನು ಆ ಕಾರ್ಯವನ್ನು ಸಾಧ್ಯ ಮಾಡುವುದಕ್ಕೆ ಸಮರ್ಥನೆಂದೆಣಿಸಿ ಆತನನ್ನು ಕುರಿತು ವಿಶೇಷ ಉಪಚಾರ ಪೂರ್ವಕವಾಗಿ ಹೀಗೆಂದನು: ಹನುಮಂತ, ನೀನು ಭೂಲೋಕದಲ್ಲಿಯೂ 2.ಉತ್ತಲೋತದಲ್ಲಿಯೂ ಉದಂದಲ್ಲಿಯೂ ಸಂಚರಿಸಬಲ್ಲೆಯೆಂಬುದಕ್ಕೆ ಸಂದೇಹವಿಲ್ಲ. ತಾಕ್ಷಿಸಶೋಕದಲ್ಲಿಯೂ ಗಂಧರ್ದಲೋಕದಲ್ಲಿಯೂ ನಾಗಲೋಕದಲ್ಲಿಯೂ ದೇವಲೋಕದಲ್ಲಿಯೂ ಸಮಸ್ತ ಪರ್ವತಗಳಲ್ಲಿಯೂ ನೀನುಯದ ಪ್ರದೇಶಗಳಲ್ಲ. ನೀನು ಸಂಚರಿಸದ ಭೂಮಿಯೇ ಇಲ್ಲ. ವಾಯುವೇಗ ಮನೋವೀಗಗಳೂ ನಿನ್ನ ವೇಗದಲ್ಲಿ ಅಡಕವಾಗಿರುವುವು. ಸಮಸ್ತ ತೇಜಸ್ಸುಗಳೂ ನಿನ್ನ ಜಸ್ಸಿನಲ್ಲಿ ಅಡಕವಾಗಿರುವುವು. ಹನುಮಂತ ಬಲವೂ ಬುದ್ಧಿಪರಾಕ್ರಮಗಳೂ ದೇಶಾಲ ಪರಿಜ್ಞಾನ ನೀತಿಗಳೂ ನಿನ್ನಲ್ಲೇ ಇಲುವುದು. ಆದಕಾರಣ ಶ್ರೀರಾಮನ ಕಾರ್ಯಸಾಧನೆಗೆ ತಕ್ಕ ವಿವೇಕವು ನಿನ್ನಲ್ಲಿಯೇ ಇದೆಯೆಂದು ನಿಶ್ಚಯಿಸಿದೆನು. ನಿನ್ನಿಂದಲೇ ಸಮಸ್ತ ಕಾರ್ಯಗಳೂ ಸಾಧ್ಯವಾಗಬೇಕೆಂದು ನಿಶ್ಚಯಿಸಿದ್ದೇನೆ ಎಂದು ಹೇಳಿದನು. ಆ ಸಮಯದಲ್ಲಿ ಶ್ರೀರಾಮನು ಹನುಮಂತನನ್ನು ನೋಡಿ ಈತನು ಅತ್ಯಂತಸಮರ್ಥ ನುಡದಪ್ಪರೆ ಸಂಗ್ರೀವನು ಅಷ್ಟು ಉಪಚಾರದ ಮಾತನ್ನು ಅವನಿಗೆ ಹೇಳುತ್ತಿರಲಿಲ್ಲ ಎಂದು ಮನಸ್ಸಿನಲ್ಲೆಣಿಸಿ 'ಶ್ರೀರಾಮ' ಎಂಬ ನಾಮಾಂಕಿತವುಳ್ಳ ತನ್ನ ಮುದ್ರೆಯುಂಗುರವನ್ನು ಸೀತಾದೇವಿಯ ಕೈಯಲ್ಲಿ ಕೊಟ್ಟಿಯಾದರೆ ಸೀತಾದೇವಿಯು ನಿನ್ನನ್ನು ನನ್ನ ಸಮೀಪದಿಂದ ಬಂದವನೆಂದು ವಿಶ್ವಾಸದಿಂದ ಕಂಡು ಭಯವಿಲ್ಲದೆ ನಿನ್ನೊಡನೆ ಸಂಭಾಷಣೆಮಾಡುವಳು. ಹನುಮಂತ ನೀನು ಮಹಾಬಲವಂತ; ಮಹಾಪರಾಕ್ರಮಿ. ಅದಲ್ಲದೆ ಸುಗ್ರೀವನು ನಿನ್ನ ಮೇಲೆಯೇ ಈ ಕಾರ್ಯಸ್ಥಿತಿಯನ್ನು ವಹಿಸಿರುವನು. ಆದಕಾರಣ ನನ್ನ ಮನಸ್ಸಿಗೆ ನಿನ್ನಿಂದಲೇ ನನ್ನ ಕಾರ್ಯವಾಗುವುದೆಂದು ತೋರುತ್ತಿದೆ ಎಂದನು. ಹನುಮಂತನು ಮಹಾಪ್ರಸಾದವೆಂದು ಆ ಮುದ್ರೆಯುಂಗುರವನ್ನು ಕೈಯಲ್ಲಿ ತೆಗೆದು ಶಿರಸಾವಹಿಸಿಕೊಂಡು ಶ್ರೀರಾಮನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ಅನಂತರ ಮಹಾಬಲವುಳ್ಳ ತನ್ನ ಸೇನೆಯನ್ನು ಕೂಡಿಕೊಂಡು ಅದರ ಮಧ್ಯದಲ್ಲಿ, ಮೇಘದ ಮರೆಯಿಲ್ಲದ ಅಂತರಿಕ್ಷಮಾರ್ಗದಲ್ಲಿ ನಕ್ಷತ್ರಸಮೂಹದಿಂದ ಒಪ್ಪುತ್ತಿರುವ ನಿರ್ಮಲವಾದ ಮಂಡಲವುಳ್ಳ ಚಂದ್ರನಂತೆ ಒಪ್ಪುತ್ತಿದ್ದನು.

### ಕಪಿಗಳು ಸೀತಾದೇವಿಯನ್ನು ಹುಡುಕುವುದಕ್ಕೆ ಹೊರಟಿದ್ದು

ಈ ಪ್ರಕಾರವಾಗಿ ಸುಗ್ರೀವನು ಸೀತಾದೇವಿಯನ್ನು ಹುಡುಕುವುದಕ್ಕೆ ತಕ್ಕ ಕಪಿನಾಯಕರನ್ನು ಆಯಾ ದಿಕ್ಕಿಗೆ ನೇಮಿಸಿ ಅವರನ್ನು ಕುರಿತು ಎಲೈ ಕಪಿಗಳಿರಾ, ನಾನು ಹೇಳಿದ ಪ್ರಕಾರದಲ್ಲಿ ನೀವು ಸಂಚರಿಸಿ ಸೀತಾದೇವಿಯನ್ನರಸಿ ಕರೆದುಕೊಂಡು ಬನ್ನಿರಿ ಎಂದು ಆಜ್ಞಾಪಿಸಿದನು ಆ ಕಪಿನಾಯಿಕರು ಸುಗ್ರೀವನ ಆಜ್ಞೆಯನ್ನು ಶಿರಸಾವಹಿಸಿ ತಮ್ಮ ತಮ್ಮ ಮಾರ್ಗವನ್ನು ಹಿಡಿದು ಶಲಭಗಳಂತೆ ತಂಡತಂಡವಾಗಿ ಆಕಾಶಮಾರ್ಗವನ್ನು ಆಡರಿದರು. ಆ ಕಪಿವೀರರು ಕೂಗುತ್ತ ಗರ್ಜಿಸುತ್ತ ನಗೆದಾಡುತ್ತ ಬೊಬ್ಬಿಡುತ್ತ ತಮಗೆ ನಮಿಸಿದ ದಿಕ್ಕುಗಳನ್ನು ನೋಡುತ್ತ ಒಬ್ಬರಿಗೊಬ್ಬರು ನಾನೇ ರಾವಣನನ್ನು ಕೊಂದು ಸೀತಾದೇವಿಯನ್ನು ತರುವೆನು ನಾನೊಬ್ಬನೇ ಸಮರದಲ್ಲಿ ರಾವಣನನ್ನು ಕೊಂದು ಸೀತಾದೇವಿಯನ್ನು ಕರೆದುಕೊಂಡು ಬರುವನು ನಾನೇ ಆ ದೇವಿಯು ಪಾತಾಳ ಲೋಕದಲ್ಲಿದ್ದರೂ ಕರೆತರುವೆನು ನಾನು ಸಮಸ್ತ ವೃಕ್ಷಗಳನ್ನೂ ಮುರಿಯುವನು ನಾನು ಸಮಸ್ತ ಪರ್ವತಗಳನ್ನೂ ಚೂರ್ಣಮಾಡುವೆನು ನಾನು ಭೂಮಂಡಲವನ್ನು ಇಬ್ಬಗೆಯಾಗಿ ಸೀಳುವೆನು ನಾನು ಸಮುದ್ರವನ್ನು ಕದಡಿಬಿಡುವೆನು ನಾನು ಒಂದು ಗಾವುದದಾರಿ ನೆಗೆಯುವೆನು.

ಮುಂದುವರಿಯುವುದು...

# ಮೌನ ಸಾಧಕರಾಗಿ ಒಳಿತನ್ನು ಮಾಡಿ :ಹೆಚ್. ಎಸ್. ಪ್ರತಿಮಾ ಹಾಸನ್

• ಉದಯವಾಹಿನಿ, ಹಾಸನ

ಹಾಸನದ ಹೌಸಿಂಗ್ ಬೋರ್ಡ್, ಚನ್ನಪಟ್ಟಣದಲ್ಲಿ ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ (ರಿ) ವತಿಯಿಂದ ತಾಲ್ಲೂಕು ಅಧ್ಯಕ್ಷರಾದ ರಮ್ಯಾರವರ ನಿವಾಸದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಹಾಸನದ ಹೆಮ್ಮೆಯ ಪುತ್ರಿ ಯಾಗಿರುವ ಸಾಹಿತಿ, ಸಮಾಜ ಸೇವಕಿ, ಶಿಕ್ಷಕಿ, ಪತ್ರಕರ್ತೆ, ಸಾಮಾಜಿಕ ಚಿಂತಕಿ, ನೂರಾರು ಪ್ರಶಸ್ತಿಗಳನ್ನು ಪಡೆದಿರುವ ಸಾಧಕಿ, ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ (ರಿ ) ಸಂಸ್ಥಾಪಕ ಅಧ್ಯಕ್ಷರಾಗಿರುವ ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್ ರವರನ್ನು ಕಾರ್ಯಕ್ರಮದ ಅಧ್ಯಕ್ಷತೆಯನ್ನು ನೀಡಿ ಅವರನ್ನು ಎಲ್ಲಾ ಮಹಿಳೆಯರು ಅರಿಶಿಣ ಕುಂಕುಮ, ಬಳೆ. ಸೀರೆ ಜೊತೆಗೆ ಬಾಗಿನ ನೀಡಿ ಅವರ ಸಾಧನೆಯ ಹಲವಾರು ಪ್ರಶಸ್ತಿ ಪಡೆದ ಭಾವಚಿತ್ರವಿರುವ ಫಲಕ ನೀಡಿ ಸನ್ಮಾನಿಸಿ ಗೌರವಿಸಲಾಯಿತು ನಂತರ ಬದುಕು ಎಂದ ಮೇಲೆ ಜೀವನದಲ್ಲಿ ಏರುಪೇರು ಸಹಜ. ಕಷ್ಟಸುಖ ಎಂಬುದು ಎಲ್ಲರ ಬದುಕಿನಲ್ಲಿ ಬರುತ್ತದೆ ಕಷ್ಟದಲ್ಲಿ ಇರುವವರಿಗೆ ಕೈಲಾದಷ್ಟು ಸಹಾಯವನ್ನು ಅಂಗವಿಕಲರು, ನೊಂದವರಿಗೆ, ನಿರ್ಗತಕರಿಗೆ ಮಾಡಬೇಕು ಮಾಡುವ ಕೆಲಸವಾಗಲಿ ಸಾಧನೆ ಆಗಲಿ ಮೌನದಲ್ಲಿ ಸಾಗಬೇಕು, ಎಂದಿಗೂ ಮೌನ ಸಾಧಕರಾಗಿ ಒಳಿತನ್ನು ಮಾಡುತ್ತಾ ಸಾಗಿದರೆ ಸಮಾಜ ನಮ್ಮನ್ನು ಗುರುತಿಸುತ್ತದೆ. ಎಂದು ಹೇಳುತ್ತಾ ಮಹಿಳೆಯರು ಪ್ರಬಲರಾಗಿ ಬದುಕಬೇಕು, ಆರ್ಥಿಕವಾಗಿ ಎಷ್ಟೇ ಪ್ರಬಲರಾದರು ದುಡಿಮೆಯನ್ನು ಮಾಡುತ್ತ ಸಾಗಿದರೆ ಸಮಾಜಕ್ಕೆ ಮಾದರಿಯಾಗಬಹುದು. ಅಷ್ಟೇ ಅಲ್ಲ ಮಹಿಳೆಯು ಅಬಲೆಯಲ್ಲ ಸಬಲೇ ಎಂಬ ಮಾತಿಗೆ ಎಲ್ಲಾ ಮಹಿಳೆಯರು ಸಂಸ್ಕೃತಿಯನ್ನು ಉಳಿಸುತ್ತಾ ಉಡುಗೆ-ತೊಡುಗಿಗಳಲ್ಲಿ ಬದಲಾವಣೆಗಳನ್ನು ತೋರದೆ ನಮ್ಮ ಮಕ್ಕಳಿಗೆ ಒಳ್ಳೆಯ ಮಾರ್ಗದರ್ಶನವನ್ನು ನೀಡುತ್ತಾ ನಮ್ಮ ಸಂಸ್ಕೃತಿಗೆ ವಿರುದ್ಧ ನಡೆಯದೆ ಕಾರ್ಯವನ್ನು ನಿರ್ವಹಿಸುತ್ತಾ ಸಾಗಿದರೆ ನಮ್ಮ ಸಮಾಜ ಸುಭದ್ರವಾಗಿರುತ್ತದೆ.

ಮಹಿಳೆ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಅರಿತು ಸಾಗಬೇಕಿದೆ. ಒಟ್ಟಾರೆ ಮಹಿಳೆಯಿಂದ ಸಮಾಜ ಸುಭದ್ರತೆಯನ್ನು ಕಾಣಬಹುದಾಗಿದೆ. ಎಂದು ಹೆಚ್. ಎಸ್ ಪ್ರತಿಮಾ ಹಾಸನ್ ಅವರು ತಿಳಿಸಿದರು. ನಂತರ ಹೆಚ್. ಎಸ್. ಪ್ರತಿಮಾ ಹಾಸನ್ ರವರ ಸಾಧನೆ ಬಹಳವಾಗಿದೆ. ಅವರು ನೂರಾರು ಮಹಿಳೆಯರಿಗೆ ಸ್ಫೂರ್ತಿದಾಯಕ ಹಾಗೂ ಮಾದರಿಯಾಗಿದ್ದಾರೆ. ನೊಂದ ಮಹಿಳೆಯರಿಗೆ ನ್ಯಾಯ ನೀಡುವುದಾಗಲಿ, ಕರಕುಶಲ ತರಬೇತಿಯಾಗಲಿ, ಸಾಹಿತಿಕವಾಗಿ ಕಾರ್ಯಕ್ರಮಗಳಾಗಲಿ ಗುರುತಿಸಿ ನಮ್ಮೆಲ್ಲರಿಗೂ ಪ್ರೋತ್ಸಾಹ ನೀಡುತ್ತಿರುವುದು ಅವರ ಸಾಧನೆಯಾಗಿ ಕಾಣುತ್ತದೆ. ಇವರು ಬಹುಮುಖ ಪ್ರತಿಭೆಯಾಗಿದ್ದು.ಯಾವುದೇ ನಿಷ್ಕಲ್ಮಶವನ್ನು ತೋರದೆ ನೇರ ನುಡಿಯ ಮಾತುಗಾರ್ತಿಯಾಗಿ ನಮ್ಮೆಲ್ಲರಿಗೂ ಗುರುವಿನಂತೆ. ಇವರನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾ ಇಂದು ನಮ್ಮ ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್(ರಿ ) ವತಿಯಿಂದ ಗೌರವಿಸುತ್ತಿರುವುದು ನಮಗೆಲ್ಲ ಹೆಮ್ಮೆ ಎನ್ನಿಸುತ್ತದೆ. ಹೀಗೆ ಇವರ ಕಾರ್ಯವು ಸುಗಮವಾಗಿ ನಡೆಯಲೆಂದು ಆಶಿಸುತ್ತೇವೆ ಎಂದು ತಾಲ್ಲೂಕು ಅಧ್ಯಕ್ಷರಾದ ರಮ್ಯಾ ತಿಳಿಸಿದರು. ನಮ್ಮ ಟ್ರಸ್ಟ್‌ನ ಕಾರ್ಯವು ಸುಗಮವಾಗಿ ಸಾಗುತ್ತಾ ಸಮಾಜಕ್ಕೆ ಒಳಿತನ್ನು ಮಾಡಿದರೆ ಸಾಕೆಂದು ಎಲ್ಲಾ ಟ್ರಸ್ಟ್‌ನ ಸದಸ್ಯರು ತಿಳಿಸಿದರು. ಕಾರ್ಯಕ್ರಮದಲ್ಲಿ ಸೌಮ್ಯ, ಅಭಿಲಾಷ, ಕಲ್ಪನಾ, ಸಂಗೀತ, ಜಯಮ್ಮ ಪ್ರವೀಣ್ ಗೌಡ, ಬೇಬಿ ರಶಿಕ,ಬೇಬಿ ದಿಯಾ ಗೌಡ ಕೆ ಆರ್. ಇನ್ನೂ ಹಲವರು ಇದ್ದರು



ಉದಯವಾಹಿನಿ ಚಿತ್ರ

# ಗರ್ಭಿಣಿಯರು ಅನಾನಸ್ ತಿನ್ನಬಾರದು ಯಾಕೆ?

ಗರ್ಭಿಣಿರು ಪೈನಾಪಲ್ ಹಣ್ಣನ್ನು ತಿನ್ನಬಾರದು ಎನ್ನುವುದನ್ನು ನೀವು ಕೇಳಿರಬಹುದು. ಅನಾನಸ್ ತಿನ್ನೋದ್ರಿಂದ ಗರ್ಭಪಾತವಾಗುತ್ತೆ ಎನ್ನಲಾಗುತ್ತದೆ. ಆದರೆ ಇದು ನಿಜಕ್ಕೂ ಹಾನಿಕಾರಕವೇ ಗರ್ಭಿಣಿಯರು ಪೈನಾಪಲ್ ತಿನ್ನೋದ್ರಿಂದ ಯಾವೆಲ್ಲಾ ಸಮಸ್ಯೆಗಳಾಗುತ್ತವೆ ತಿಳಿಯೋಣ. ಗರ್ಭಾವಸ್ಥೆಯಲ್ಲಿ ಅನಾನಸ್ ಸುರಕ್ಷಿತ, ಆರೋಗ್ಯಕರ ಆಯ್ಕೆಯಾಗಿದೆ. ಅನಾನಸ್ ಆರಂಭಿಕ ಗರ್ಭಪಾತಕ್ಕೆ ಕಾರಣವಾಗಬಹುದು ಅಥವಾ ಹೆರಿಗೆಗೆ ಕಾರಣವಾಗಬಹುದು ಎನ್ನುವುದನ್ನು ನೀವು ಕೇಳಿರಬಹುದು. ಆದರೆ ಇದೆಲ್ಲಾ ಸುಳ್ಳು. ಗರ್ಭಾವಸ್ಥೆಯಲ್ಲಿ ಅನಾನಸ್ ಅಪಾಯಕಾರಿ ಎಂದು ಬೆಂಬಲಿಸಲು ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಗರ್ಭಾವಸ್ಥೆಯಲ್ಲಿ ಅನಾನಸ್ ಸೇವನೆಯು ಅದರ ಬ್ರೋಮೆಲೈನ್ ಅಂಶದಿಂದಾಗಿ ಬಹಳ ಸಮಯದಿಂದ ಚರ್ಚೆಯಲ್ಲಿದೆ. ಬ್ರೋಮೆಲೈನ್ ಅನಾನಸ್ ಹಣ್ಣು ಮತ್ತು ಕಾಂಡಗಳಲ್ಲಿ ಇರುವ ಕಿಣ್ವ ಮಿಶ್ರಣವಾಗಿದ್ದು, ಇದು ಪ್ರೋಟೀನ್‌ಗಳನ್ನು ಒಡೆಯುವ ಕಾರ್ಯವನ್ನು ನಿರ್ವಹಿಸುತ್ತದೆ ಮತ್ತು ಅಸಹಜ ರಕ್ತಸ್ರಾವಕ್ಕೆ ಕಾರಣವಾಗಬಹುದು..

**ಬ್ರೋಮೆಲಿನ್ ಕಿಣ್ವ:** ಬ್ರೋಮೆಲೈನ್ ಅನ್ನು ಸಾಮಾನ್ಯವಾಗಿ ಅದರ ಉರಿಯೂತದ ಗುಣಲಕ್ಷಣಗಳಿಗಾಗಿ ಬಳಸಲಾಗುತ್ತದೆ, ಸ್ತ್ರೀ ಸಂತಾನೋತ್ಪತ್ತಿ ವ್ಯವಸ್ಥೆಯ ಮೇಲೆ ಅದರ ಸಂಭಾವ್ಯ ಪರಿಣಾಮವು ಎಚ್ಚರಿಕೆಯ ವಿಷಯವಾಗಿದೆ. ಈ ಕಿಣ್ವದ ಹೆಚ್ಚಿನ ಸಾಂದ್ರತೆಯು ಗರ್ಭಕಂಠವನ್ನು ಮೃದುಗೊಳಿಸುವ ಸಂಭಾವ್ಯ ಪರಿಣಾಮವನ್ನು ಹೊಂದಿದೆ ಎಂದು ಅಧ್ಯಯನಗಳು ಸೂಚಿಸುತ್ತವೆ. ಗರ್ಭಕಂಠದ ಮಾಗಿದ ಪರಿಣಾಮವು ಗರ್ಭಾಶಯದ ಸಂಕೋಚನಗಳಿಗೆ ಕಾರಣವಾಗುತ್ತದೆ ಎಂದು ನಂಬಲಾಗಿದೆ. ಅನಾನಸ್‌ನ ಮಧ್ಯಭಾಗದಲ್ಲಿ ಬ್ರೋಮೆಲಿನ್ ಕಂಡು ಬಂದರೂ, ನಾವು ತಿನ್ನುವ ಅನಾನಸ್‌ನ ತಿರುಳಿನಲ್ಲಿ ಬಹಳ ಕಡಿಮೆ ಇರುತ್ತದೆ. ಅನಾನಸ್‌ನ ಒಂದೇ ಸರ್ವಿಂಗ್‌ನಲ್ಲಿರುವ ಬ್ರೋಮೆಲಿನ್ ಪ್ರಮಾಣವು ನಿಮ್ಮ ಗರ್ಭಧಾರಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿಲ್ಲ.

**ಜಠರಗರುಳಿನ ತೊಂದರೆಗೆ ಕಾರಣವಾಗುತ್ತದೆ:** ಯಾವುದೇ ಸಂಭಾವ್ಯ ಅಪಾಯವನ್ನು ಹೊರಗಿಡಲು ಅದನ್ನು ಇನ್ನೂ ಮಿತವಾಗಿ ಅಥವಾ ಸಂಪೂರ್ಣವಾಗಿ ತಪ್ಪಿಸುವಂತೆ ಶಿಫಾರಸು ಮಾಡಲಾಗಿದೆ. ಅನಾನಸ್ ಹಣ್ಣಿನ ಹೆಚ್ಚಿನ ಆಮ್ಲೀಯತೆಯು ಅದರ ಕಿಣ್ವಕ ಗುಣಲಕ್ಷಣಗಳೊಂದಿಗೆ ಗರ್ಭಾವಸ್ಥೆಯಲ್ಲಿ ಮಹಿಳೆಯರು ಅನುಭವಿಸುವ ಜಠರಗರುಳಿನ ತೊಂದರೆಗಳಿಗೆ ಕಾರಣವಾಗುತ್ತದೆ. ಹಾರ್ಮೋನುಗಳ ಬದಲಾವಣೆಗಳು ಮತ್ತು ಹೊಟ್ಟೆಯೊಳಗಿನ ಒತ್ತಡ ಹೆಚ್ಚಾಗುವುದರಿಂದ ಗರ್ಭಿಣಿಯರಿಗೆ ಎದೆಯುರಿ ಬರುವ ಅಪಾಯ ಹೆಚ್ಚು ಎನ್ನುತ್ತಾರೆ ಬೆಂಗಳೂರಿನ ಕೊತ್ತನೂರಿನ ಮದರ್‌ಹುಡ್ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ರಶ್ಮಿ ಎನ್ ಅನಾನಸ್ ಗರ್ಭಪಾತಕ್ಕೆ ಕಾರಣ ಆಗುತ್ತದೆ.

ಸಾಮಾನ್ಯ ಪ್ರಮಾಣದಲ್ಲಿ ಸೇವಿಸಿದಾಗ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ ಅನಾನಸ್ ಆರಂಭಿಕ ಹೆರಿಗೆಗೆ ಪ್ರಚೋದಿಸುತ್ತದೆ ಅತಿಯಾದ ಸೇವನೆಯು ಮಾತ್ರ ಅಸ್ವಸ್ಥತೆಯನ್ನು ಉಂಟುಮಾಡಬಹುದು.

**ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ಹೆಚ್ಚಿಸುತ್ತದೆ:** ಅನಾನಸ್ ಸಕ್ಕರೆ ಅಂಶವು ಹೆಚ್ಚಿನ ಮಟ್ಟವನ್ನು ತಲುಪುತ್ತದೆ. ಗರ್ಭಾವಸ್ಥೆಯ ಮಧುಮೇಹದಿಂದ ಬಳಲುತ್ತಿರುವ ಅಥವಾ ಈ ಸ್ಥಿತಿಯನ್ನು ಬೆಳೆಸುವ ಹೆಚ್ಚಿನ ಅಪಾಯವನ್ನು ಎದುರಿಸುತ್ತಿರುವ ಮಹಿಳೆಯರು ಈ ಉತ್ಪನ್ನವನ್ನು ಸೇವಿಸುವುದನ್ನು ತಪ್ಪಿಸಬೇಕು ಏಕೆಂದರೆ ಇದು ಅವರ ರಕ್ತದಲ್ಲಿನ ಗ್ಲೂಕೋಸ್ ಮಟ್ಟವನ್ನು ತೀವ್ರ ಗರಿಷ್ಠ ಮತ್ತು ಕನಿಷ್ಠ ಮಟ್ಟಗಳ ನಡುವೆ ಏರಿಳಿತಗೊಳಿಸುತ್ತದೆ, ಇದು ಅವರ ಮಧುಮೇಹ ನಿರ್ವಹಣೆಗೆ ಸವಾಲುಗಳನ್ನು ಸೃಷ್ಟಿಸುತ್ತದೆ.

**ಗರ್ಭಾವಸ್ಥೆಯಲ್ಲಿ ಅನಾನಸ್ ತಿನ್ನುವಾಗ ಪರಿಗಣಿಸಬೇಕಾದ ಅಪಾಯಗಳು:** ಅನಾನಸ್ ತಿನ್ನುವುದರಿಂದ ಆರಂಭಿಕ ಗರ್ಭಪಾತವಾಗುತ್ತದೆ ಎಂಬ ನಂಬಿಕೆಯನ್ನು ಅಧ್ಯಯನಗಳು ತಳ್ಳಿಹಾಕಿದ್ದರೂ, ಅದು ಕೆಲವೊಮ್ಮೆ ಗರ್ಭಿಣಿ ಮಹಿಳೆಯರಿಗೆ ಅಸ್ವಸ್ಥತೆಯನ್ನು ಉಂಟುಮಾಡಬಹುದು. ನಿಮಗೆ ಹೊಟ್ಟೆಯ ಸಮಸ್ಯೆಗಳಿದ್ದರೆ, ಅನಾನಸ್ ತಿನ್ನುವಾಗ ಜಾಗರೂಕರಾಗಿರಿ. ಅನಾನಸ್‌ನಲ್ಲಿ ಎದೆಯುರಿ, ಆಮ್ಲ ಹಿಮ್ಮುಖ ಹರಿವಿಗೆ ಕಾರಣವಾಗುವ ನಿರ್ದಿಷ್ಟ ಪ್ರಮಾಣದ ಆಮ್ಲವಿದೆ. ಆದ್ದರಿಂದ, ನಿಮಗೆ ಹೊಟ್ಟೆಯ ಸಮಸ್ಯೆಗಳಿದ್ದರೆ ನೀವು ಹೆಚ್ಚು ಅನಾನಸ್ ತಿನ್ನುವುದನ್ನು ತಪ್ಪಿಸಬೇಕು.

### ಅನಾನಸ್‌ಗೆ ಅಲರ್ಜಿಯ ಲಕ್ಷಣಗಳು

- ಬಾಯಿಯಲ್ಲಿ ತಕ್ಷಣದ ತುರಿಕೆ ಅಥವಾ ನೋವು
- ಚರ್ಮದ ಕಿರಿಕಿರಿ
- ಆಸ್ತಮಾ ಲಕ್ಷಣಗಳು
- ಮೂಗಿನ ದಟ್ಟಣೆ ಅಥವಾ ಸ್ರವಿಸುವ ಮೂಗು





# ಕ್ವಿಕ್ ಆಗಿ ಮಾಡಿ ಚಿಕನ್ ಚಿಲ್ಲಿ




ಕೆಲವೊಮ್ಮೆ ಚಿಕನ್ ತಿನ್ಬೇಕು ಅಂತಾ ತುಂಬಾ ಆಸೆ ಆಗುತ್ತೆ. ಅದು ಕೂಡ ಮನೆಯಲ್ಲಿ ಮಾಡಿದ್ದೇ ಆಗಿರಬೇಕು ಅಂತಾನೂ ಅನಿಸುತ್ತೆ. ಕೆಲವೊಮ್ಮೆ ಮಾಡೋಕೆ ಬೇಜಾರು ಕೆಲವೊಮ್ಮೆ ಸಮಯ ಇರಲ್ಲ. ಇದೆಲ್ಲದರ ಮಧ್ಯೆ ಕಡಿಮೆ ಸಮಯದಲ್ಲಿಯೂ ಮಾಡ್ಬೋದು ಚಿಕನ್ ಚಿಲ್ಲಿ.. ನಿಜಕ್ಕೂ ತುಂಬಾ ಸುಲಭ ವಿಧಾನ

## ಬೇಕಾಗುವ ಸಾಮಗ್ರಿಗಳು

**ಮ್ಯಾರಿನೇಟ್ ಮಾಡಲು:** ಚಿಕನ್, ಕಾರ್ನ್ ಫ್ಲೋರ್, ಮೈದಾ, ಖಾರದ ಪುಡಿ ಶುಂಠಿ ಬೆಳ್ಳುಳ್ಳಿ ಪೇಸ್ಟ್, ಉಪ್ಪು, ಮೊಟ್ಟೆ

**ಒಗ್ಗರಣೆಗೆ:** ಎಣ್ಣೆ, ಈರುಳ್ಳಿ, ದೊಡ್ಡ ಮೆಣಸಿಕಾಯಿ, ಟೊಮ್ಯಾಟೋ ಸಾಸ್, ಸೋಯಾ ಸಾಸ್, ಚಿಲ್ಲಿ ಸಾಸ್, ಉಪ್ಪು, ಕಾರ್ನ್ ಫ್ಲೋರ್‌ಗೆ ನೀರು ಸೇರಿಸಿದ ದ್ರವ ಪೆಪ್ಪರ್ ಪೌಡರ್

**ಮಾಡುವ ವಿಧಾನ:** ಮೊದಲಿಗೆ ಒಂದು ಬೌಲ್‌ಗೆ ಚಿಕನ್, ಅದಕ್ಕೆ ಕಾರ್ನ್ ಫ್ಲೋರ್, ಮೈದಾ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಉಪ್ಪು ಹಾಗೂ ಒಂದು ಮೊಟ್ಟೆಯನ್ನು ಒಡೆದುಕೊಳ್ಳಬೇಕು. ಚೆನ್ನಾಗಿ ಕಲಸಿ ಚಿಕನ್ ಅನ್ನು ಮ್ಯಾರಿನೇಟ್ ಮಾಡಿಕೊಳ್ಳಬೇಕು. 15 ನಿಮಿಷದ ಬಳಿಕ ಒಂದು ಬಾಣಲಿಗೆ ಎಣ್ಣೆ ಹಾಕಿಕೊಂಡು ಮ್ಯಾರಿನೇಟ್ ಮಾಡಿದ ಚಿಕನ್‌ನ್ನು ಕರಿದುಕೊಳ್ಳಬೇಕು. ಇನ್ನೊಂದು ಬಾಣಲಿಗೆ ಒಗ್ಗರೆಣೆಗೆ ಸ್ವಲ್ಪ ಎಣ್ಣೆ, ಅದಕ್ಕೆ ಸಣ್ಣದಾಗಿ ಕತ್ತರಿಸಿದ ಶುಂಠಿ, ಬೆಳ್ಳುಳ್ಳಿ, ಕತ್ತರಿಸಿದ ಈರುಳ್ಳಿ, ದೊಡ್ಡ ಮೆಣಸಿಕಾಯಿ ಹಾಕಬೇಕು. ಚೆನ್ನಾಗಿ ಹುರಿದುಕೊಂಡು ಅದಕ್ಕೆ ಟೊಮ್ಯಾಟೋ ಸಾಸ್, ಸೋಯಾ ಸಾಸ್ ಹಾಗೂ ಚಿಲ್ಲಿ ಸಾಸ್ ಹಾಕಿ, ಮಿಶ್ರಣ ಮಾಡಬೇಕು. ಬಳಿಕ ಉಪ್ಪು, ಕಾರ್ನ್ ಫ್ಲೋರ್‌ಗೆ ನೀರು ಸೇರಿಸಿದ ದ್ರವ ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕಲಿಸಿದರೆ ಚಿಲ್ಲಿ ಚಿಕನ್ ತಯಾರಾಗುತ್ತದೆ.



# ಆಸ್ಟಿಯೋಪೊರೋಸಿಸ್ ಕಾಯಿಲೆ ಇದ್ದವರಲ್ಲಿ ಕ್ರಮೇಣ ಎತ್ತರ ಕಡಿಮೆಯಾಗುತ್ತಂತೆ


**ಆಸ್ಟಿಯೋಪೊರೋಸಿಸ್ ಮೂಳೆಯ ಕಾಯಿಲೆಯಾಗಿದ್ದು ಕ್ರಮೇಣ ಮೂಳೆ ಮುರಿತ, ಎತ್ತರದ ನಷ್ಟಕ್ಕೆ ಕಾರಣವಾಗಬಲ್ಲದು. ಆಸ್ಟಿಯೊಪೊರೋಸಿಸ್ ಲಕ್ಷಣಗಳು ಹೇಗಿರುತ್ತವೆ, ಇದನ್ನು ಯಾವ ರೀತಿ ತಡೆಯಬಹುದು ಎನ್ನುವುದನ್ನು ತಿಳಿಯೋಣ.**

ಆಸ್ಟಿಯೊಪೊರೋಸಿಸ್ ಮೂಳೆಗೆ ಸಂಬಂಧಿಸಿದ ಕಾಯಿಲೆಯಾಗಿದ್ದು, ಇದು ಮೂಳೆ ದುರ್ಬಲವಾಗಲು ಕಾರಣವಾಗುತ್ತದೆ. ಬೀಳುವುದು, ಬಾಗುವುದು, ಕೆಮ್ಮುವಂತಹ ಸೌಮ್ಯ ಒತ್ತಡಗಳು ಸಹ ಮೂಳೆ ಮುರಿತಕ್ಕೆ ಕಾರಣವಾಗಬಹುದು. ಆಸ್ಟಿಯೊಪೊರೋಸಿಸ್ ಸಂಬಂಧಿತ ಮುರಿತಗಳು ಸಾಮಾನ್ಯವಾಗಿ ಸೊಂಟ, ಮಣಿಕಟ್ಟು, ಬೆನ್ನುಮೂಳೆಯಲ್ಲಿ ಸಂಭವಿಸುತ್ತವೆ. ಮೂಳೆಯು ನಿರಂತರವಾಗಿ ಮುರಿದು ಬದಲಾಯಿಸಲ್ಪಡುವ ಜೀವಂತ ಅಂಗಾಂಶವಾಗಿದೆ. ಹೊಸ ಮೂಳೆಯ ರಚನೆಯು ಹಳೆಯ ಮೂಳೆಯ ನಷ್ಟದೊಂದಿಗೆ ಮುಂದುವರಿಯದಿದ್ದಾಗ ಆಸ್ಟಿಯೊಪೊರೋಸಿಸ್‌ಸಂಭವಿಸುತ್ತದೆ.

**ವ್ಯಕ್ತಿಯ ಉದ್ದ ಕಡಿಮೆಯಾಗೋದು ಹೇಗೆ?:** ಆಸ್ಟಿಯೋಪೊರೋಸಿಸ್ ಎಂಬುದು ಮೂಳೆ ಸಾಂದ್ರತೆಯ ನಷ್ಟದಿಂದಾಗಿ ದೇಹದ ಮೂಳೆ ದುರ್ಬಲವಾಗುವ ಸ್ಥಿತಿಯಾಗಿದೆ. ಆಸ್ಟಿಯೋಪೊರೋಸಿಸ್‌ನ ಕಡಿಮೆ ತಿಳಿದಿರುವ ಚಿಹ್ನೆಗಳಲ್ಲಿ ಒಂದು ಕ್ರಮೇಣ ಎತ್ತರದ ನಷ್ಟ. ಇದು ಸಾಮಾನ್ಯವಾಗಿ ಬೆನ್ನುಮೂಳೆಯಲ್ಲಿನ ಮೂಳೆ ತುಂಬಾ ದುರ್ಬಲವಾದಾಗ, ಕಾಲಾನಂತರದಲ್ಲಿ ಸಣ್ಣ ಸಂಕೋಚನ ಮುರಿತಗಳನ್ನು ಬೆಳೆಸಿಕೊಂಡಾಗ ಬೆನ್ನುಮೂಳೆಯು ಸ್ವಲ್ಪ ವಕ್ರವಾಗಿ, ವ್ಯಕ್ತಿಯು ಬಾಗಿದ ಮತ್ತು ಕುಳ್ಳನಂತೆ ಕಾಣಿಸಲಾರಂಭಿಸುತ್ತಾನೆ. ಹೆಚ್ಚಿನ ಜನರು ಈ ಸ್ಥಿತಿಯು ಈಗಾಗಲೇ ಪ್ರಗತಿ ಹೊಂದುವವರೆಗೆ ಈ ಬದಲಾವಣೆಯನ್ನು ಅರಿತುಕೊಳ್ಳುವುದಿಲ್ಲ ಎನ್ನುತ್ತಾರೆ ಬೆಂಗಳೂರಿನ ಹೆಣ್ಣೂರು ರಸ್ತೆಯ ಸ್ಪರ್ಶ ಆಸ್ಪತ್ರೆಯ ಮೂಳೆರೋಗ ತಜ್ಞ ಡಾ. ಹಿಮಾಂಶು ಸಿಂಗ್.

### ಮೂಳೆಗಳ ಮೇಲೆ ಪ್ರಭಾವ ಬೀರುವ ಅಪಾಯಕಾರಿ ಅಂಶಗಳು

- **ವಯಸ್ಸಾಗುವಿಕೆ:** ಮೂಳೆ ಸಾಂದ್ರತೆಯು ವಯಸ್ಸಾದಂತೆ ಸ್ವಾಭಾವಿಕವಾಗಿ ಕಡಿಮೆಯಾಗುತ್ತದೆ
- **ಋತುಬಂಧ:** ಈಸ್ಟ್ರೊಜೆನ್ ಇಳಿಕೆ ಮೂಳೆಗಳನ್ನು ದುರ್ಬಲಗೊಳಿಸುತ್ತದೆ
- **ಕುಟುಂಬದ ಇತಿಹಾಸ:** ಆನುವಂಶಿಕ ಅಂಶಗಳು ಅಪಾಯವನ್ನು ಹೆಚ್ಚಿಸುತ್ತವೆ
- **ಕಡಿಮೆ ಕ್ಯಾಲ್ಸಿಯಂ ಸೇವನೆ:** ಮೂಳೆಗಳು ದುರ್ಬಲವಾಗುತ್ತವೆ, ಸುಲಭವಾಗಿ ಆಗುತ್ತವೆ
- **ವಿಟಮಿನ್ ಡಿ ಕೊರತೆ:** ಕ್ಯಾಲ್ಸಿಯಂ ಹೀರಿಕೊಳ್ಳುವಿಕೆಯನ್ನು ಕಡಿಮೆ ಮಾಡುತ್ತದೆ
- **ಧೂಮಪಾನ:** ಮೂಳೆ ಕೋಶಗಳಿಗೆ ಹಾನಿ ಮಾಡುತ್ತದೆ
- **ಅತಿಯಾದ ಮದ್ಯಪಾನ:** ಮೂಳೆ ರಚನೆಗೆ ಅಡ್ಡಿಪಡಿಸುತ್ತದೆ



**ಒತ್ತಡಗಳು ಸಹ ಮೂಳೆ ಮುರಿತಕ್ಕೆ ಕಾರಣ**

**ಆಸ್ಟಿಯೊಪೊರೋಸಿಸ್ ಲಕ್ಷಣಗಳು:** ಮೂಳೆ ನಷ್ಟದ ಆರಂಭಿಕ ಹಂತಗಳಲ್ಲಿ ಸಾಮಾನ್ಯವಾಗಿ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಆದರೆ ಆಸ್ಟಿಯೊಪೊರೋಸಿಸ್ ನಿಮ್ಮ ಮೂಳೆಗಳನ್ನು ದುರ್ಬಲಗೊಳಿಸಿದ ನಂತರ, ನೀವು ಮುರಿತದ ಲಕ್ಷಣಗಳನ್ನು ಹೊಂದಿರಬಹುದು.

- **ಬೆನ್ನುಮೂಳೆಯಲ್ಲಿ ಮುರಿದ ಅಥವಾ ಕುಸಿದ ಮೂಳೆಯಿಂದ ಉಂಟಾಗುವ ಬೆನ್ನು ನೋವು.**
- **ಕಾಲಕ್ರಮೇಣ ಎತ್ತರ ನಷ್ಟ.**
- **ಬಾಗಿದ ಭಂಗಿ.**
- **ನಿರೀಕ್ಷೆಗಿಂತ ಹೆಚ್ಚು ಸುಲಭವಾಗಿ ಮುರಿಯುವ ಮೂಳೆ.**

**ಯಾರಲ್ಲಿ ಆಸ್ಟಿಯೋಪೊರೋಸಿಸ್ ಅಪಾಯ ಹೆಚ್ಚು:** ಆಸ್ಟಿಯೊಪೊರೋಸಿಸ್ ಎಲ್ಲಾ ಜನರ ಮೇಲೆ ಪರಿಣಾಮ ಬೀರುತ್ತದೆ. ಆದರೆ ವಿಶೇಷವಾಗಿ ಋತುಬಂಧವನ್ನು ಮೀರಿದ ವಯಸ್ಸಾದ ಮಹಿಳೆಯರು ಹೆಚ್ಚಿನ ಅಪಾಯವನ್ನು ಹೊಂದಿರುತ್ತಾರೆ. ಔಷಧಿಗಳು, ಆರೋಗ್ಯಕರ ಆಹಾರ ಮತ್ತು ತೂಕ ಎತ್ತುವ ವ್ಯಾಯಾಮವು ಮೂಳೆ ನಷ್ಟವನ್ನು ತಡೆಯಲು, ಈಗಾಗಲೇ ದುರ್ಬಲವಾದ ಮೂಳೆಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ.

**ಮೂಳೆ ಮುರಿತಗಳನ್ನು ತಡೆಗಟ್ಟಲು ಸಹಾಯ ಮಾಡುವ ಕ್ರಮಗಳು**

ನ್ಯಾಷನಲ್ ಇನ್ಸ್ಟಿಟ್ಯೂಟ್ ಆ ಆರ್ಥ್ರೈಟಿಸ್ ಅಂಡ್ ಮಸ್ಕ್ಯುಲೋಸ್ಕೆಲಿಟಲ್ ಅಂಡ್ ಸ್ಕಿನ್ ಡಿಸೀಸಸ್ ಆಸ್ಟಿಯೊಪೊರೋಸಿಸ್ ತಡೆಯಲು ಕೆಲವೊಂದು ವಿಧಾನಗಳ ಬಗ್ಗೆ ತಿಳಿಸಿದೆ.

- **ನಡಿಗೆಯಂತಹ ತೂಕ ಇಳಿಸುವ ವ್ಯಾಯಾಮಗಳ ಮೂಲಕ ದೈಹಿಕವಾಗಿ ಸಕ್ರಿಯರಾಗಿರಿ.**
- **ಮಧ್ಯಮ ಪ್ರಮಾಣದಲ್ಲಿ ಮದ್ಯಪಾನ ಮಾಡುವುದು.**
- **ಧೂಮಪಾನ ತ್ಯಜಿಸುವುದು**
- **ವೈದ್ಯರು ಸೂಚಿಸಿರುವ ಔಷಧಿಗಳನ್ನು ತೆಗೆದುಕೊಳ್ಳುವುದು.**
- **ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಸಮೃದ್ಧವಾಗಿರುವ ಪೌಷ್ಟಿಕ ಆಹಾರವನ್ನು ಸೇವಿಸುವುದು.**

**ಮೂಳೆಯ ಆರೋಗ್ಯವನ್ನು ಕಾಪಾಡಲು ಏನು ಮಾಡಬೇಕು:** ಮೂಳೆಯ ಆರೋಗ್ಯವನ್ನು ಕಾಪಾಡುವುದು ಬಾಲ್ಯದಿಂದಲೇ ಪ್ರಾರಂಭವಾಗಬೇಕು. ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಸಮೃದ್ಧವಾಗಿರುವ ಸಮತೋಲಿತ ಆಹಾರವು ಬಲವಾದ ಮೂಳೆಗಳನ್ನು ಕಾಪಾಡಿಕೊಳ್ಳುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ವಿಶೇಷವಾಗಿ 50 ವರ್ಷ ವಯಸ್ಸಿನ ನಂತರ ನಿಯಮಿತವಾಗಿ ಮೂಳೆ ಸಾಂದ್ರತೆಯ ತಪಾಸಣೆ ಮಾಡಿಸಿಕೊಳ್ಳುವುದು ಅಥವಾ ಅಪಾಯಕಾರಿ ಅಂಶಗಳನ್ನು ಹೊಂದಿರುವವರು ಆಸ್ಟಿಯೋಪೊರೋಸಿಸ್ ಅನ್ನು ಮೊದಲೇ ಪತ್ತೆಹಚ್ಚಲು ಮತ್ತು ತೊಡಕುಗಳನ್ನು ತಡೆಯಲು ಸಹಾಯ ಮಾಡುತ್ತದೆ. ಆಸ್ಟಿಯೊಪೊರೋಸಿಸ್ ಅನ್ನು ಮೊದಲೇ ಪತ್ತೆ ಮಾಡಿದರೆ ಗುಣಪಡಿಸಬಹುದು.






### ಚಿಂಚೋಳಿ ವನ್ಯಜೀವಿ ಧಾಮದಲ್ಲಿ ಜೀಪ್ ಸಫಾರಿ ಮತ್ತು ಬೋಟಿಂಗ್ ಗೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ

# ಚಿಂಚೋಳಿ ಮಿನಿ ಪ್ರವಾಸಿ ಸರ್ಕ್ಯೂಟ್ ಮಾಡಲು ಕ್ರಮ: ಪ್ರಿಯಾಂಕ್

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯ,ಗೊಟ್ಟಂಗೊಟ್ಟಾ,ಎತ್ತಿಪೊತ್ತ, ಮಾಣಿಕಪೂರ ಜಲಪಾತ ಸೇರಿದಂತೆ ದಟ್ಟ ಅರಣ್ಯದೊಂದಿಗೆ ವನ್ಯಜೀವಿ ತಾಣವಾಗಿರುವ ಚಿಂಚೋಳಿ ತಾಲ್ಲೂಕಾವನ್ನು ಮುಂದಿನ ಒಂದೂವರೆ ವರ್ಷದಲ್ಲಿ ಮಿನಿ ಪ್ರವಾಸಿ ಸರ್ಕ್ಯೂಟ್ ಮಾಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ತಾಲ್ಲೂಕಿನ ಚಂದ್ರಂಪಳ್ಳಿಯಲ್ಲಿ ಅರಣ್ಯ ಜೀಪ್ ಸಫಾರಿ ಹಾಗೂ ಚಂದ್ರಂಪಳ್ಳಿ ಜಲಾಶಯದಲ್ಲಿ ದೋಣಿ ವಿಹಾರ ಉದ್ಘಾಟಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಚಿಂಚೋಳಿ ಸುತ್ತಮುತ್ತವಿರುವ 8-10 ಪ್ರವಾಸಿ ತಾಣಗಳನ್ನು ಸರ್ಕ್ಯೂಟ್ ನಲ್ಲಿ ಸೇರಿಸಿ, ಪ್ರವಾಸಿಗರು ಒಂದು ದಿನದ ಪ್ಯಾಕೇಜ್ ನಡಿ ಇದನೆಲ್ಲ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು. ಕೆ.ಎಸ್.ಟಿ.ಡಿ.ಸಿ.ಯಿಂದ ಪ್ಯಾಕೇಜ್ ಟೂರ್ ವ್ಯವಸ್ಥೆ ಸಹ ಜಾರಿಗೆ ತರಲಾಗುವುದು ಎಂದರು.

ಹಾಗೂ ಸುತ್ತಮುತ್ತ ಪ್ರಾಕೃತಿಕ ತಾಣಗಳ ಸೌಂದರ್ಯ ಸವೆಯಲು ಪ್ರವಾಸಿಗರಿಗೆ ಪೂರಕವಾಗಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುತ್ತಿದೆ, ಈಗಾಗಲೆ ತೋಟಗಾರಿಕೆ ಇಲಾಖೆಯಿಂದ 6.50 ಕೋಟಿ ರೂ.ಮೊತ್ತದ ಡಿ.ಪಿ.ಆರ್.ಸಿದ್ಧಪಡಿಸಲಾಗಿದೆ. ಪ್ರವಾಸೋದ್ಯಮ,ಆರಣ್ಯ,ಕೃಷಿ, ತೋಟಗಾರಿಕೆ ಹೀಗೆ ಎಲ್ಲಾ ಇಲಾಖೆಯ ಸಮನ್ವಯದೊಂದಿಗೆ ಬ್ಲೂಪ್ರಿಂಟ್ ಸಿದ್ಧಪಡಿಸಲಾಗಿದೆ,ಶೀಘ್ರವೇ ಪ್ರವಾಸೋದ್ಯಮ ಸಚಿವರನ್ನು ಸಹ ಭೇಟಿ ಮಾಡಿ ಚರ್ಚಿಸಲಾಗುವುದು ಎಂದರು.

ಅರಣ್ಯ ಜೀಪ್ ಸಫಾರಿಗೆ 24ಲಕ್ಷ ವೆಚ್ಚದಲ್ಲಿ ಎರಡು ಕ್ಯಾಂಪರ್ ವಾಹನಗಳನ್ನು ಖರೀದಿಸಿ ಸಫಾರಿ ವಾಹನಗಳಾಗಿ ಮಾರ್ಪಡಿಸಲಾಗಿದೆ, 64 ಲಕ್ಷ ರೂ.ವೆಚ್ಚದಲ್ಲಿ ಸಫಾರಿ ರಸ್ತೆ ಅಭಿವೃದ್ಧಿ,43 ಲಕ್ಷ ರೂ. ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಗೊಟ್ಟಂಗೊಟ್ಟದಲ್ಲಿ ಎರಡು ಹೆಚ್ಚುವರಿ ಟೆಂಟ್ ಹೌಸ್ ನಿರ್ಮಿಸಲಾಗಿದೆ,14 ಲಕ್ಷ ರೂ. ವೆಚ್ಚದಲ್ಲಿ ಮನೋರಂಜನಾ ಚಟುವಟಿಕೆಗಳಿಗಾಗಿ 12 ಆಸನಗಳ ಮೋಟಾರ್ ದೋಣಿ ಮತ್ತು ಎರಡು ಪೆಡಲ್ ದೋಣಿಗಳು ಮತ್ತು ಕಯಾಕ್‌ಗಳನ್ನು ಒದಗಿಸಲಾಗಿದೆ ಎಂದರು.

ಕೆಕೆಆರ್‌ಡಿಬಿಯ ಮ್ಯಾಕ್ರೋ ಅನುದಾನದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ವಿವಿಧ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಕ್ರಮಗಳು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದರಲ್ಲಿ ಅನುಮಾನವಿಲ್ಲ,ಇಲ್ಲಿನ ಪ್ರವಾಸೋದ್ಯಮ ಹೆಚ್ಚಿದಂತೆ ಸ್ಥಳೀಯ ಆರ್ಥಿಕತೆಗೆ ಉತ್ತೇಜನ ದೊರಕುತ್ತದೆ ಮತ್ತು ಸ್ಥಳೀಯರ ಉದ್ಯೋಗಾವಕಾಶಗಳು ಹೆಚ್ಚುತ್ತದೆ ಎಂಬ ನಂಬಿಕೆ ನಮ್ಮದು ಎಂದರು.

ಪ್ರವಾಸೋದ್ಯಮದ ಈ ಬೆಳವಣಿಗೆಯಿಂದ ಸ್ಥಳೀಯ ಹೋಟೆಲ್ ಉದ್ಯಮ,ಸಣ್ಣ ವ್ಯಾಪಾರಿಗಳು ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯಲಿದೆ,ಮುಂದಿನ ಎರಡು ವರ್ಷದಲ್ಲಿ ಕಲಬುರಗಿ ಜಿಲ್ಲೆಯ ಪ್ರವಾಸೋದ್ಯಮದ ಚಿತ್ರಣವೇ ಬದಲಾಗಲಿದ್ದು,ಜಿಲ್ಲೆಯ ಆಹಾರ, ಕಲೆ ಸಂಸ್ಕೃತಿ,ಪ್ರವಾಸಿ ತಾಣಗಳನ್ನು ಪರಿಚಯಿಸುವ ಮೂಲಕ ಇದನ್ನು ಉಳಿಸಿ ಬೆಳೆಸಲು ನಮ್ಮ ಸರ್ಕಾರದ ಬದ್ಧವಾಗಿದೆ.

ಪ್ರಸಕ್ತ ವರ್ಷ ಸನ್ನತಿ, ನಾಗಾವಿ,ಮಳಖೇಡ್ ಕೋಟೆ,ಕಾಳಗಿ ಪ್ರವಾಸಿ ತಾಣಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುತ್ತಿದೆ,ಕಲಬುರಗಿ ಕೋಟೆಯಲ್ಲಿನ ನಿವಾಸಿಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬೇರೆಡೆ ಸ್ಥಳಾಂತರಿಸಲಾಗುತ್ತಿದ್ದು, ನಿವಾಸಿಗಳ ಮನವೊಲಿಸುವ ಕೆಲಸ ನಡೆದಿದೆ, ಮುಂದಿನ ಒಂದು ತಿಂಗಳಲ್ಲಿ ಅದು ಸಹ ಪೂರ್ಣವಾಗಲಿದೆ, ಪಾರಂಪರಿಕ ಕೋಟೆ ಮತ್ತೆ ತನ್ನ ಮೆರಗಿನಿಂದ ಪ್ರವಾಸಿಗರನ್ನು ಆಕರ್ಷಿಸಲಿದೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ಕೆ.ಕೆ.ಆರ್.ಟಿ.ಸಿ ಅಧ್ಯಕ್ಷ ಅರುಣಕುಮಾರ ಪಾಟೀಲ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕಲಬುರಗಿ ವಲಯದ ಅರಣ್ಯ ಸಂರಕ್ಷಣಾಧಿಕಾರಿ ಸುನೀಲ ಪನ್ವಾರ,ಜಿಪಂ.ಸಿ.ಇ.ಓ ಭಂವರ್ ಸಿಂಗ್ ಮೀನಾ,ಎಸ್.ಪಿ.ಅಡ್ಡೂರು ಶ್ರೀನಿವಾಸಲು,ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್,ಜಂಟಿ ತೋಟಗಾರಿಕೆ ನಿರ್ದೇಶಕ ಸಂತೋಷ ಇನಾಂದಾರ,ವಲಯ ಅರಣ್ಯಾಧಿಕಾರಿ ಸಂಜೀವಕುಮಾರ ಚವ್ಹಾಣ, ಮುಖಂಡರಾದ ಸುಭಾಷ ರಾಠೋಡ, ಮಾಜಿ ಶಾಸಕ ಕೈಲಾಶನಾಥ ಪಾಟೀಲ,ದೀಪಕನಾಗ್ ಪುಣ್ಯಶೆಟ್ಟಿ, ಶರಣುಪಾಟೀಲ,ಭೂನ್ಯಾಯ ಮಂಡಳಿ ನಾಮನಿರ್ದೇಶಕ ಸದಸ್ಯ ಸಂತೋಷ ಗುತ್ತೇದಾರ,ಲಕ್ಷ್ಮಣ ಆವುಂಟಿ ಸೇರಿದಂತೆ ಅರಣ್ಯ ಇಲಾಖೆಯ ಇತರೆ ಅಧಿಕಾರಿಗಳು,ಮುಖಂಡರು ಇದ್ದರು.


ಉದಯವಾಹಿನಿ ಚಿತ್ರ




ಉದಯವಾಹಿನಿ ಚಿತ್ರ

### ಜಂಗಲ್ ಲಾಡ್ಡ್ಸ್-ರೆಸಾರ್ಟ್ ಆರಂಭ:- ಇಲ್ಲಿನ ಪ್ರಕೃತಿ ಸೊಬಗನ್ನು ಆನಂದಿಸಲು ಪ್ರವಾಸಿಗರ ತಂಗಲು

**ಅನುಕೂಲವಾಗುವಂತೆ ಚಂದ್ರಂಪಳ್ಳಿಯಲ್ಲಿ ಜಂಗಲ್ ಲಾಡ್ಡ್ಸ್ ಮತ್ತು ರೆಸಾರ್ಟ್ ಆರಂಭಿಸುವ ಚಿಂತನೆ ಇದೆ, ಎಲ್ಲದಕ್ಕೂ ಪರಿಸರ ಕ್ಲಿಯರೆನ್ಸ್ ಅಗತ್ಯವಿದ್ದು,ಅದು ಸಿಕ್ಕಿದ ಮೇಲೆ ನೀಲಿ ನಕ್ಷೆ ಸಿದ್ದಪಡಿಸಿ ಇದನ್ನೆಲ್ಲ ಅನುಷ್ಠಾನಕ್ಕೆ ತರಲಾಗುವುದು ಎಂದು ಸಚಿವರು ಹೇಳಿದರು. ಬೋಟ್ ರೈಡಿಂಗ್‌ಗೆ ಪ್ರತಿ ವ್ಯಕ್ತಿಗೆ 175 ರೂ. ದರ ನಿಗದಿಪಡಿಸಿದೆ,ಇನ್ನು ಅರಣ್ಯ ಸುತ್ತುವ ಜೀಪ್ ಸಫಾರಿಗೆ ವಯಸ್ಕರಿಗೆ 450 ರೂ..ಮಕ್ಕಳಿಗೆ 200 ರೂ. ದರ ಇರಲಿದೆ,ಇದಲ್ಲದೆ, ದೂರದ ಊರುಗಳಿಂದ ಬರುವ ಪ್ರವಾಸಿಗರಿಗಾಗಿ ಜಲಾಶಯದ ಸಮೀಪವಿರುವ ಕಾಟೇಜ್ ಜೊತೆಗೆ ಹೆಚ್ಚುವರಿಯಾಗಿ ತಂಗಲು ಟೆಂಟ್ ಹೌಸ್ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಮಾಡಲಾಗುತ್ತಿದೆ ಎಂದರು.**

### ಬೋಟಿಂಗ್ ಗೆ 175 ರೂ.,ಸಫಾರಿಗೆ 450 ರೂ.

**ಉಪ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ ಪಾಟೀಲ ಮಾತನಾಡಿ, ಚಂದ್ರಂಪಳ್ಳಿ ಜಲಾಶಯದಲ್ಲಿ ಬೋಟಿಂಗ್ ನಡೆಸಲು ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು,ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ, ಬೋಟ್ ಆಪರೇಟರ್‌ಗಳಿಗೆ ಗೋವಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಾಟರ್ ಸ್ಪೋರ್ಟ್ಸ್'ಸಂಸ್ಥೆಯಿಂದ ವಿಶೇಷ ತರಬೇತಿ ಕೊಡಿಸಲಾಗಿದೆ,ಸ್ಥಳೀಯ 15 ಯುವಕರಿಗೆ ಈಜುವುದು ಸೇರಿದಂತೆ ತುರ್ತು ಸಂದರ್ಭಗಳಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು ಎಂಬ ಬಗ್ಗೆ ತರಬೇತಿ ನೀಡಲಾಗಿದೆ, ಬೋಟ್ ನಡೆಸಲು ಅಗತ್ಯವಿರುವ ಲೈಸೆನ್ಸ್ ಮತ್ತು ಇನ್ಶೂರೆನ್ಸ್ ಪ್ರಕ್ರಿಯೆಗಳು ಪೂರ್ಣಗೊಂಡಿವೆ, ಲೈಫ್ ಜಾಕೆಟ್‌ಗಳು ಮತ್ತು ಅಗ್ನಿಶಾಮಕ ಉಪಕರಣಗಳನ್ನು ಪ್ರತಿ ಬೋಟ್‌ನಲ್ಲಿ ಕಡ್ಡಾಯಗೊಳಿಸಲಾಗಿದೆ ಎಂದರು.**

---

• ಉದಯವಾಹಿನಿ, ಕೆಂಭಾವಿ

### ಶಿಷ್ಯನಿಂದ ಗುರುವಿನ ಪಾಠ: ಐನಾಪುರದ ಆದರ್ಶ ಶಾಲೆಯಲ್ಲಿ

# ಆದರ್ಶ ಜ್ಞಾನ ಮಂಥನ ಸಂಭ್ರಮ

ಶಿಕ್ಷಣ ಎನ್ನುವುದು ಕೇವಲ ಕಲಿಕೆ ಸೀಮಿತವಲ್ಲ ಅದು ಜೀವನದ ಮೌಲ್ಯಗಳನ್ನು ಅರಿಯುವ ದಾರಿ. ಈ ಆಶಯದೊಂದಿಗೆ ಕೆಂಭಾವಿ ಸಮೀಪದ ಐನಾಪುರದ ಆದರ್ಶ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಆದರ್ಶ ಜ್ಞಾನ ಮಂಥನ ಎಂಬ ವಿಶಿಷ್ಟ ಹಾಗೂ ಮಾದರಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

**ಒಂದು ದಿನದ ಶಿಕ್ಷಕರಾಗಿ ವಿದ್ಯಾರ್ಥಿಗಳು:** ಒಂದು ದಿನ ಶಿಕ್ಷಕರಾಗಿ ಶಿಕ್ಷಣದ ಮೌಲ್ಯ ತಿಳಿಯೋಣ ಎಂಬುದು ಈ ಕಾರ್ಯಕ್ರಮದ ಮೂಲ ಉದ್ದೇಶ. ಶಿಕ್ಷಕರ ಜವಾಬ್ದಾರಿ, ಬೋಧನೆಯಲ್ಲಿರುವ ಸವಾಲುಗಳು ಹಾಗೂ ಅವರು ಪಡುವ ಶ್ರಮವನ್ನು ವಿದ್ಯಾರ್ಥಿಗಳು ಸ್ವತಃ ಅನುಭವಿಸಿ ತಿಳಿಯಲಿ ಎಂಬ ಕಾರಣಕ್ಕೆ ಈ ವಿನೂತನ ಪ್ರಯೋಗ ಕೈಗೊಳ್ಳಲಾಗಿತ್ತು. ವಿದ್ಯಾರ್ಥಿಗಳು ಕೇವಲ ಶಿಕ್ಷಕರ ವೇಷ ಧರಿಸುವುದಕ್ಕೆ ಸೀಮಿತವಾಗದೆ, ಸಮಾಜಕ್ಕೆ ಅಗತ್ಯವಿರುವ ಪ್ರಮುಖ ವಿಷಯಗಳ ಬಗ್ಗೆ ಪಾಲಕರು ಹಾಗೂ ಸಹಪಾಠಿಗಳ ಮುಂದೆ ಅತ್ಯಂತ ಪರಿಣಾಮಕಾರಿಯಾಗಿ ಪಾಠ ಮಾಡಿದರು.

**ಬೋಧನೆಯ ಪ್ರಮುಖ ವಿಷಯಗಳು: ಜಲ ಸಂರಕ್ಷಣೆ:** ನೀರಿನ ಮಹತ್ವ ಹಾಗೂ ನೀರು ಮಲಿನವಾಗದಂತೆ ತಡೆಯುವ ಕ್ರಮಗಳ ಬಗ್ಗೆ ಜಾಗೃತಿ.


ಉದಯವಾಹಿನಿ ಚಿತ್ರ

**ಪರಿಸರ ರಕ್ಷಣೆ:** ಗಿಡ ಮರಗಳನ್ನು ಬೆಳೆಸುವ ಅನಿವಾರ್ಯತೆ ಮತ್ತು ಪ್ಲಾಸ್ಟಿಕ್ ಮುಕ್ತ ಸಮಾಜದ ನಿರ್ಮಾಣ.

**ಆರೋಗ್ಯ ಜಾಗೃತಿ:** ಉತ್ತಮ ಜೀವನಶೈಲಿ, ವೈಯಕ್ತಿಕ ಸ್ವಚ್ಛತೆ ಹಾಗೂ ಪೌಷ್ಟಿಕ ಆಹಾರದ ಅಗತ್ಯತೆ.

**ಶಿಕ್ಷಣದ ಮೌಲ್ಯ:** ಬದುಕಿನಲ್ಲಿ ಶಿಕ್ಷಣವು ಹೇಗೆ ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುತ್ತದೆ ಎಂಬ ಬಗ್ಗೆ ಮನದಟ್ಟು ಮಾಡಿಕೊಟ್ಟರು. ತಮ್ಮ ಮಕ್ಕಳು ವೇದಿಕೆಯ ಮೇಲೆ ಶಿಕ್ಷಕರಂತೆ ನಿಂತು ಗಂಭೀರವಾಗಿ ವಿಷಯಗಳನ್ನು ಮಂಡಿಸುತ್ತಿರುವುದನ್ನು ಕಂಡು ಪಾಲಕರು ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಯಾಕ್ತಾಪುರ ಸಿ.ಆರ್.ಪಿ ರಮೇಶ್ ವಣಿಕ್ಯಾಳ ಮಾತನಾಡಿ, ಮಕ್ಕಳಿಗೆ ಜವಾಬ್ದಾರಿಯನ್ನು ಕಲಿಸಲು ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ. ಶಿಕ್ಷಣ ಎಂದರೆ ಕೇವಲ ಅಂಕಗಳಿಕೆಯಲ್ಲ, ಅದು ವ್ಯಕ್ತಿತ್ವ ವಿಕಸನ ಎಂಬುದನ್ನು ಈ ಜ್ಞಾನ ಮಂಥನ ಸಾಬೀತುಪಡಿಸಿದೆ, ಎಂದು ಶಾಲೆಯ ಸೃಜನಶೀಲ ಪ್ರಯತ್ನವನ್ನು ಶ್ಲಾಘಿಸಿದರು.

**ಕಾರ್ಯಕ್ರಮದ ಗಣ್ಯರು:** ಕಾರ್ಯಕ್ರಮದ ಸಾನಿಧ್ಯವನ್ನು ವೇ.ಮೂ. ಶಾಂತಯ್ಯ ಸ್ವಾಮಿಗಳು ಹಾಗೂ ವೇ.ಮೂ. ಜಗದಂಡಯ್ಯ ಸ್ವಾಮಿಗಳು ವಹಿಸಿದ್ದರು. ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಿವನಗೌಡ ದೊಡ್ಡಮನಿ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಬಾಪುಗೌಡ ದೊಡ್ಡಮನಿ, ನೀಲಕಂಠರಾಯಗೌಡ ಪಾಟೀಲ್, ಶಾಂತಗೌಡ ಸಾಲವಡಗಿ, ಎಸ್.ಎಸ್. ಪಾಟೀಲ್, ಮಡು ಸಾಸನೂರ್ ಹಾಗೂ ಪತ್ರಕರ್ತ ಇಲಿಯಾಸ್ ಪಟೇಲ್ ಬಳಗಾನೂರ ಪಾಲ್ಗೊಂಡಿದ್ದರು. ಶಾಲೆಯ ಮುಖ್ಯಗುರುಗಳಾದ ಸಂಜು ದೊಡ್ಡಮನಿ, ವಿದ್ಯಾ ದೊಡ್ಡಮನಿ ಸೇರಿದಂತೆ ಶಿಕ್ಷಕ ವೃಂದ, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

---

## ಜಿಲ್ಲೆಯಲ್ಲಿ ಹ್ಯಾಟ್ರಿಕ್ ಸಾಧನೆ ಗುರಿ

• ಉದಯವಾಹಿನಿ ಜಮಖಂಡಿ

ತಾಲ್ಲೂಕಿನಲ್ಲಿ ಈ ಬಾರಿ ಒಟ್ಟು 8,818 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಬರೆಯಲಿದ್ದಾರೆ ಅದರಲ್ಲಿ 3,909 ಗಂಡು ಹಾಗೂ 4,279 ಹೆಣ್ಣು ವಿದ್ಯಾರ್ಥಿಗಳು ಸೇರಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ಹೇಳಿದರು.

ನಗರದ ಬಸವೇಶ್ವರ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಕಾಲೇಜು ಕಡಪಟ್ಟಿಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ತಾಲ್ಲೂಕಿನಲ್ಲಿ ಒಟ್ಟು 25 ಪರೀಕ್ಷಾ ಕೇಂದ್ರಗಳನ್ನು ಸಿದ್ಧಪಡಿಸಲಾಗಿದೆ. ರಬಕವಿ-ಬನಹಟ್ಟಿ ಹಾಗೂ ತೇರದಾಳ ತಾಲ್ಲೂಕಿನಲ್ಲಿ 11 ಪರೀಕ್ಷಾ ಕೇಂದ್ರಗಳಿದ್ದು 3,414 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಜಮಖಂಡಿ ತಾಲ್ಲೂಕಿನಲ್ಲಿ 14 ಪರೀಕ್ಷಾ ಕೇಂದ್ರಗಳು ಇದ್ದು, ನಗರದಲ್ಲಿ 10 ಹಾಗೂ ಗ್ರಾಮೀಣ ಭಾಗದಲ್ಲಿ ಉಳಿದ ಕೇಂದ್ರಗಳನ್ನು ಗುರುತಿಸಲಾಗಿದೆ. ಒಟ್ಟು 322 ಪರೀಕ್ಷಾ ಕೊಠಡಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಪರೀಕ್ಷೆ ಸುಸೂತ್ರವಾಗಿ ನಡೆಯಲು 25 ಮುಖ್ಯ ಅಧೀಕ್ಷಕರು, 25 ಪ್ರಶ್ನೆಪತ್ರಿಕೆ ಪಾಲಕರು, 25 ಸ್ಥಾನಿಕ ಜಾಗೃತ ದಳ, 10 ಉಪಮುಖ್ಯ ಅಧೀಕ್ಷಕರು, 25 ವೆಬ್ ಕಾಸ್ಟಿಂಗ್ ವೀಕ್ಷಕರು, 10 ಮಾರ್ಗಾಧಿಕಾರಿಗಳು, 25 ಮೊಬೈಲ್ ಸ್ವಾಧೀನಾಧಿಕಾರಿಗಳು ಸೇರಿದಂತೆ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 25 ಪರೀಕ್ಷಾ ಕೇಂದ್ರಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ 5 ಜಾಗೃತ ದಳ ತಂಡಗಳನ್ನು ರಚಿಸಲಾಗಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

---

## ಅನುದಾನ ಬಿಡುಗಡೆ ಮಾಡುವಂತೆ ಸಚಿವ ಖರ್ಗೆಗೆ ಮನವಿ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ನಾಲ್ಕು ನ್ಯಾಯಲಯ ಹಾಲ್ ಹೊಂದಿರುವ ನೂತನ ನ್ಯಾಯಾಲಯ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೋಳಿಸುವಂತೆ ತಾಲೂಕಾ ವಕೀಲರ ಸಂಘದಿಂದ ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃಧಿ,ಐಟಿಬಿಟಿ ಮತ್ತು ಕಲಬುರ್ಗಿ ಉಸ್ತುವಾರಿ ಸಚಿವ ಪ್ರೀಯಾಂಕ್ ಖರ್ಗೆಯವರಿಗೆ ಮನವಿಪತ್ರ ಸಲ್ಲಿಸಿದರು.

ಪಟ್ಟಣದ ನ್ಯಾಯಾಲಯವು ತುಂಬಾ ಹಳೆಯಾದು ನಿಜಾಮರ ಆಳ್ವಿಕೆಯಾಗಿದ್ದು ಮಳೆ ಬಂದರೆ ಸಂಪೂರ್ಣ ಸೋರುತ್ತಿದೆ, ಮತ್ತು ಶಿಥಿಲಾವ್ಯವಸ್ಥೆ ಹೊಂದಿದೆ,ಗೋಡೆಗಳು ಬೀರುಕು ಬಿಟ್ಟು ಕಲ್ಲುಗಳು ಬಿಳುತ್ತಿವೆ,ನ್ಯಾಯಾಲಯ ಕಾರ್ಯಕಲಾಪಗಳಿಗೆ ಬಹಳಷ್ಟು ತೋಂದರೆಯಾಗುತ್ತಿದೆ, ಈಗಾಗಲೇ ಹೊಸ ಕಟ್ಟಡ ನಿರ್ಮಿಸಲು ಎಲ್ಲಾ ತರಹದ ವರದಿ ಜಿಲ್ಲಾ ನ್ಯಾಯಾಲಯದಿಂದ ಉಚ್ಚ ನ್ಯಾಯಾಲಯದಿಂದ ಕಡತಗಳು ಹಣಕಾಸಿನ ಇಲಾಖೆಗೆ ತಲುಪಿವೆ, ಆದರೆ ಹಣಕಾಸಿನ ಇಲಾಖೆಯಲ್ಲಿ ಅನುಮೋದನೆಗಾಗಿ ಬಾಕಿ ಉಳಿದಿದೆ ಅದಕಾರಣ ತಾವು ಶೀಘ್ರದಲ್ಲೆ ಹಣಕಾಸಿನ ಮಂಜೂರಾತಿ ದೊರಕಿಸಿ ಕೋಡಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಶಶಿಕಾಂತ ಅಡಕಿ ಮನವಿ ಮಾಡಿದರು.

ವಕೀಲರು; ಸೂರ್ಯಕಾಂತ ಕರಣಿಕರ,ಮಲ್ಲಿಕಾರ್ಜುನ, ದೇವಿಂದ್ರಪ್ಪ, ಸುನೀಲ್,ಶರಣುಪಾಟೀಲ,ಶ್ರೀಮಂತ ಕಟ್ಟಿಮನಿ, ರಾಜೆಂದ್ರ ವರ್ಮಾ, ಚಂದ್ರಶೇಟ್ಟಿ ಜಾಧವ,ಶಮಕರ ರಾಥೋಡ,ಹಣಮಂತ ಹಿರೇಮನಿ,ವಿಜಯಕುಮಾರ ರಾಠೋಡ,ಉಮೇಶ ಪಾಟೀಲ,ದೀಲಿಪ ಚೌವಾಣ,ಅರುಣ ಹೇಗ್ಡೆ, ಸಂಪತಕುಮಾರ,ಮಾಣಿಕರಾವ ಅನೇಕರಿದ್ದರು.


ಉದಯವಾಹಿನಿ ಚಿತ್ರ

---


## ಕುಡಿಯುವ ನೀರು, ಮೇವು ಕೊರತೆಯಾಗದಂತೆ ಕ್ರಮಕ್ಕೆ ನಿರ್ದೇಶನ

• ಉದಯವಾಹಿನಿ, ಧಾರವಾಡ

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಕಳೆದ ಕೆಲವು ವರ್ಷಗಳ ಅಂಕಿ ಅಂಶ ಹಾಗೂ ಅನುಭವದ ಆಧಾರದ ಮೇಲೆ ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ಬೇಸಿಗೆ ಹೆಚ್ಚಾದಂತೆ ಜಿಲ್ಲೆಯ ಸುಮಾರು 90 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಆಗುವ ಅಂದಾಜು ಮಾಡಲಾಗಿತ್ತು. ಅದರಂತೆ ಎಂಟು ಗ್ರಾಮಗಳಲ್ಲಿ ಬಾಡಿಗೆ ಆಧಾರದಲ್ಲಿ ಖಾಸಗಿ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ತಹಶೀಲ್ದಾರ ಮತ್ತು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಕುಡಿಯುವ ನೀರಿನ ಅಭಾವ ಉಂಟಾಗದಂತೆ ಮುನ್ನಚ್ಚರಿಕೆವಹಿಸಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ನಿರ್ದೇಶಿಸಿದರು. ಅವರು ಜಿಲ್ಲಾಧಿಕಾರಿಗಳ ಕಚೇರಿಯ ನೂತನ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಜರುಗಿಸಿ, 2026ನೇ ಸಾಲಿನ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಬಗ್ಗೆ ಕೈಗೊಂಡ ಕ್ರಿಯಾ ಯೋಜನೆ ಅನುಷ್ಠಾನದ ಪ್ರಗತಿ ಪರಿಶೀಲನೆ ಮಾಡಿ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸ್ತುತವಾಗಿ ಯಾವುದೇ ಗ್ರಾಮ, ಪಟ್ಟಣಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿಲ್ಲ. ಜಾನುವಾರಗಳಿಗೆ ಅಗತ್ಯವಿದ್ದಾಗ ಬಳಸಲು ಸಾಕಷ್ಟು ಮೇವಿನ ದಾಸ್ತಾನು ಲಭ್ಯವಿದೆ. ಧಾರವಾಡ ತಾಲ್ಲೂಕಿನ ಹೊಸಟ್ಟಿ, ಮಂಡಿಹಾಳ, ಬೇಲೂರ ಮತ್ತು ಮುಗದ ಗ್ರಾಮಗಳು, ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಮತ್ತು ಅದರಗುಂಚಿ ಗ್ರಾಮಗಳು ಹಾಗೂ ಕಲಘಟಗಿ ತಾಲ್ಲೂಕಿನ ನೆಲ್ಲಿಹರವಿ ತಾಂಡಾ ಮತ್ತು ಬಿ. ಹುಲಿಕಟ್ಟಿ ಗ್ರಾಮಗಳು ಸೇರಿ ಒಟ್ಟು ಎಂಟು ಗ್ರಾಮಗಳಲ್ಲಿ ಎಂಟು ಖಾಸಗಿ ಬೊರವೆಲ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ 395 ಗ್ರಾಮಗಳಿದ್ದು, ಈ ಪೈಕಿ 90 ಗ್ರಾಮಗಳಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಅಭಾವ ಉಂಟಾದಲ್ಲಿ ಆಯಾ ಗ್ರಾಮಗಳಲ್ಲಿ ಲಭ್ಯವಿರುವ ಖಾಸಗಿ ಬೊರವೆಲ್‌ಗಳನ್ನು ಗುರುತಿಸಿ, ಮುನ್ನಚ್ಚರಿಕಾ ಕ್ರಮವಾಗಿ 186 ಖಾಸಗಿ ಕೊಳವೆಬಾವಿಗಳ ಮಾಲಿಕರೊಂದಿಗೆ ನೀರು ಪಡೆಯಲು ಒಪ್ಪಿಗೆ ಪತ್ರ ಮಾಡಿಕೊಳ್ಳಲಾಗಿದೆ ಎಂದರು.


ಉದಯವಾಹಿನಿ ಚಿತ್ರ

**ಖಾಸಗಿ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು**

---

# ಹಾಸನ ಕಾಂಗ್ರೇಸ್ ಪಾಳಯದಲ್ಲಿ ಭಿನ್ನಮತ ಸ್ಫೋಟ

## • ಅತೃಪ್ತ ಮುಖಂಡರ ಪ್ರತ್ಯೇಕ ಸಭೆ, ರಾಜ್ಯದ ನಾಯಕರ ವಿರುದ್ಧ ಅಸಮಾಧಾನ

• ಉದಯವಾಹಿನಿ, ಹಾಸನ

ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯ ಏಳು ಕ್ಷೇತ್ರದಲ್ಲೂ ವಿಜಯದ ಶಪಥ ಮಾಡಿರುವ ಕಾಂಗ್ರೆಸ್ ಹೈಕಮಾಂಡ್ ಕನಸಿಗೆ ಜಿಲ್ಲೆಯಲ್ಲಿ ನಡೆದಿರುವ ಬಣಗಳ ನಡುವಿನ ಗುಂಪುಗಾರಿಕೆ ತಣ್ಣೀರೆರಚಿದೆ. ಪ್ರತ್ಯೇಕ ಸಭೆ ಮೂಲಕ ರಾಜ್ಯ ನಾಯಕರ ವಿರುದ್ಧ ಅಸಮಾಧಾನ ಹೊರ ಹಾಕಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಜೆಡಿಎಸ್ ಭದ್ರಕೋಟೆ ಎನಿಸಿಕೊಂಡಿರುವ ಜಿಲ್ಲೆಯಲ್ಲಿ 2024ರ ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಶ್ರೇಯಸ್ ಎಂ.ಪಟೇಲ್ ಗೆಲುವು ಕಾಂಗ್ರೆಸ್ ಪಾಳೆಯಕ್ಕೆ ಹೊಸ ಉತ್ಸಾಹ ತಂದುಕೊಟ್ಟಿತ್ತು. 2028ರ ಚುನಾವಣೆಯಲ್ಲಿ ಏಳು ಕ್ಷೇತ್ರದಲ್ಲಿ ಕನಿಷ್ಠ ಐದು ಕ್ಷೇತ್ರ, ಇಲ್ಲವೇ ಎಲ್ಲಾ ಕ್ಷೇತ್ರವನ್ನು ತನ್ನದಾಗಿಸಿಕೊಳ್ಳಬೇಕೆಂಬ ಇಚ್ಛೆಯಿಂದ ಅರಸೀಕೆರೆ ಮತ್ತು ಹಾಸನದಲ್ಲಿ ಸರಕಾರದ ಸೇವೆಗಳ ಸಮರ್ಪಣೆ ಹೆಸರಿನಲ್ಲಿ ಬೃಹತ್ ಸಮಾವೇಶವನ್ನು 2025ರ ಡಿ.6ರಂದು ಆಯೋಜಿಸಿ ಶಕ್ತಿ ಪ್ರದರ್ಶನ ನಡೆಸಿತ್ತು.

ಅಷ್ಟೇ ಅಲ್ಲ, ಇನ್ನು ಮುಂದೆ ಜಿಲ್ಲೆಯ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತೇವೆ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ ಮಾಡಿದ್ದರು. ಹೀಗಾಗಿ ಕಾಂಗ್ರೆಸ್ ವಲಯದಲ್ಲಿ ಹೊಸ ಉತ್ಸಾಹ ಮೂಡಿತ್ತು. ಇದೀಗ ನಾಯಕರ ವಿರುದ್ಧ ಅಸಮಾಧಾನ ಸ್ಫೋಟಗೊಂಡಿರುವುದು ಚರ್ಚೆಗೆ ಕಾರಣವಾಗಿದೆ.

**ಕಡೆಗಣನೆಗೆ ಬೇಸರ:** ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಿದ್ದೇವೆ. ಆದರೂ ನಮ್ಮನ್ನು ಕೇಳುವವರು ಇಲ್ಲಎಂದು ಪಕ್ಷದ ಮುಖಂಡ ಎಚ್.ಕೆ.ಮಹೇಶ್ ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕಿದ್ದಾರೆ. ಜತೆಗೆ ಸರಕಾರದ ಗ್ಯಾರಂಟಿಯನ್ನೇ ನೆಚ್ಚಿಕುಳಿತರೆ 2028ರ ಚುನಾವಣೆಯಲ್ಲಿ ಗೆಲುವು ಸುಲಭವಲ್ಲ ಎಂದು ಭವಿಷ್ಯ ನುಡಿದಿರುವುದು ಕಾಂಗ್ರೆಸ್ ವಲಯದಲ್ಲಿ ಸಾಕಷ್ಟು ಚರ್ಚೆಗೀಡು ಮಾಡಿದೆ. ಇನ್ನು, ಈ ಪ್ರತ್ಯೇಕ ಸಭೆಯ ಕುರಿತು ಮಾತನಾಡಿರುವ ಹಾಸನದ ಕಾಂಗ್ರೆಸ್ ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಪಕ್ಷದಲ್ಲಿ ಯಾವ ಗುಂಪುಗಾರಿಕೆ ನಡೆದಿಲ್ಲ, ಬ್ಯಾನರ್ ಹಾಕಿಕೊಂಡ ಸಭೆ ಮಾಡದ ಕಾರಣ ಅದು ಪಕ್ಷಸ ಸಭೆಯಲ್ಲ. ಅನೌಪಚಾರಿಕವಾಗಿ ಪರಸ್ಪರ ಸೇರಿ ಊಟಮಾಡಿದ್ದಾರೆ. ನಾನು ಮಹೇಶ್ ಬಳಿ ಮಾತನಾಡಿದ್ದೇನೆ, ನನ್ನ ಹೇಳಿಕೆ ತಿರುಚಿದ್ದಾರೆ ಎಂದು ಹೇಳಿದ್ದಾರೆ. ಯಾವ ಪಕ್ಷದಲ್ಲಿ ವ್ಯತ್ಯಾಸ ಇಲ್ಲ ಹೇಳಿ, ಎಲ್ಲರೊಂದಿಗೆ ಮಾತನಾಡಿದ ಒಟ್ಟಿಗೆ ಕೊಂಡುಯ್ಯುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದ್ದಾರೆ


ಉದಯವಾಹಿನಿ ಚಿತ್ರ

**ಬಣಗಳ ನಡುವಿನ ಗುಂಪುಗಾರಿಕೆ**

- ಹಾಸನದ ಕಾಂಗ್ರೆಸ್ ಮುಖಂಡರಲ್ಲಿ ಭುಗಿಲೆದ್ದ ಅಸಮಾಧಾನ, ಪ್ರತ್ಯೇಕ ಸಭೆ ನಡೆಸಿ ಬೇಸರ ವ್ಯಕ್ತ
- ಕಾಂಗ್ರೆಸ್ ಗ್ಯಾರಂಟಿಗಳನ್ನು ನೆಚ್ಚಿ ಕುಳಿತರೆ ಮುಂಬರುವ ಚುನಾವಣೆಯನ್ನು ಗೆಲ್ಲಲು ಸಾಧ್ಯವಾಗದು ಎಂದು ಕೈ ಮುಖಂಡ ಹೇಳಿಕೆ
- ಕೈ ನಾಯಕರು ನಮ್ಮ ಸಮಸ್ಯೆಯನ್ನು ಕೇಳುತ್ತಿಲ್ಲ ಎಂದು ಬೇಸರ

### ಪಕ್ಷ ಒಂದು, ಹಲವು ಬಾಗಿಲು

**ಸಮಾವೇಶ ಮುಗಿದು ಮೂರು ತಿಂಗಳಲ್ಲೇ ಜಿಲ್ಲಾ ಕಾಂಗ್ರೆಸ್‌ನ ಪ್ರಮುಖ ಮುಖಂಡರು ದಿಢೀರ್ ಎಂದು ಪ್ರತ್ಯೇಕ ಸಭೆ ನಡೆಸಿದ್ದಾರೆ. ಈ ಮೂಲಕ ರಾಜ್ಯ ನಾಯಕರು ಹಾಗೂ ಸಂಸದರ ವಿರುದ್ಧ ಮುನಿಸು ಹೊರ ಹಾಕಿದ್ದಾರೆ. ಇದು ಕೈಪಾಳೆಯದಲ್ಲಿ ಒಂದು ರೀತಿ ಮನೆಯೊಂದು ಬಾಗಿಲು ಹಲವು ಎಂಬಂತಾಗಿದ್ದು, ನಿಷ್ಠಾವಂತ ಕಾರ್ಯಕರ್ತರು ದಿಕ್ಕು ತೋಚದಂತಾಗಿದ್ದಾರೆ.**

### ಮುಖಂಡರ ವಿರುದ್ಧಮುನಿಸು

**ರಾಜ್ಯ ನಾಯಕರಲ್ಲಿ ಪಕ್ಷ ಸಂಘಟಿಸುವ ಶಕ್ತಿ ಯಾರಿಗೂ ಇಲ್ಲ. ಜಿಲ್ಲೆಯ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರನ್ನು ಕೇಳಿದರೆ ಕಾರ್ಯಕರ್ತರ ಅಹವಾಲು ಇದ್ದರೆ ತಂದುಕೊಡಿ, ಕಾನೂನು ವ್ಯಾಪ್ತಿಯಲ್ಲಿ ಇದ್ದರೆ ಮಾಡಿಕೊಡುತ್ತೇನೆ ಎನ್ನುತ್ತಾರೆ. ಸಿದ್ದರಾಮಯ್ಯ ಅವರ ಬಳಿಗೆ ಹೋದರೆ ಕರೆಸಿ ಮಾತನಾಡುತ್ತೇವೆ ಎನ್ನುತ್ತಾರೆ ಹೊರತು ಇನ್ನೇನು ಆಗದು ಎಂಬ ಅಸಮಾಧಾನ ಹೊರಹಾಕಿದ್ದಾರೆ. ಈ ಎಲ್ಲಾ ಸಂಗತಿಯನ್ನು ಗಮನಿಸಿದರೆ ಪಕ್ಷದಲ್ಲಿ ರಾಜ್ಯಮಟ್ಟದ ಮುಖಂಡರ ವಿರುದ್ಧವೇ ಮುನಿಸಿಕೊಂಡಂತಿದೆ.**

---

## ಬಾಗಲಕೋಟೆಯಲ್ಲಿ ಮೇಟಿ ಕುಟುಂಬಕ್ಕೆ ಟಿಕೆಟ್: ಸತೀಶ ಜಾರಕಿಹೊಳಿ

• ಉದಯವಾಹಿನಿ ಬೆಳಗಾವಿ

ಶಾಸಕ ಎಚ್.ವೈ.ಮೇಟಿ ನಿಧನದಿಂದ ತೆರವಾಗಿರುವ ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಉಪಚುನಾವಣೆಗೆ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಮೇಟಿ ಕುಟುಂಬದವರಿಗೆ ಟಿಕೆಟ್ ಕೊಡುತ್ತೇವೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಉಪಚುನಾವಣೆಯನ್ನು ಗೆಲ್ಲಲು ಎಲ್ಲಾ ತಯಾರಿ ಪೂರ್ಣಗೊಂಡಿದೆ. ಪಕ್ಷದ ಹೈಕಮಾಂಡ್ ಹಾಗೂ ಕುಟುಂಬದವರ ನಿರ್ಧಾರ ಆಧರಿಸಿ, ಮೇಟಿ ಕುಟುಂಬದ ಒಬ್ಬರಿಗೆ ಟಿಕೆಟ್ ನೀಡುತ್ತೇವೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಬಾಗಲಕೋಟೆಯಲ್ಲಿ ಸಚಿವ ಆರ್.ಬಿ.ತಿಮ್ಮಾಪುರ ಮಾತನಾಡಿ, ಉಪಚುನಾವಣೆಗೆ ಸ್ಪರ್ಧಿಸಲು ಸಾಕಷ್ಟು ಅಭ್ಯರ್ಥಿಗಳಿದ್ದಾರೆ. ಬೇರೆಯವರಿಗೆ ಟಿಕೆಟ್ ನೀಡುವ ಪ್ರಶ್ನೆಯೇ ಇಲ್ಲ. ಸಿ.ಎಂ., ಕೆಪಿಸಿಸಿ ಅಧ್ಯಕ್ಷ, ಹೈಕಮಾಂಡ್ ಚರ್ಚಿಸಿ, ಅಭ್ಯರ್ಥಿ ಹೆಸರು ಅಂತಿಮವಾಗಲಿದೆ' ಎಂದರು.

## ಚಿನ್ನದ ಸರ ಕಳವು: ಠಾಣೆ ಬಳಿಗೆ ಬಸ್ ಕರೆತಂದ ಮಹಿಳೆ

• ಉದಯವಾಹಿನಿ ಹಾವೇರಿ

ಪ್ರಯಾಣದ ಸಂದರ್ಭದಲ್ಲಿ ಯಾರೋ ನನ್ನ ಚಿನ್ನದ ಸರ ಕದ್ದಿದ್ದಾರೆ ಎಂದು ಆರೋಪಿಸಿದ ಮಹಿಳೆಯೊಬ್ಬರು, ಸಹ ಪ್ರಯಾಣಿಕರಿದ್ದ ಬಸ್ಸಿನ ಸಮೇತ ಠಾಣೆಗೆ ಬಂದು ಪೊಲೀಸರಿಗೆ ದೂರು ನೀಡಿದ್ದಾರೆ.

ಹಾನಗಲ್ ತಾಲ್ಲೂಕಿನ ಹಿರೇಬಾಸೂರು ಗ್ರಾಮದ ಮೀನಾಕ್ಷಿ ಅವರು ಅಡವಿಟ್ಟಿದ್ದ ಚಿನ್ನ ಬಿಡಿಸಿಕೊಂಡು ತಮ್ಮೂರಿಗೆ ಹೊರಟಿದ್ದರು. ವಾಕರಸಾಸಂ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಅವರ ಪರ್ಸ್ ನಲ್ಲಿದ್ದ 10 ಗ್ರಾಂ ಚಿನ್ನದ ಸರವನ್ನು ಯಾರೋ ಕಳ್ಳರು ಕದ್ದಿದ್ದರು. ಬಸ್‌ನಲ್ಲಿ ಹುಡುಕಾಡಿದ್ದ ಮೀನಾಕ್ಷಿ ಅವರಿಗೆ ಸರ ಸಿಕ್ಕಿರಲಿಲ್ಲ. ಸಹ ಪ್ರಯಾಣಿಕರನ್ನು ವಿಚಾರಿಸಿದಾಗ, ಯಾರೊಬ್ಬರೂ ಪ್ರತಿಕ್ರಿಯೆ ನೀಡಿರಲಿಲ್ಲ. ನನ್ನ ಚಿನ್ನದ ಸರವನ್ನು ಬಸ್‌ನಲ್ಲಿರುವವರೇ ಕಳ್ಳತನ ಮಾಡಿದ್ದಾರೆ ಎಂದು ಆರೋಪಿಸಿದ್ದ ಮಹಿಳೆ, ಪೊಲೀಸ್ ಠಾಣೆಗೆ ಹೋಗೋಣ ಚಾಲಕ ಹಾಗೂ ನಿರ್ವಾಹಕರಿಗೆ ಹೇಳಿದ್ದರು. ಅದಕ್ಕೆ ಒಪ್ಪಿದ್ದ ಚಾಲಕ, ಮಹಿಳೆ ಹಾಗೂ ಸಹ ಪ್ರಯಾಣಿಕರ ಸಮೇತ ಹಾವೇರಿ ಶಹರ ಠಾಣೆಗೆ ಬಸ್ ತಂದಿದ್ದರು. ಠಾಣೆಯಲ್ಲಿದ್ದ ಪೊಲೀಸರು, ಮಹಿಳೆಯ ದೂರು ಆಲಿಸಿದರು. ಸಹ ಪ್ರಯಾಣಿಕರ ಪರಿಶೀಲನೆ ನಡೆಸಿದರು. ಆದರೆ, ಯಾವುದೇ ಚಿನ್ನದ ಸರ ಸಿಕ್ಕಿಲ್ಲ.

## ಪಹಣಿಗೆ ಹೆಸರು ಸೇರಿಸಲು ಲಂಚ ಪಡೆಯುತ್ತಿದ್ದ ವಿಎ ಲೋಕಾ ಬಲೆಗೆ

• ಉದಯವಾಹಿನಿ ಜೊಯಿಡಾ

ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿ ಪಹಣಿಯಲ್ಲಿ ಹೆಸರು ಸೇರಿಸಲು ಲಂಚ ಪಡೆಯುತ್ತಿದ್ದ, ತಾಲ್ಲೂಕಿನ ರಾಮನಗರ ಗ್ರಾಮ ಆಡಳಿತ ಅಧಿಕಾರಿ ಸಂತೋಷ ಮ್ಯಾಗೇರಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಜಗಲಪೇಟ ನಿವಾಸಿ ಸಂದೇಶ ಗುರ್ಜರ್ ಜಮೀನಿನ ದಾಖಲೆಯಲ್ಲಿ ಹೆಸರು ಸೇರಿಸಲು ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಸಂತೋಷ 18 ಸಾವಿರ ಲಂಚ ಕೇಳಿದ್ದರು. ನಾಡ ಕಚೇರಿಯಲ್ಲಿ 13 ಸಾವಿರ ಲಂಚ ಪಡೆಯುವಾಗ, ಸಿಕ್ಕಿಬಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ. ಲೋಕಾಯುಕ್ತ ಸಿಪಿಐ ವಿನಾಯಕ ಬಿಲ್ಲವ ಎಂಬುವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

## ಕಾಳಸಂತೆಯಲ್ಲಿ ಎಲ್‌ಪಿಜಿ ಕ್ರಮ ಎಂದ ಜಿಲ್ಲಾಧಿಕಾರಿ

• ಉದಯವಾಹಿನಿ ಧಾರವಾಡ

ಕಾಳಸಂತೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿ ನೂತನ ಸಭಾಂಗಣದಲ್ಲಿ ನಡೆದ ಎಲ್‌ಪಿಜಿ ತಯಾರಕರು, ಹೋಟೆಲ್ ಮಾಲೀಕರು ಮತ್ತು ಅನಿಲ ಏಜೆನ್ಸಿಗಳ ಪ್ರತಿನಿಧಿಗಳ ಸಭೆಯಲ್ಲಿ ಅವರು ಮಾತನಾಡಿದರು. ಗೃಹಬಳಕೆಯ ಸಿಲಿಂಡರ್ ಅನ್ನು ಒಮ್ಮೆ ಬುಕ್ ಮಾಡಿದ ನಂತರ ಮತ್ತೊಮ್ಮೆ ಬುಕ್ ಮಾಡಲು ನಗರ ಪ್ರದೇಶದ ಗ್ರಾಹಕರಿಗೆ 25 ದಿನ ಮತ್ತು ಗ್ರಾಮೀಣ ಭಾಗದ ಗ್ರಾಹಕರಿಗೆ 45 ದಿನ ನಿಗದಿಪಡಿಸಲಾಗಿದೆ. ವದಂತಿಗಳಿಗೆ ಕಿಗೊಡಬಾರದು. ಅವಸರಪಡದೆ ಸಹಕಾರ ನೀಡಬೇಕು ಎಂದರು. ಸರ್ಕಾರದ ನಿರ್ದೇಶನದಂತೆ ಗ್ರಾಹಕರಿಗೆ ಸಿಲಿಂಡರ್ ತರಿಸಲಾಗುತ್ತಿದೆ. ಸಿಲಿಂಡರ್‌ಗಳ ತರಣೆಯಲ್ಲಿ ವೈದ್ಯಕೀಯ, ಶಾಲಾ-ಕಾಲೇಜು, ಅಂಗನವಾಡಿ, ವಿದ್ಯಾರ್ಥಿನಿಲಯ, ಇಂದಿರಾ ಕ್ಯಾಂಟೀನ್‌ಗಳಿಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

## ಮಾ.18ರಿಂದ ಎಸ್‌ಎಸ್‌ಎಲ್ ಪರೀಕ್ಷೆ, ಪಾರದರ್ಶಕತೆಗೆ ಒತ್ತು:ಡಿಸಿ

• ಉದಯವಾಹಿನಿ ಶಿವಮೊಗ್ಗ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಶಾಂತಿಯುತ ಮತ್ತು ಪಾರದರ್ಶಕವಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಸೂಚನೆ ನೀಡಿದರು. ನಗರದ ಕುವೆಂಪು ರಂಗಮಂದಿರದಲ್ಲಿ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯುತ್ತಿರುವ ಎಸ್‌ಎಸ್‌ಎಲ್ ಸಿ ಪರೀಕ್ಷೆಯ ಪೂರ್ವಸಿದ್ಧತೆ ಕುರಿತು ಚರ್ಚಿಸಲು ಕರೆದಿದ್ದ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಮಾರ್ಚ್ 18 ರಿಂದ ಏಪ್ರಿಲ್ 4ರವರೆಗೆ ಜಿಲ್ಲೆಯ ಒಟ್ಟು 79 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತದೆ. ಭದ್ರಾವತಿ 15, ಹೊಸನಗರ 07, ಸಾಗರ 09, ಶಿಕಾರಿಪುರ 11, ಶಿವಮೊಗ್ಗ 20, ಸೊರಬ 10 ಮತ್ತು ತೀರ್ಥಹಳ್ಳಿ 07 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರು, ಸೂಕ್ತ ಆಸನ ವ್ಯವಸ್ಥೆ ಮಾಡಬೇಕು. ಒತ್ತಡ ರಹಿತ ವಾತಾವರಣ ನಿರ್ಮಿಸಬೇಕು. ಎಲ್ಲಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ವೆಬ್ ಕಾಸ್ಟಿಂಗ್ ಪ್ರಕ್ರಿಯೆ, ಇಂಟರ್‌ನೆಟ್ ವ್ಯವಸ್ಥೆ, ಯುಪಿಎಸ್ ಕಾರ್ಯನಿರ್ವಹಣೆಯ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. 31 ಮಾರ್ಗ ರಚಿಸಿ, 79 ಸ್ಥಾನಿಕ ಜಾಗೃತ ದಳದ ಅಧಿಕಾರಿಗಳ ನೇಮಕ ಮಾಡಲಾಗಿದೆ. ವಿದ್ಯಾರ್ಥಿಗಳು ಸುಸೂತ್ರವಾಗಿ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಲು ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಒದಗಿಸುವಂತೆ ಹಾಗೂ ಪರೀಕ್ಷಾ ಕೇಂದ್ರಗಳಿಗೆ ಅಗತ್ಯ ಪೊಲೀಸ್ ಬಂದೋಬಸ್ತ್‌ಗೆ ಮನವಿ ಮಾಡಲಾಗಿದೆ ಎಂದರು.

## ದಿನ ಭವಿಷ್ಯ

| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ**: ನಿಮ್ಮ ಕುಟುಂಬದೊಂದಿಗೆ ಸಾಮಾಜಿಕ ಚಟುವಟಿಕೆ ಎಲ್ಲರನ್ನೂ ಆರಾಮವಾಗಿ, ಆಹ್ಲಾದಕರ ಮನಸ್ಥಿತಿಯಲ್ಲಿಡುತ್ತದೆ. ಕೆಲವರಿಗೆ ಸುಂದರ ಉಡುಗೊರೆಗಳು ಮತ್ತು ಹೂಗಳಿಂದ ತುಂಬಿದ ಪ್ರಣಯದ ಸಂಜೆ.

**ವೃಷಭ**: ಮಕ್ಕಳ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುವುದಿಲ್ಲ ಹಾಗೂ ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ.

**ಮಿಥುನ**: ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.

**ಕರ್ಕಾಟಕ**: ನಿಮ್ಮ ಕುಟುಂಬದ ಜೊತೆ ಕಟ್ಟುನಿಟ್ಟಾಗಿ ವರ್ತಿಸಬೇಡಿ ಇದು ಶಾಂತಿ ಭಂಗವುಂಟುಮಾಡಬಹುದು. ಇಡೀ ಬ್ರಹ್ಮಾಂಡದ ಭಾವಪರವಶತೆ ಪ್ರೀತಿಯಲ್ಲಿರುವವರ ನಡುವೆ ನಡೆಯುತ್ತದೆ. ನೀವು ಅದೃಷ್ಟವಂತರು.

**ಸಿಂಹ**: ಶಿಶುವಿನ ಅನಾರೋಗ್ಯ ನಿಮ್ಮನ್ನು ವ್ಯಸ್ತವಾಗಿಡುತ್ತದೆ. ನೀವು ತಕ್ಷಣ ಗಮನ ನೀಡುವ ಅಗತ್ಯವಿರುತ್ತದೆ. ನಿಮ್ಮಿಂದ ಸ್ವಲ್ಪ ಉದಾಸೀನತೆಯೂ ಸಮಸ್ಯೆಯನ್ನು ಉಲ್ಬಣಗೊಳಿಸುವುದರಿಂದ ಸಲಹೆ ತೆಗೆದುಕೊಳ್ಳಿ.

**ಕನ್ಯಾ**: ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು.

**ತುಲಾ**: ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ.

**ವೃಶ್ಚಿಕ**: ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

**ಧನಸ್ಸು**: ಇಂದು ನಿಮ್ಮ ಸಂಗಾತಿ ಮದುವೆಯ ಬಗ್ಗೆ ನಿಮ್ಮೊಂದಿಗೆ ಮಾತನಾಡಬಹುದು. ಅಂತಹ ಪರಿಸ್ಥಿತಿಯಲ್ಲಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ನೀವು ಪರಿಗಣಿಸಬೇಕು.

**ಮಕರ**: ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು.

**ಕುಂಭ**: ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

**ಮೀನ**: ಸಂತೋಷದ ಚೈತನ್ಯದಾಯಕ – ಪ್ರಿಯವಾದ ಚಿತ್ತದ – ನಿಮ್ಮ ಖುಷಿಯ ಸ್ವಭಾವ ನಿಮ್ಮ ಸುತ್ತಲಿನವರಿಗೆ ಸಂತೋಷ ಮತ್ತು ಖುಷಿಯನ್ನು ತರುತ್ತದೆ. ಪ್ರೇಮಜೀವನವು ನಿಮ್ಮನ್ನು ಆಶೀರ್ವದಿಸಿರುವಂತೆ ತೋರುತ್ತದೆ.

### ಕೆಂಭಾವಿಯ ಮಾನವೀಯತೆ: ಬಿಸಿಲ ಬೇಗೆಯಲ್ಲಿ ಪಕ್ಷಿಗಳಿಗೆ ಆಸರೆಯಾದ ಇಲ್ಯಾಸ್ ಪಟೇಲ್

# ತ್ಯಾಜ್ಯ ಬಾಟಲಿಗಳಲ್ಲೇ ಹಕ್ಕಿಗಳಿಗೆ ಜಲದಾನ

• ಉದಯವಾಹಿನಿ ಬೆಂಗಳೂರು /ಯಾದಗಿರಿ

ನೋಡ್ರಿಪ್ಪಾ... ಬಿಸಿಲು ಅಂದ್ರ ಬಿಸಿಲು, ಮೈ ಸುಡಾಕತ್ತೈತಿ! ನಮಗ ಹಂಗಾದ್ರ, ಆ ಬಾಯಿ ಇಲ್ಲದ ಮೂಕ ಜೀವಿಗಳ ಪಾಡೇನು? ಹೌದು, ಈಗ ರಾಜ್ಯದಾದ್ಯಂತ ಸೂರ್ಯದೇವ ಕೆಂಡ ಕಾರಾಕತ್ತಾನ. ಮೈಯಾಗ ನೀರೆಲ್ಲಾ ಆವಿಯಾಗಿ ಹೋಗೋ ಹಂಗ ಉರಿ ಬಿಸಿಲು. ಮನುಷ್ಯರಾದ ನಾವೇನೋ ಫ್ರಿಜ್ಜಿನಾಗಿದ್ದೋ ಇಲ್ಲಾ ಮಡಿಕೆಯಾಗಿದ್ದೋ ತಣ್ಣಗಿನ ನೀರು ಕುಡಿದು ದಾಹ ತಣಿಸ್ಕೊತೀವಿ. ಆದ್ರ ಆಕಾಶದಾಗ ಹಾರಾಡೋ ಹಕ್ಕಿ-ಪಕ್ಷಿಗಳು, ದಾರ್ಯಾಗ ಅಡ್ಡಾಡೋ ಕುರಿ-ಕೋಳಿ, ಆಕಳು-ಕರುಗಳು ನೀರಿಲ್ಲದ ಬಸವಳಿದು ಹೋಗ್ಯಾವ. ಇಂತಾ ಹೊತ್ತಿನಾಗ ನಮ್ಮ ಉದಯ ವಾಹಿನಿ ಪತ್ರಿಕೆಯ ರಾಜ್ಯ ವಿಶೇಷ ವರದಿಗಾರರಾದ ಯಾದಗಿರಿ ಜಿಲ್ಲೆಯ ಇಲ್ಯಾಸ್ ಪಟೇಲ್ ಬಳಗಾನೂರ ಅವರು ಮಾಡೋ ಕೆಲಸ ನೋಡಿದ್ರ ಇವ್ರಲ್ವಾ ನಿಜವಾದ ಮನುಷ್ಯ ಅನ್ನೋದು ಅಂತ ಅನಿಸದೇ ಇರದು.


ಉದಯವಾಹಿನಿ ಚಿತ್ರ


ಉದಯವಾಹಿನಿ ಚಿತ್ರ

ವಿಶಿಷ್ಟ ಪರಿಸರ ಸೇವೆ


ಉದಯವಾಹಿನಿ ಚಿತ್ರ

> ನೋಡ್ರಿ, ಪ್ರಕೃತಿ ನಮಗ ಎಷ್ಟೋ ಕೊಡತೈತಿ. ಆದ್ರ ನಾವು ಅದನ್ನ ನಾಶ ಮಾಡಾಕತ್ತೀವಿ. ಈ ಮೂಕ ಜೀವಿಗಳನ್ನ ಉಳಿಸೋದು ನಮ್ಮೆಲ್ಲರ ಕರ್ತವ್ಯ. ನಾನು ಮಾಡೋದು ಸಣ್ಣ ಕೆಲಸ ಇರಬಹುದು, ಆದ್ರೆ ಇದನ್ನ ನೋಡಿ ಮತ್ ಹತ್ತು ಮಂದಿ ತಮ್ಮ ಮನೆಯ ಮ್ಯಾಲೆ ಪಕ್ಷಿಗಳಿಗೆ ನೀರು ಇಟ್ಟರೆ ಅಷ್ಟೇ ಸಾಕು.
> -ಇಲ್ಯಾಸ್ ಪಟೇಲ್ ಬಳಗಾನೂರ (ಪ್ರಾಣಿಪಕ್ಷಿಗಳ ಪ್ರೇಮಿ )



## ನೀವೇನ್ ಮಾಡಬಹುದು?

- ಇಲ್ಯಾಸ್ ಪಟೇಲ್ ಅವರ ಹಾದಿಯಲ್ಲೇ ನಾವು ಸಣ್ಣ ಹೆಜ್ಜೆ ಇಡಬಹುದು:
- ಮನೆಯ ಮುಂದೆ ಅಥವಾ ತಾರಸಿಯ ಮೇಲೆ ಒಂದು ಮಣ್ಣಿನ ಪಾತ್ರೆಯಾಗ ನೀರು ಇಡಿರಿ.
- ಬಿಸಿಲು ಜಾಸ್ತಿ ಇರೋದ್ರಿಂದ ಪಕ್ಷಿಗಳಿಗೆ ಸ್ವಲ್ಪ ಧಾನ್ಯ ಹಾಕೋದನ್ನ ಮರಿಬೇಡ್ರಿ.
- ನಮ್ಮ ಸುತ್ತಮುತ್ತಲಿನ ಜಲಮೂಲಗಳನ್ನ ಗಲೀಜು ಮಾಡಬೇಡ್ರಿ.

**ಬತ್ತಿದ ಹಳ್ಳ-ಕೊಳ್ಳ, ಕಂಗಾಲಾದ ಹಕ್ಕಿಗಳು:** ಹಿಂದೆಲ್ಲಾ ಹಳ್ಳ, ಕೊಳ್ಳ, ಕೆರೆಗಳು ತುಂಬಿ ತುಳುಕಾಡ್ತಿದ್ವು. ಎಲ್ಲೆಂದ್ರ ಅಲ್ಲಿ ಹಕ್ಕಿಗಳು ನೀರು ಕುಡೀತಿದ್ವು. ಆದ್ರ ಈಗ ಮಳೆಗಾಲದಾಗೂ ಮಳೆ ಇಲ್ಲದಂಗ ಆಗೈತಿ. ಮ್ಯಾಲಾಗಿ ಗಿಡಮರಗಳನ್ನ ಕಡಿದು ಬರೀ ಸಿಮೆಂಟ್ ಕಾಡು ಮಾಡ್ಕೊಂಡಿವಿ. ಇಲ್ಯಾಸ್ ಪಟೇಲ್ ಅವರು ಇದನ್ನ ಮನಗಂಡು, ನಮ್ಮೂರ ಪಕ್ಷಿಗಳು ನೀರಿಲ್ಲದ ಸಾಯಬಾರದು ಅಂತ ಒಂದು ಸಂಕಲ್ಪ ಮಾಡ್ಯಾರ. ಸೂರ್ಯ ನೆತ್ತಿ ಮ್ಯಾಗ ಬರೋ ಹೊತ್ತಿಗೆ ಇಲ್ಯಾಸ್ ಪಟೇಲ್ ಅವರು ತಮ್ಮ ಕೆಲಸ ಶುರು ಮಾಡ್ತಾರ.

**ಜೀವ ಸಂಕುಲದ ಉಳಿವಿಗೆ ನೀರು:** ಬಾಯಾರಿದ ಹಕ್ಕಿಗಳಿಗೆ ಅಕ್ಕರೆಯಿಂದ ನೀರುಣಿಸುವುದು.

**ಪ್ಲಾಸ್ಟಿಕ್ ಮುಕ್ತ ಪರಿಸರ:** ಜನರು ರಸ್ತೆಯಾಗ ಬಿಸಾಕಿದ ವೇಸ್ಟ್ ಪ್ಲಾಸ್ಟಿಕ್ ಬಾಟಲಿಗಳನ್ನ ಸಂಗ್ರಹಿಸಿ, ಅವುಗಳನ್ನೇ ಪಕ್ಷಿಗಳ ಕುಡಿಯುವ ನೀರಿನ ಪಾತ್ರೆಗಳನ್ನಾಗಿ ಮಾಡ್ಯಾರ.

**ಇಲ್ಯಾಸ್ ಪಟೇಲ್ ಅವರ 'ಬಾಟಲಿ' ಕಾಯಕ:** ಸಾರ್ವಜನಿಕರು ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲಿಗಳನ್ನ ಚಂದಾಗಿ ಕತ್ತರಿಸಿ, ಅವುಗಳಿಗೆ ದಾರ ಕಟ್ಟಿ, ಗಿಡಗಳಿಗೆ ಅಥವಾ ಕಂಬಗಳಿಗೆ ತೂಗು ಹಾಕ್ತಾರ. ಅದ್ರಾಗ ದಿನಾ ಸ್ವಚ್ಛವಾದ ನೀರು ತುಂಬಿಸ್ತಾರ. ಇದನ್ನು ಕಂಡು ಹಕ್ಕಿಗಳು ಗುಂಪು ಗುಂಪಾಗಿ ಬಂದು ದಾಹ ತಣಿಸಿಕೊಳ್ಳುವ ನೋಟವನ್ನ ನೋಡೋದೇ ಒಂದು ಆನಂದ.

**ಸಮಾಜಕ್ಕೊಂದು ಮಾದರಿ ಈ ಪಕ್ಷಿ ಪ್ರೇಮಿ:** ಇವತ್ತು ನಾವು ಬರೀ ನಮಗೇನು ಸಿಗತೈತಿ ಅಂತ ಯೋಚನೆ ಮಾಡ್ತೀವಿ. ಆದ್ರೆ ಇಲ್ಯಾಸ್ ಪಟೇಲ್ ಅವರು ಯಾವುದೇ ಪ್ರಚಾರದ ಹಂಬಲ ಇಲ್ಲದ, ತಾನು ಮಾಡುವ ಪುಟ್ಟ ಸೇವೆಯಿಂದ ಪರಿಸರ ಸಮತೋಲನ ಕಾಪಾಡಾಕತ್ತಾರ. ಇವರ ಈ ಮಾನವೀಯ ಕಾರ್ಯಕ್ಕೆ ಕೆಂಭಾವಿ ಪಟ್ಟಣದ ಜನರೆಲ್ಲಾ ಸೈ ಅಂದಾರ. ಇವರನ್ನ ನೋಡಿ ಈಗ ಊರಿನ ಎಷ್ಟೋ ಯುವಕರು ಕೂಡ ತಮ್ಮ ಮನೆಯ ತಾರಸಿ ಮೇಲೆ, ಗಿಡಗಳ ಮೇಲೆ ಹಕ್ಕಿಗಳಿಗೆ ನೀರು ಇಡಾಕ ಶುರು ಮಾಡ್ಯಾರ. ಬರಗಾಲದ ಈ ಸುಡು ಬಿಸಿಲಿನಲ್ಲಿ ಇಲ್ಯಾಸ್ ಪಟೇಲ್ ಅವರ ಈ ನೀರ ಸೇವೆ ನಿಜಕ್ಕೂ ಎಲ್ಲರಿಗೂ ಪ್ರೇರಣೆ. ಇವರ ಈ ಪರಿಸರ ಕಾಳಜಿ ಹಿಂಗೇ ಮುಂದುವರಿಯಲಿ, ಗಿರಿನಾಡಿನ ಪಕ್ಷಿಗಳು ಸಂಭ್ರಮದಿಂದ ಹಾರಾಡಲಿ ಅನ್ನೋದೇ ನಮ್ಮ ಆಶಯ.

## ಗೋಡಂಬಿ ಬೆಳೆಯನ್ನು ಬಂಜರು ಭೂಮಿಯಲ್ಲಿ ಬೆಳೆಯಲು ಸಲಹೆ

• ಉದಯವಾಹಿನಿ ಬೀದರ್

ಬಂಗಾರದ ಬೆಳೆ ಎಂದೇ ಕರೆಯಲ್ಪಡುವ ಗೋಡಂಬಿ ಬೆಳೆಯನ್ನು ರೈತರು ಕಪ್ಪು ಮಣ್ಣಿನಲ್ಲಿ ಬೆಳೆಯದೆ, ಕೆಂಪು ಮಣ್ಣಿನಲ್ಲಿ ಮತ್ತು ಬಂಜರು ಭೂಮಿಯಲ್ಲಿ ಮಾತ್ರ ಬೆಳೆಯಬೇಕು. ಇದನ್ನು ಬೆಳೆಯಲು ತೋಟಗಾರಿಕೆ ಇಲಾಖೆಯ ಸಹಾಯ ಸಹಕಾರ ಮತ್ತು ತೋಟಗಾರಿಕೆ ವಿಜ್ಞಾನಿಗಳ ತಾಂತ್ರಿಕ ಸಲಹೆ ಪಡೆದು ಹೆಚ್ಚಿನ ಲಾಭ ಪಡೆಯಬೇಕೆಂದು ಬೀದರ ತೋಟಗಾರಿಕಾ ಕಾಲೇಜಿನ ಡೀನ್ ಡಾ.ಎಸ್.ವಿ.ಪಾಟೀಲ್ ಹೇಳಿದರು.

ಅವರು ಬೀದರ ತಾಲ್ಲೂಕಿನ ಕಮಠಾಣಾ ಗ್ರಾಮದ ನಾಗನಾಥರಾವ ನಿಡೋದೆ ಅವರ ಗೋಡಂಬಿ ಹೊಲದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಅಡಿಯಲ್ಲಿ ಗೋಡಂಬಿ ಬೆಳೆಯ ಮೇಲೆ ರೈತರಿಗಾಗಿ ಆಯೋಜಿಸಿದ ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕಳೆದ 14 ವರ್ಷಗಳಿಂದ ಮೂರು ಎಕರೆ ಪ್ರದೇಶದಲ್ಲಿ ಗೋಡಂಬಿ ಬೆಳೆಯನ್ನು ಯಶಸ್ವಿಯಾಗಿ ಬೆಳೆದು ವಾರ್ಷಿಕ 2.50 ಲಕ್ಷ ರೂಪಾಯಿಗೂ ಅಧಿಕ ಲಾಭ ಪಡೆಯುತ್ತಿರುವ ನಾಗನಾಥರಾವ ನಿಡೋದೆ ಮಾತನಾಡಿ, ಗೋಡಂಬಿ ಬೆಳೆಯನ್ನು ಬೆಳೆಯಲು ರೈತರಿಗೆ ಸ್ವಲ್ಪ ಆರ್ಥಿಕ ಸಹಾಯ ನೀಡುವ ಯಾವುದಾದರೂ ಒಂದು ಯೋಜನೆಯನ್ನು ಜಾರಿಗೊಳಿಸಿ ಎಂದು ಮನವಿ ಮಾಡಿದರು. ಮೂರ್ನಾಲ್ಕು ವರ್ಷ ರೈತರು ಗೋಡಂಬಿ ಬೆಳೆಯಲು ಶ್ರಮಿಸಿದರೆ ನಂತರ ಪ್ರತಿ ವರ್ಷ ನಿರಂತರ ಆದಾಯ ಪಡೆಯಬಹುದು ಎಂದು ಹೇಳಿದರು.

## ನಗರದಲ್ಲಿ ಆಟೋ ಎಲ್ ಪಿ ಜಿ ಗ್ಯಾಸ್ ಖಾಲಿ

• ಉದಯವಾಹಿನಿ ಬಳ್ಳಾರಿ

ಅಡುಗೆ ತಯಾರಿಕೆಯ ಕಮರ್ಷಿಯಲ್ ಸಿಲಿಂಡರ್ ಮಾತ್ರವಲ್ಲದೇ ನಗರದಲ್ಲಿ ಆಟೋ ಎಲ್ಪಿಜಿ ಗ್ಯಾಸ್ ಸಹ ಖಾಲಿ ಖಾಲಿ, ನಿಗಧಿಯಾದ ಸ್ಟಾಕ್ ಬಾರದ ಪರಿಣಾಮ ನಗರದ ಆರು ಆಟೋ ಎಲ್ಪಿಜಿ ಸೆಂಟರ್‌ಗಳು ಬಂದಾಗಿವೆ. ಈ ಮೊದಲು 63 ರೂಪಾಯಿಗೆ ಲೀಟರ್ ಇದ್ದ ದರ ಈಗ 75 ರೂಪಾಯಿ ಅಂದ್ರೇ 12 ರೂಪಾಯಿ ಹೆಚ್ಚಾಗಿದೆ. ಆಟೋದವರು ಬಂಕ್ ಬಳಿ ಬರುತ್ತಿದ್ದಾರೆ ಅದ್ರೇ ಸ್ಟಾಕ್ ಇಲ್ಲವೆಂದು ಬೇಸರಿಂದ ಹಿಂದಕ್ಕೆ ಹೋಗ್ತಿದ್ದಾರೆ. ಈಗಾಗಲೇ ಬಳ್ಳಾರಿ ಬರೋ ಸಪ್ಲೈ ನಲ್ಲಿ ಅರ್ಧಕ್ಕರ್ಧ ಕಡಿಮೆಯಾಗಿದೆವ ಇದು ಹೀಗೆಯೇ ಮುಂದುವರೆದ್ರೇ ಆಟೋಗಳು ನಿಲ್ಲುಸುವ ಸ್ಥಿತಿ ಬರಲಿದೆ. ಇನ್ನೂ ಸ್ಟಾಕ್ ಯಾವಾಗ ಬರುತ್ತದೆ ಅನ್ನೋ ಬಗ್ಗೆ ಡೀಲರ್ ಗಳಿಗೇ ಮಾಹಿತಿ ಇಲ್ಲವಾಗಿದೆ.

## ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿರಿ

• ಉದಯವಾಹಿನಿ ಕಮಲನಗರ

ವಿದ್ಯಾರ್ಥಿಗಳಿಗೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಜೀವನ ಹೇಗೆ ಹಾಳಾಗುತ್ತದೆ ಎಂಬ ಬಗ್ಗೆ ಮನವರಿಕೆ ಮಾಡಿಕೊಡುವುದು ಅತ್ಯವಶ್ಯಕವಾಗಿದೆ ಎಂದು ದಂತ ವೈದ್ಯೆ ಡಾ. ಅಶ್ವಿನಿ ನಿಲಂಗೆ ಹೇಳಿದರು.

ಪಟ್ಟಣದ ಶಾಂತಿವರ್ಧಕ ಸಿದ್ಧರಾಮೇಶ್ವರ ಡಿಗ್ರಿ ಕಾಲೇಜಿನಲ್ಲಿ ಈಚೆಗೆ ಸಮುದಾಯ ಆರೋಗ್ಯ ಕೇಂದ್ರ, ಎನ್‌ಎಸ್‌ಎಸ್ ಘಟಕ ಹಾಗೂ ನಿಲಂಗೆ ದಂತ ಆಸ್ಪತ್ರೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಉಚಿತ ದಂತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಅವರು ಉದ್ಘಾಟಿಸಿ ಮಾತನಾಡಿ, ಮಾದಕ ವಸ್ತು, ವ್ಯಸನ ಸಾಮಾಜಿಕ ಪಿಡುಗು, ಅದನ್ನು ತೊಲಗಿಸುವುದು ವಿದ್ಯಾರ್ಥಿಗಳ ಸಾಮಾಜಿಕ ಜವಾಬ್ದಾರಿ ಎಂದರು.

ನಮ್ಮ ದಂತ ತಪಾಸಣಾ ಶಿಬಿರವು ಸರಿಯಾದ ಮೌಖಿಕ ನೈರ್ಮಲ್ಯ ಮತ್ತು ತಡೆಗಟ್ಟುವ ದಂತ ಆರೈಕೆಯ ಕುರಿತು ಸೂಚನೆಗಳನ್ನು ನೀಡುತ್ತದೆ. ಅಗತ್ಯವಿದ್ದರೆ, ದಂತ ತಪಾಸಣೆ ತ್ವರಿತ ಮತ್ತು ಸುಲಭ ಮತ್ತು ದಂತಕ್ಷಯ ಮತ್ತು ಇತರ ದಂತ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುವ ಆಹಾರ ಮತ್ತು ಜೀವನಶೈಲಿಯ ಬದಲಾವಣೆಗಳ ಕುರಿತು ಸಲಹೆಯ ಜೊತೆಗೆ ಭವಿಷ್ಯದಲ್ಲಿ ನಿಮ್ಮನ್ನು ಬಹಳಷ್ಟು ನೋವು ಮತ್ತು ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದಾಗಿದೆ ಎಂದರು.

## ಕೃಷ್ಣಾ ಮೇಲ್ದಂಡೆ ಯೋಜನೆ: ಪರಿಹಾರ ವಿತರಣೆಗೆ ವೇಗ ತರಲು ಆಗ್ರಹ

• ಉದಯವಾಹಿನಿ ಜಮಖಂಡಿ

ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಪ್ರದೇಶದ ಸಂತ್ರಸ್ಥರಿಗೆ ಪರಿಹಾರ ವಿತರಣಾ ಕಾರ್ಯವನ್ನು ತ್ವರಿತವಾಗಿ ಪ್ರಾರಂಭಿಸಬೇಕು. ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದಂತೆ ಪರಿಹಾರ ವಿತರಣೆಗೆ ಚಾಲನೆ ನೀಡಬೇಕು. ಈ ನಿಟ್ಟಿನಲ್ಲಿ ಹಿರಿಯ ಅಧಿಕಾರಿಗಳು ಹಾಗೂ ನೀರಾವರಿ ಇಲಾಖೆಯ ಸಚಿವರೊಂದಿಗೆ ಮಾತುಕತೆ ನಡೆಸಿ ಕೃಷ್ಣಾ ಸಂತ್ರಸ್ಥರ ಪರ ಕಾಳಜಿ ವಹಿಸಬೇಕು ಎಂದು ಮಾಜಿ ಶಾಸಕ ಶ್ರೀಕಾಂತ್ ಕುಲಕರ್ಣಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಮನವಿ ಮಾಡಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಅವರು, ಮುಳುಗಡೆ ಪ್ರದೇಶದ ಪರಿಹಾರ ವಿತರಣೆಯಲ್ಲಿ ವಿಳಂಬವಾಗುತ್ತಿರುವುದರಿಂದ ಪ್ರತಿವರ್ಷ ಮಳೆಗಾಲದಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗುತ್ತಿದ್ದು, ಸಂತ್ರಸ್ಥರು ಸಂಕಷ್ಟ ಅನುಭವಿಸುವ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು. ಕೃಷ್ಣಾ ಮೇಲ್ದಂಡೆ ಯೋಜನೆ ಸಂಪೂರ್ಣವಾಗಿ ಅನುಷ್ಠಾನಗೊಳ್ಳಲು ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಬೇಕಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ತಿಮ್ಮಾಪೂರ ಅವರು, ಸರ್ಕಾರ ಘೋಷಣೆ ಮಾಡಿದಂತೆ ಹಂತ ಹಂತವಾಗಿ ಪರಿಹಾರ ವಿತರಣಾ ಕಾರ್ಯವನ್ನು ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದರು.

## ಬಡವರ ಆರ್ಥಿಕ ಸಬಲೀಕರಣಕ್ಕೆ ಮೀನುಗಾರಿಕೆ ಪೂರಕ: ಶಾಸಕ ನಾಡಗೌಡ

• ಉದಯವಾಹಿನಿ ಮುದ್ದೇಬಿಹಾಳ

ತಾಲ್ಲೂಕಿನ ನದಿ ತೀರದ ಹಾಗೂ ಕೆರೆ ಆಶ್ರಿತ ಗ್ರಾಮಗಳ ಭೂಹೀನರು ಮತ್ತು ಹಿಂದುಳಿದ ವರ್ಗದವರು ಮೀನುಗಾರಿಕೆಯನ್ನು ಉಪಕಸುಬನ್ನಾಗಿ ಮಾಡಿಕೊಳ್ಳುವ ಮೂಲಕ ಆರ್ಥಿಕ ಸಬಲತೆ ಸಾಧಿಸಬಹುದು. ಮೀನುಗಾರಿಕೆ ಆದಾಯದಿಂದ ಬಡತನ ನಿರ್ಮೂಲನೆ ಮಾಡಲು ಸಾಧ್ಯವಿದೆ ಎಂದು ಶಾಸಕ ಹಾಗೂ ಕೆಎಸ್‌ಐಡಿಎಲ್ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ (ಅಪ್ಪಾಜಿ) ಹೇಳಿದರು. ಶನಿವಾರ ಪಟ್ಟಣದ ಆಲಮಟ್ಟಿ ರಸ್ತೆಯ ಲೇಔಟ್‌ನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ ಯೋಜನೆಯಡಿ ಅಂದಾಜು 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ನೂತನ ಕಚೇರಿ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಮೀನುಗಾರಿಕೆ ಮಂದಗತಿಯಲ್ಲಿ ಸಾಗಲು ರಾಜಕೀಯ ಇಚ್ಛಾಶಕ್ತಿ ಹಾಗೂ ಇಲಾಖೆಯ ಆಸಕ್ತಿಯ ಕೊರತೆಯೂ ಇರಬಹುದು ಎಂದು ಒಪ್ಪಿಕೊಂಡ ಶಾಸಕರು, ಮೀನುಗಾರಿಕೆ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಎಂ.ಎಚ್. ಬಾಂಗಿ ಹಾಗೂ ಸಹಾಯಕ ನಿರ್ದೇಶಕ ಶರಣಗೌಡ ಬಿರಾದಾರ, ಮಾತನಾಡಿ, ಶಾಸಕರ ಮುತುವರ್ಜಿಯಿಂದ ಹೊಸ ಕಚೇರಿ ಕಟ್ಟಡಕ್ಕೆ ಚಾಲನೆ ಸಿಕ್ಕಿದೆ. ಆಲಮಟ್ಟಿಯಲ್ಲಿ ಈಗಾಗಲೇ ಕೌಶಲ್ಯ ಅಭಿವೃದ್ಧಿ ಹಾಗೂ ಮೀನು ಉತ್ಪಾದನಾ ಕೇಂದ್ರಕ್ಕಾಗಿ 25 ಎಕರೆ ಜಮೀನು ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ತಾಲ್ಲೂಕಿನ ಮೀನುಗಾರರಿಗೆ ಇಲಾಖೆಯ ವತಿಯಿಂದ ಮೀನಿನ ಬಲೆ ಹಾಗೂ ಲೈಫ್ ಜಾಕೆಟ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆ ನಿಕಟಪೂರ್ವ ಅಧ್ಯಕ್ಷ ಮಹಿಬೂಬ ಗೊಳಸಂಗಿ, ರಮೇಶ ಓಸ್ವಾಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಎಂ.ಬಿ. ನಾವದಗಿ, ಸತೀಶ್ ಓಸ್ವಾಲ್, ಪ್ರಭುರಾಜ ಕಲಬುರಗಿ, ಸಂಗನಗೌಡ ಬಿರಾದಾರ, ಸಿ.ಪಿ ಸಜ್ಜನ, ರಾಜು ಕರಡ್ಡಿ,ಸದಾಶಿವ ಮಠ,ಡಾ. ವಿರೇಶಕುಮಾರ ಗೂಳಿಣ ಶ್ರೀಕಾಂತ ಚಲವಾದಿ,ಅಕ್ಷತಾ ಚಲವಾದಿ, ಮಾಬೂಬಿ ಬಾಗವಾನ,ಗುತ್ತಿಗೆದಾರ ಬಂದೆನವಾಜ ಪಕಾಲಿ ಹಾಗೂ ಕಾಂಗ್ರೆಸ್ ಪಕ್ಷದ ಪ್ರಮುಖ ಮುಖಂಡರು, ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

> ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಲಮಟ್ಟಿಯಲ್ಲಿ ಮೀನುಗಾರಿಕೆ ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಅನುಮೋದನೆ ನೀಡಿದ್ದಾರೆ. ತಾಲ್ಲೂಕಿನ ನಿರುದ್ಯೋಗಿಗಳು ಮತ್ತು ಆಸಕ್ತರು ಅಲ್ಲಿ ತರಬೇತಿ ಪಡೆದು, ಕೆರೆಗಳಲ್ಲಿ ಯಾವ ತಳಿಯ ಮೀನುಗಳನ್ನು ಸಾಕಬೇಕು ಎಂಬ ತಾಂತ್ರಿಕ ಅರಿವು ಮೂಡಿಸಿಕೊಳ್ಳಬೇಕು. ಪ್ರತಿ ಗ್ರಾಮದ ಕೆರೆಗಳಲ್ಲಿ ಮೀನುಗಾರಿಕೆ ಸಹಕಾರ ಸಂಘಗಳನ್ನು (ಸೊಸೈಟಿ) ರಚಿಸುವ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. -ಶಾಸಕ ನಾಡಗೌಡ

## ಅಡುಗೆ ಅನಿಲ ಸಿಲಿಂಡರ್ ಆತಂಕ ಒಂದೇ ದಿನಕ್ಕೆ 30 ಸಾವಿರ ಬುಕ್ಕಿಂಗ್

• ಉದಯವಾಹಿನಿ ಹಾವೇರಿ

ಜಿಲ್ಲೆಯಲ್ಲಿ ಅಡುಗೆ ಅನಿಲ ಸಿಲಿಂಡರ್ ಪೂರೈಕೆ ಕಡಿಮೆಯಾಗಿದೆ ಎಂದು ಆತಂಕಗೊಂಡಿರುವ ಗ್ರಾಹಕರು, ಬುಕ್ಕಿಂಗ್ ಪ್ರಮಾಣವನ್ನು ಏಕಾಏಕಿ ಹೆಚ್ಚಿಸಿದ್ದಾರೆ. ಇದರಿಂದಾಗಿ ಜಿಲ್ಲೆಯಲ್ಲಿ ದಿನಕ್ಕೆ 30 ಸಾವಿರ ಬುಕ್ಕಿಂಗ್‌ಗಳು ಬರುತ್ತಿದ್ದು, ಅಡುಗೆ ಅನಿಲ ಪೂರೈಕೆ ಸರದಿ ದೊಡ್ಡದಾಗುತ್ತಿದೆ. ಜಿಲ್ಲೆಯಲ್ಲಿ ರೂ. 4.56 ಲಕ್ಷ ಅಡುಗೆ ಅನಿಲದ ಗ್ರಾಹಕರಿದ್ದಾರೆ. ಸಾಮಾನ್ಯ ದಿನಗಳಲ್ಲಿ ದಿನಕ್ಕೆ 5,000 ಸಿಲಿಂಡರ್ ಬೇಡಿಕೆ ಇರುತ್ತದೆ. ಆದರೆ, ಈಗ ಸಿಲಿಂಡರ್ ಸಿಗುವುದಿಲ್ಲವೆಂದು ಸುದ್ದಿಗಳು ಹರಿದಾಡುತ್ತಿವೆ. ಇದರಿಂದ ಆತಂಕಗೊಂಡಿರುವ ಜನರು, ಸ್ಪರ್ಧೆಗೆ ಬಿದ್ದವರ ರೀತಿಯಲ್ಲಿ ಬುಕ್ಕಿಂಗ್ ಮಾಡುತ್ತಿದ್ದಾರೆ. ಸಾಮಾನ್ಯ ದಿನಗಳ ರೀತಿಯಲ್ಲಿಯೇ ಗ್ಯಾಸ್ ಏಜೆನ್ಸಿಗಳಿಗೆ ಸಿಲಿಂಡರ್ ಪೂರೈಕೆಯಾಗುತ್ತಿದೆ. ಆದರೆ, ಬುಕ್ಕಿಂಗ್ ಪ್ರಮಾಣ ಜಾಸ್ತಿ ಆಗಿರುವುದರಿಂದ ಎಲ್ಲರಿಗೂ ಸಿಲಿಂಡರ್ ಒದಗಿಸಲು ಆಗುತ್ತಿಲ್ಲ. ಇದೇ ಕಾರಣಕ್ಕೆ ಕಾಯುವಿಕೆಯ ಸರದಿ ಹೆಚ್ಚಳವಾಗುತ್ತಿರುವುದಾಗಿ ಏಜೆನ್ಸಿ ಸಿಬ್ಬಂದಿ ಹೇಳುತ್ತಿದ್ದಾರೆ.

ಜಿಲ್ಲಾ ಕ್ರೀಡಾ ವಸತಿ ಶಾಲೆ ಸೇರಿದಂತೆ ಕೆಲ ಹಾಸ್ಟೆಲ್‌ಗಳಲ್ಲಿಯೂ ಸಿಲಿಂಡರ್ ಕೊರತೆ ಉಂಟಾಗಿದೆ. ಅಲ್ಲಿ ಸಿಬ್ಬಂದಿ, ಕಟ್ಟಿಗೆ ಬಳಸಿ ಅಡುಗೆ ಸಿದ್ಧಪಡಿಸಿದ್ದಾರೆ. ಕೆಲ ಹೋಟೆಲ್ ಹಾಗೂ ಖಾನಾವಳಿಗಳಲ್ಲಿಯೂ ಕಟ್ಟಿಗೆ ಮೊರೆ ಹೋಗಲಾಗಿದೆ.

## ಪರೀಕ್ಷೆ ಎಂದರೆ ಭಯಬೇಡ, ಹಬ್ಬಗಳಂತೆ ಆಚರಿಸಿ: ರಂಗಸ್ವಾಮಿ

• ಉದಯವಾಹಿನಿ ಹಿರಿಯೂರು

ಪರೀಕ್ಷೆಯಲ್ಲಿ ಯಶಸ್ಸು ಪಡೆಯಲು ಧೈರ್ಯ, ಪರಿಶ್ರಮ ಮತ್ತು ಆತ್ಮವಿಶ್ವಾಸ ಅತ್ಯಂತ ಮುಖ್ಯ. ಭಯವನ್ನು ಬಿಟ್ಟು ಧೈರ್ಯದಿಂದ ಪರೀಕ್ಷೆ ಎದುರಿಸಿದರೆ ಉತ್ತಮ ಫಲಿತಾಂಶಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ರಂಗಸ್ವಾಮಿ ಕೆ. ತಾಲ್ಲೂಕು ಶಿಕ್ಷಣ ಸಂಯೋಜನ ಅಧಕಾರಿ ಇವರು ಹೇಳಿದರು.

ಸರ್ಕಾರಿ ಪಿಎಂಶ್ರೀ ಮಾಧ್ಯಮಿಕ ಶಾಲೆ ಹಿರಿಯೂರು ತಾಲ್ಲೂಕು ಯರಬಳ್ಳಿ ಗ್ರಾಮ ಇಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾರದಾ ಪೂಜೆ ಹಾಗೂ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಾ ಪರೀಕ್ಷೆ ಎಂದರೆ ಭಯಪಡುವ ವಿಷಯವಲ್ಲ, ಅದು ವಿದ್ಯಾರ್ಥಿಗಳು ವರ್ಷಪೂರ್ತಿ ಕಲಿತ ಜ್ಞಾನವನ್ನು ಪರೀಕ್ಷಿಸುವ ಒಂದು ಅವಕಾಶ ಮಾತ್ರ. ಮಕ್ಕಳು ಪರೀಕ್ಷೆ ಬಂದಾಗ ಆತಂಕಪಡದೇ ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಎದುರಿಸಬೇಕು. ನಿಯಮಿತವಾಗಿ ಓದುವುದು, ಸಮಯಕ್ಕೆ ಸರಿಯಾಗಿ ಪುನರವಲೋಕನ ಮಾಡುವುದು ಮತ್ತು ಮನಸ್ಸನ್ನು ಶಾಂತವಾಗಿಟ್ಟುಕೊಳ್ಳುವುದು ಯಶಸ್ಸಿಗೆ ಸಹಾಯ ಮಾಡುತ್ತದೆ ಎಂದು ಮಕ್ಕಳಿಗೆ ಧೈರ್ಯ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಹಿರಿಯ ಮುಖ್ಯ ಶಿಕ್ಷಕ ನಾಗರಾಜ್ ತೇರ್ಗಡೆಗೊಂಡು ಮುಂದಿನ ವಿದ್ಯಾಭ್ಯಾಸಕ್ಕೆ ಬೇರೆ ಶಾಲೆಗಳಿಗೆ ತೆರಳುತ್ತಿರುವ 8ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುತಾ ಶಾಲೆ ಎಂದರೆ ಕೇವಲ ಓದುವ ಸ್ಥಳ ಮಾತ್ರವಲ್ಲ; ಅದು ವ್ಯಕ್ತಿತ್ವ ರೂಪುಗೊಳ್ಳುವ ಪವಿತ್ರ ಸ್ಥಳ. ಅಲ್ಲಿ ಪಡೆದ ಜ್ಞಾನ, ಶಿಕ್ಷಕರ ಮಾರ್ಗದರ್ಶನ, ಸ್ನೇಹಿತರ ಜೊತೆಗಿನ ಅನುಭವಗಳನ್ನು ಜೀವನಪೂರ್ತಿ ಮರೆಯದೆ ನೆನಪಿಟ್ಟುಕೊಂಡು ಓದಿದ ಶಾಲೆಗೆ ಋಣಿಗಳಾಗಿರಬೇಕು ನಿಮ್ಮೆಲ್ಲರ ಮುಂದಿ ಶೈಕ್ಷಣಿಕ ಜೀವನಕ್ಕೆ ಶುಭವಾಗಲಿ ಎಂದು ಹೇಳಿದರು.


ಉದಯವಾಹಿನಿ ಚಿತ್ರ

> ಪರೀಕ್ಷೆ ಎಂದರೆ ಭಯಪಡುವ ವಿಷಯವಲ್ಲ

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಶ್ರೀಮತಿ ಸವಿತ, ಮಂಜುನಾಥ್, ಶಬಾನ ವಿಜಯಮ್ಮ ಸಂತೋಷ್ ಕುಮಾರ್ ದರ್ಶನ್ ಎಸ್ ಡಿ ಎಂ ಸಿ ಅಧ್ಯಕ್ಷ ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಸುಮಲತಾ ಹಾಗೂ ಸದಸ್ಯರು ಮಾರ್ಗದರ್ಶಿ ಶಿಕ್ಷಕರಾದ ಶ್ರೀಮತಿ ಶಶಿಕಲಾ, ಲಿಂಗರಾಜು ಮಾರುತಿ ಸಿಬಿ ಶಾರದಮ್ಮ ದೈಹಿಕ ಶಿಕ್ಷಕ ಪಿ ರಾಜಪ್ಪ ಗ್ರಾಮದ ಮುಖಂಡರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಭಾಗವಹಿಸಿ ಮಕ್ಕಳಿಗೆ ಶುಭಕೋರಿದರು.

# 1.30ಕೋಟಿ ರೂ.ವೆಚ್ಚದ ನವೀಕೃತ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನ ಉದ್ಘಾಟಿಸಿದ ಸಚಿವ ಪ್ರಿಯಾಂಕ್ ಖರ್ಗೆ

• ಉದಯವಾಹಿನಿ,ಚಿಂಚೋಳಿ


ತಾಲ್ಲೂಕಿನ ಪೋಲಕಪಳ್ಳಿ ಸಮೀಪ ಅರಣ್ಯ ಇಲಾಖೆಯಿಂದ ನವೀಕೃತ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನ್ನು ಸುಮಾರು 1.30 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿರುವ ನವೀಕೃತ ಸಾಲು ಮರದ ತಿಮ್ಮಕ್ಕ ವೃಕ್ಷಾದ್ಯಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿಬಿಟಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರು ಉದ್ಘಾಟಿಸಿದರು. ನಂತರ ಅಧಿಕಾರಿಗಳೊಂದಿಗೆ ವನದಲ್ಲಿ ಒಂದು ಸುತ್ತು ಹಾಕಿ ವಿವಿಧ ಸಸ್ಯ ರಾಶಿಗಳನ್ನು,ಔಷಧಿ ಸಸ್ಯಗಳು,ವಿವಿಧ ಜಾತಿಯ ಪ್ರಾಣಿ ಪಕ್ಷಿಗಳ ಮೂರ್ತಿಗಳು ವಿಕ್ಷಿಸಿದರು.

> ಕೃಷಿ ಇಲಾಖೆಯ ಜಾಗೃತಿ ಅಭಿಯಾನಕ್ಕೆ ಚಾಲನೆ

ಅರಣ್ಯ ಇಲಾಖೆಯಿಂದ 2021-22ನೇ ಸಾಲಿನ ಲ್ಯಾಂಡ್ ಬಿಲ್ಡಿಂಗ್ ಯೋಜನೆ ಅಡಿಯಲ್ಲಿ 37.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ತಾಲ್ಲೂಕಾ ಅರಣ್ಯ ವಲಯದ ಹೊಸ ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡ ಮತ್ತು 2024-25ನೇ ಸಾಲಿನ ಲಿಂಕ್ ಡಾಕುಮೆಂಟ್ ಯೋಜನೆ ಅಡಿಯಲ್ಲಿ ತಾಲ್ಲೂಕಾ ಸಾಮಾಜಿಕ ಅರಣ್ಯ ವಲಯದ ಕಛೇರಿ ಕಟ್ಟಡ ಹಾಗೂ ಉಪ ವಲಯ ಅರಣ್ಯ ಅಧಿಕಾರಿಗಳ ವಸತಿ ಗೃಹ ಕಟ್ಟಡವನ್ನು ಸಹ ಉದ್ಘಾಟಿಸಿದರು.

**ಜಾಗೃತಿ ಅಭಿಯಾನಕ್ಕೆ ಚಾಲನೆ:-** ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್,ಕೃಷಿ ಇಲಾಖೆ ಹಾಗು ಕೃಷಿ ವಿಜ್ಞಾನ ಕೇಂದ್ರ, ಕಲಬುರಗಿ ಸಹಯೋಗದೊಂದಿಗೆ ಕಸ್ಕೂಟ (ಅಂತರವಳ್ಳಿ / ಮಂಗನ ಬಾಲ) ಕಳೆಯ ನಿರ್ವಹಣೆ ಹಾಗೂ ತೊಗರಿಯಲ್ಲಿ ಬರುವ ಗೊಡ್ಡು / ನೆಟೆ ರೋಗ ನಿರ್ವಹಣೆ ಕುರಿತು ರೈತಾಪಿ ಜನರಲ್ಲಿ ಅರಿವು ಮೂಡಿಸಲು ಕೃಷಿ ಇಲಾಖೆಯ ಜಾಗೃತಿ ಅಭಿಯಾನಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿ,ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಕೃಷಿ ಜಂಟಿ ಉಪ ನಿರ್ದೇಶಕಿ ಅನುಸೂಯಾ ಹೂಗಾರ,ಶಾಸಕ ಡಾ.ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ,ಕೆ.ಕೆ.ಆರ್.ಟಿ.ಸಿ ಅಧ್ಯಕ್ಷ ಅರುಣಕುಮಾರ ಪಾಟೀಲ,ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್,ಕಲಬುರಗಿ ವಲಯದ ಅರಣ್ಯ ಸಂರಕ್ಷಣಾಧಿಕಾರಿ ಸುನೀಲ ಪನ್ವಾರ,ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ,ಎಸ್.ಪಿ.ಅಡ್ಡೂರು ಶ್ರೀನಿವಾಸಲು,ಡಿ.ಸಿ.ಎಫ್ ಸುಮಿತ ಪಾಟೀಲ,ವನ್ಯಜೀವಿ ವಲಯ ಅರಣ್ಯಾಧಿಕಾರಿ ಸಂಜೀವಕುಮಾರ ಚವ್ಹಾಣ,ಮಾಜಿ ಶಾಸಕ ಕೈಲಾಸನಾಥ ಪಾಟೀಲ, ಸುಭಾಷ ರಾಠೋಡ,ದೀಪಕನಾಗ್ ಪುಣ್ಯಶೆಟ್ಟಿ, ಶರಣುಪಾಟೀಲ,ಅಬ್ದುಲ್ ಬಾಷೀದ್,ಸಂತೋಷ ಗುತ್ತೇದಾರ,ಆನಂದ ಟೈಗರ್,ಲಕ್ಷ್ಮಣ ಆವುಂಟಿ ಸೇರಿದಂತೆ ಅಧಿಕಾರಿಗಳು ಮುಖಂಡರು ಇದ್ದರು.




ಉದಯವಾಹಿನಿ ಚಿತ್ರ

## ತೆರಿಗೆ ದೇಶದ ಅಭಿವೃದ್ಧಿಗೆ ಬಳಕೆ ಆಗುತ್ತದೆ

• ಉದಯವಾಹಿನಿ ಬಳ್ಳಾರಿ

ಸರ್ಕಾರ ಸಂಗ್ರಹ ಮಾಡುವ ತೆರಿಗೆಯು ದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ ಬಳಕೆ ಆಗಲಿದೆ ಎಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ ಅವರು ತಿಳಿಸಿದ್ದಾರೆ. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಭಾರತ ಸರ್ಕಾರದ ಆದಾಯ ತೆರಿಗೆ ಇಲಾಖೆಯ ಬಳ್ಳಾರಿ ಕಚೇರಿಯು ವ್ಯಾಪಾರಿಗಳು ಮತ್ತು ವಾಣಿಜ್ಯೋದ್ಯಮಿಗಳ ಜೊತೆ ನಡೆಸಿದ ಔಟ್ ರೀಚ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ರೀತಿಯ ತೆರಿಗೆಗಳು ದೇಶದ ಆರ್ಥಿಕ ಸಂಪನ್ಮೂಲಗಳು. ದೇಶದ ಆರ್ಥಿಕ ಭವಿಷ್ಯವನ್ನು ನಿರ್ಧರಿಸುವಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ತೆರಿಗೆಯನ್ನು ದೇಶದ ಭದ್ರತೆ, ಅಭಿವೃದ್ಧಿ, ವಿಜ್ಞಾನ, ಆರೋಗ್ಯ, ಶಿಕ್ಷಣ, ಆಡಳಿತ, ರಸ್ತೆ, ಕೃಷಿ, ಕೈಗಾರಿಕೋದ್ಯಮ, ಮೂಲಭೂತ ಸೌಲಭ್ಯಗಳು ಹೀಗೇ ಹತ್ತಾರು ಕ್ಷೇತ್ರಗಳಲ್ಲಿ ವಿನಿಯೋಗ ಆಗುತ್ತಿವೆ ಎಂದರು. ಆದರೆ, ಆದಾಯ ತೆರಿಗೆಯ ಹೊಸ ಕಾಯ್ದೆಗಳು, ನೀತಿಗಳು - ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ಜ್ಞಾನದ ಅಗತ್ಯವಿದೆ. ಈ ಕ್ಷೇತ್ರದ ಪರಿಣಿತರ ಜೊತೆಯಲ್ಲಿ ಚರ್ಚೆ ನಡೆಸಿ ಆದಾಯ ತೆರಿಗೆಯ ಸಮಗ್ರ ಮಾಹಿತಿ ಪಡೆದು, ಸಮಸ್ಯೆಗಳಿಗೆ ಪರಿಹಾರ ಪಡೆದಲ್ಲಿ ನೆಮ್ಮದಿ ಸಿಗಲಿದೆ ಎಂದರು. ಬಳ್ಳಾರಿಯ ಆದಾಯ ತೆರಿಗೆ ಇಲಾಖೆಯ ಡೆಪ್ಯುಟಿ ಕಮೀಷನರ್ ಆಫ್ ಇನ್ಕಂಟ್ಯಾಕ್ಸ್ ಶಿವಶಂಕರ್ ಅವರು, ಆದಾಯ ತೆರಿಗೆ ಪಾವತಿ ಇಲಾಖೆಯಲ್ಲಿ ಆರ್ಟಿಫಿಷಿಯಲ್ ಇಂಟಲಿಜೆನ್ಸಿ (ಎಐ) ಬಳಕೆ ಮಾಡಲಾಗುತ್ತಿದೆ. ತೆರಿಗೆ ಪಾವತಿಯ ಕುರಿತು ಎಲೆಕ್ಟ್ರಾನಿಕ್ ಸಂವಹನ (ಇ-ಮೇಲ್) ಬಳಕೆ ಆಗುತ್ತಿದೆ. ತೆರಿಗೆ ಪಾವತಿದಾರರು ಎಚ್ಚೆತ್ತುಕೊಳ್ಳಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಆದಾಯ ತೆರಿಗೆ ಅಧಿಕಾರಿ ಸತ್ಯನಾರಾಯಣ ಅವರು, ಆದಾಯ ತೆರಿಗೆ ಇಲಾಖೆಯ ಹೊಸ ಕಾಯ್ದೆಗಳು, ನಿಯಮಗಳು, ನೀತಿಗಳನ್ನು ವಿವರಿಸಿ, ಇಲಾಖೆಯ ಸೌಲಭ್ಯಗಳನ್ನು ರಿಯಾಯಿತಿಗಳು, ಇನ್ನಿತರೆಗಳನ್ನು ವಿವರಿಸಿ, ಸಭೆಯಲ್ಲಿ ಪಾಲ್ಗೊಂಡಿದ್ದವರಲ್ಲಿ ಎಸ್. ದೊಡ್ಡನಗೌಡ, ಡಾ. ಮರ್ಚೆಡ್ ಮಲ್ಲಿಕಾರ್ಜುನ ಗೌಡ, ಅನಂತುಲ ಸುಧಾಕರ, ಜಿ. ರಾಘವೇಂದ್ರ ರೆಡ್ಡಿ, ಎಚ್. ಮಹಾರುದ್ರಗೌಡ, ಕೃಷ್ಣಕಾಂತ್ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ತೆರಿಗೆ ಕಮಿಟಿ ಚೇರ್ಮನ್ ಸಿಎ ಕೆ. ರಾಜಶೇಖರ ಅವರು ಸ್ವಾಗತ ಕೋರಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರು ವಂದಿಸಿದರು. ಈ ಸಭೆಯಲ್ಲಿ ಉಪಾಧ್ಯಕ್ಷರಾದ ಸೊಂತ ಗಿರಿಧರ್, ಜಂಟಿ ಕಾರ್ಯದರ್ಶಿಗಳಾದ ವಿ. ರಾಮಚಂದ್ರ, ಖಜಾಂಚಿಗಳಾದ ನಾಗಳ್ಳಿ ರಮೇಶ್, ವಿವಿಧ ಸಂಘಟನೆಗಳವರು, ಟ್ಯಾಕ್ಸ್ ಪ್ರಾಕ್ಟೀಷನರ್ಸ್ ಪಾಲ್ಗೊಂಡಿದ್ದರು.

# ವಯಸ್ಸಿಗೆ ಮೀರಿದ ಸಾಧನೆ

ಅಲ್ಲು ಅರ್ಜುನ್, ಭಾರತದ ಸ್ಟಾರ್ ಪ್ಯಾನ್ ಇಂಡಿಯಾ ನಟ. ಬಾಕ್ಸ್ ಆಫೀಸ್‌ನಲ್ಲಿ ಅವರ ಸಿನಿಮಾಗಳು ಹಲವು ದಾಖಲೆಗಳನ್ನು ಬರೆದಿವೆ. ಆದರೆ ಇದೀಗ ಅಲ್ಲು ಅರ್ಜುನ್ ಅವರ ಪುತ್ರಿ ಆರ್ಹಾ ಸಹ ಅಪರೂಪದ ದಾಖಲೆ ಬರೆದಿದ್ದಾರೆ. ಅಲ್ಲು ಅರ್ಜುನ್ ಎಷ್ಟೇ ಬಾಕ್ಸ್ ಆಫೀಸ್ ದಾಖಲೆಗಳನ್ನು ಬರೆದಿರಬಹುದು ಆದರೆ ಆರಾ ಬರೆದಿರುವ ಈ ದಾಖಲೆ ಬಹಳ ಅಪರೂಪದ್ದು ಮತ್ತು ವಿಶೇಷವಾದುದು. ಚುರುಕಿನ ಬಾಲಕಿಯಾದ ಆರ್ಹಾ, ಚೆಸ್ ಕ್ಷೇತ್ರದಲ್ಲಿ ಹೊಸ ದಾಖಲೆಯೊಂದನ್ನು ಬರೆದಿದ್ದಾರೆ. ಅಲ್ಲು ಅರ್ಜುನ್ , ಭಾರತದ ಸ್ಟಾರ್ ಪ್ಯಾನ್ ಇಂಡಿಯಾ ನಟ. ಬಾಕ್ಸ್ ಆಫೀಸ್‌ನಲ್ಲಿ ಅವರ ಸಿನಿಮಾಗಳು ಹಲವು ದಾಖಲೆಗಳನ್ನು ಬರೆದಿವೆ. ಆದರೆ ಇದೀಗ ಅಲ್ಲು ಅರ್ಜುನ್ ಅವರ ಪುತ್ರಿ ಆರ್ಹಾ ಸಹ ಅಪರೂಪದ ದಾಖಲೆ ಬರೆದಿದ್ದಾರೆ. ಅಲ್ಲು ಅರ್ಜುನ್ ಎಷ್ಟೇ ಬಾಕ್ಸ್ ಆಫೀಸ್ ದಾಖಲೆಗಳನ್ನು ಬರೆದಿರಬಹುದು ಆದರೆ ಆರಾ ಬರೆದಿರುವ ಈ ದಾಖಲೆ ಬಹಳ ಅಪರೂಪದ್ದು ಮತ್ತು ವಿಶೇಷವಾದುದು. ಚುರುಕಿನ ಬಾಲಕಿಯಾದ ಆರ್ಹಾ, ಚೆಸ್ ಕ್ಷೇತ್ರದಲ್ಲಿ ಹೊಸ ದಾಖಲೆಯೊಂದನ್ನು ಬರೆದಿದ್ದಾರೆ. ಅಲ್ಲು ಅರ್ಜುನ್ ಮತ್ತು ಸ್ನೇಹಾ ರೆಡ್ಡಿ ಪುತ್ರಿ ಆರ್ಹಾ ಎಳವೆಯಿಂದಲೇ ಚೆಸ್ ಬಗ್ಗೆ ಅತೀವ ಆಸಕ್ತಿ ಹೊಂದಿರುವವರಾಗಿದ್ದು, ಕೆಲ ವರ್ಷಗಳ ಹಿಂದೆಯೇ ಒಟ್ಟಿಗೆ ಹಲವರೊಡನೆ ಚೆಸ್ ಆಡಿ ಎಲ್ಲರನ್ನೂ ಸೋಲಿಸಿದ್ದರು. ಇದೀಗ ಚೆಸ್ ಕ್ಷೇತ್ರದಲ್ಲಿಯೇ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಅಪರೂಪದ ದಾಖಲೆಯೊಂದನ್ನು ಬರೆದಿದ್ದಾರೆ.



ಅಪರೂಪದ ದಾಖಲೆ ಬರೆದ ಅಲ್ಲು ಪುತ್ರಿ ಆರ್ಹಾ

ಆರ್ಹಾ ಇದೀಗ ಅತ್ಯಂತ ಕಿರಿಯ ಚೆಸ್ ಟ್ರೈನರ್ ಎನಿಸಿಕೊಂಡಿದ್ದಾರೆ. ಅವರ ಹೆಸರು ಇದೀಗ 'ನೋಬೆಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಅಲ್ಲು ಆರ್ಹಾ ತನ್ನ ಐದನೇ ವಯಸ್ಸಿನಲ್ಲಿ ವಿಶ್ವದ ಅತ್ಯಂತ ಕಿರಿಯ ಚೆಸ್ ತರಬೇತುಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಹೈದರಾಬಾದ್‌ನ ಹೈಟೆಕ್ ಸಿಟಿಯಲ್ಲಿರುವ ರಾಯ್ ಚೆಸ್ ಅಕಾಡೆಮಿಯಲ್ಲಿ ತರಬೇತಿ ಪಡೆದ ಅರ್ಹಾ, ಕೇವಲ ಎರಡು ತಿಂಗಳ ಅವಧಿಯಲ್ಲಿ 50ಕ್ಕೂ ಹೆಚ್ಚು ಮಕ್ಕಳಿಗೆ ಚೆಸ್ ತರಬೇತಿ ನೀಡುವ ಮೂಲಕ ಎಲ್ಲರನ್ನೂ ಬೆರಗುಗೊಳಿಸಿದ್ದಾರೆ. ಮಾತ್ರವಲ್ಲದೆ ಆರ್ಹಾ 30 ಕಠಿಣ ಚೆಸ್ ಪಜಲ್‌ಗಳನ್ನು ಸಹ ಪೂರ್ಣಗೊಳಿಸಿದ್ದಾರಂತೆ.




# ಅಶ್ಲೀಲ ವಿಡಿಯೋ ಪೋಸ್ಟ್ ಮಾಡಿ ನಟಿಗೆ ಕಿರುಕುಳ

ತೆಲುಗಿನ ಗ್ಲಾಮರಸ್ ನಟಿಯೊಬ್ಬರಿಗೆ ಆನ್‌ಲೈನ್ ಕಿರುಕುಳ ನೀಡಿದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ತೆಲುಗು ಚಿತ್ರರಂಗ ಮತ್ತು ಟಿವಿ ಲೋಕದ ಜನಪ್ರಿಯ ನಟಿ ಹಾಗೂ ನಿರೂಪಕಿ ಆಗಿರುವ ಅನುಸೂಯ ಭಾರಧ್ವಜ ಅವರಿಗೆ ಆನ್‌ಲೈನ್‌ನಲ್ಲಿ ಕಿರುಕುಳ ನೀಡಿದ ಇಬ್ಬರನ್ನು ಸೈಬರಾಬಾದ್ ಸೈಬರ್ ಪೊಲೀಸರು ಬಂಧಿಸಿದ್ದಾರೆ. ಜನಾರ್ದನ್ (29) ಮತ್ತು ಕೊಂಡಪುರಂ ಅರುಣ್ ಕುಮಾರ್ ಎಂಬುವರು ಇದೀಗ ಬಂಧನಕ್ಕೆ ಒಳಗಾಗಿದ್ದಾರೆ.

1ಈ ಇಬ್ಬರು ದುರುಳರು ಎಐ ಬಳಸಿ ಅನುಸೂಯ ಅವರ ಅಶ್ಲೀಲ ವಿಡಿಯೋಗಳನ್ನು ನಿರ್ಮಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಈ ಬಗ್ಗೆ ನಟಿ ಅನುಸೂಯ ಅವರು ದೂರು ನೀಡಿದ್ದರು.

ಅದರಂತೆ ಪೊಲೀಸರು ಬಂಧಿಸಿದ್ದಾರೆ. ಕಳೆದ ವರ್ಷ ಡಿಸೆಂಬರ್ 23 ರಂದು ದೂರು ನೀಡಿದ್ದ ಅನುಸೂಯ ಅವರು ಸೈಬರ್ ಪೊಲೀಸರಿಗೆ ದೂರು ನೀಡಿದ್ದರು.

1ಹಲವು ಸಾಮಾಜಿಕ ಮಾಧ್ಯಮ ಪುಟಗಳು ತನ್ನ ವಿರುದ್ಧ ಮಾನಹಾನಿಕರ, ನಿಂದನಾತ್ಮಕ ಮತ್ತು ಅಶ್ಲೀಲ ವಿಷಯಗಳನ್ನು ಪ್ರಸಾರ ಮಾಡುತ್ತಿವೆ ಎಂದು ದೂರಿನಲ್ಲಿ ಆರೋಪಿಸಿದ್ದರು. ಇದು ತನ್ನ ಘನತೆ ಮತ್ತು ಗೌರವಕ್ಕೆ ಧಕ್ಕೆ ತರುತ್ತಿದೆ ಎಂದು ಅವರು ದೂರಿದ್ದರು.



ಕೂಡಲೇ ಅಂಥಹವರನ್ನು ಗುರುತಿಸಿ ದುಷ್ಟರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಮನವಿ ಮಾಡಿದ್ದರು. ದೂರು ಸ್ವೀಕರಿಸಿ ತನಿಖೆ ನಡೆಸಿದ ಸೈಬರಾಬಾದ್ ಸೈಬರ್ ಪೊಲೀಸರು ಹೈದರಾಬಾದ್‌ನಲ್ಲಿ ವಾಸವಿದ್ದ, ಆಂಧ್ರಪ್ರದೇಶದ ಕಡಪಾ ಮೂಲದ ಜನಾರ್ದನ್ ಎಂಬಾತನನ್ನು ಬಂಧಿಸಿದ್ದರು.

ಈತ 'ಇನ್‌ಸ್ಟಾಗ್ರಾಮ್ ಖಾತೆಯನ್ನು ನಡೆಸುತ್ತಿದ್ದ. ಈ ಖಾತೆಯ ಮೂಲಕ ಅನುಸೂಯ ಸೇರಿದಂತೆ ಇತರೆ ಕೆಲವು ನಟಿಯರನ್ನು ಗುರಿಯಾಗಿಸಿಕೊಂಡು ಎಐ ನಿರ್ಮಿತ ಅಶ್ಲೀಲ ವಿಡಿಯೋಗಳನ್ನು ಹಂಚಿಕೊಳ್ಳುತ್ತಿದ್ದ. ಸಿಕಂದರಾಬಾದ್‌ನ ಪಶ್ಚಿಮ ಮಾರೇಡ್‌ಪಲ್ಲಿಯ ಆಟೋ ಚಾಲಕನಾಗಿರುವ ಅರುಣ್ ಕುಮಾರ್ ಎಂಬಾತನನ್ನು ಸಹ ಪೊಲೀಸರು ಬಂಧಿಸಿದ್ದಾರೆ. ಯೂಟ್ಯೂಬ್ ರೀಲ್ಸ್‌ನಲ್ಲಿ ನಟಿಯ ವಿರುದ್ಧ ಅತ್ಯಂತ ಕೆಟ್ಟದಾಗಿ ಕಾಮೆಂಟ್ ಮಾಡಿದ್ದಕ್ಕಾಗಿ ಈತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಟಾಕ್ಸಿಕ್ ಎದುರು ಡಜನ್ ಸಿನಿಮಾಗಳು



'ಟಾಕ್ಸಿಕ್' ಚಿತ್ರದ ಬಿಡುಗಡೆ ಇರಾನ್-ಇಸ್ರೇಲ್ ಯುದ್ಧದ ಕಾರಣದಿಂದ ಮುಂದೂಡಲ್ಪಟ್ಟಿತು, ಇದರಿಂದ 'ಧುರಂಧರ್ 2' ಜೊತೆಗಿನ ಕ್ಲ್ಯಾಶ್ ತಪ್ಪಿತು. ಆದರೆ, ಈಗ ಯಶ್ ಅವರ 'ಟಾಕ್ಸಿಕ್' ಸಿನಿಮಾ ಜೂನ್-ಜುಲೈ ತಿಂಗಳಲ್ಲಿ ಬರೋಬ್ಬರಿ 12 ಚಿತ್ರಗಳ ಕಠಿಣ ಸ್ಪರ್ಧೆ ಎದುರಿಸುತ್ತಿದೆ. ದೊಡ್ಡ ಬಜೆಟ್‌ನ ಈ ಚಿತ್ರಕ್ಕೆ ಕನಿಷ್ಠ ಎರಡು ತಿಂಗಳ ಪ್ರದರ್ಶನ ಅಗತ್ಯವಿದ್ದು, ಈ ಸ್ಪರ್ಧೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಇದರಿಂದ 'ಧುರಂಧರ್ 2' ಸಿನಿಮಾ ಜೊತೆಗಿನ ಕ್ಲ್ಯಾಶ್ ಮಿಸ್ ಆಗಿದೆ. ಆದರೆ, ಕೆಲವು ವರದಿಗಳ ಪ್ರಕಾರ 'ಟಾಕ್ಸಿಕ್' ಸಿನಿಮಾ ಈಗ ಡಜನ್ ಸಿನಿಮಾಗಳ ವಿರುದ್ಧ ಹೋರಾಡಬೇಕಾದ ಪರಿಸ್ಥಿತಿ ಬಂದಿದೆ. ಇದರಿಂದ 'ಟಾಕ್ಸಿಕ್' ತುಂಬಾನೇ ದೊಡ್ಡ ಚಾಲೆಂಜ್ ಎದುರಿಸುವ ಸೂಚನೆ ಪಡೆದಿದೆ. 'ಟಾಕ್ಸಿಕ್' ತ 'ಧುರಂಧರ್ 2' ಎಂಬ ಚರ್ಚೆ ಸೋಶಿಯಲ್ ಮೀಡಿಯಾದಲ್ಲಿ ಜೋರಾಗಿತ್ತು. ಯಾವುದಾದರೂ ಒಂದು ಸಿನಿಮಾ ಮುಂದಕ್ಕೆ ಹೋಗಲೇಬೇಕಾದ ಅನಿವಾರ್ಯತೆ ಸೃಷ್ಟಿ ಆಗಿತ್ತು. ಕೊನೆಗೆ, 'ಟಾಕ್ಸಿಕ್' ತಂಡದವರು ಚಿತ್ರವನ್ನು ಜೂನ್ 4ಕ್ಕೆ ಮುಂದಕ್ಕೆ ಹಾಕಿಕೊಂಡರು. ಯಶ್ ಈಗ 11 ಸಿನಿಮಾಗಳಿಂದ ಸ್ಪರ್ಧೆ ಎದುರಿಸಬೇಕಿದೆ.

'ಟಾಕ್ಸಿಕ್' ಸಿನಿಮಾದ ಬಜೆಟ್ ದೊಡ್ಡದಿದೆ. ಹೀಗಾಗಿ, ಈ ಸಿನಿಮಾ ಕನಿಷ್ಠ ಎರಡು ತಿಂಗಳು ಚಿತ್ರಮಂದಿರದಲ್ಲಿ ಪ್ರದರ್ಶನ ಕಾಣಬೇಕಾದ ಅನಿವಾರ್ಯತೆ ಇದೆ. ಆದರೆ, ಈ ಎರಡು ತಿಂಗಳಲ್ಲಿ ಬರೋಬ್ಬರಿ 12 ಚಿತ್ರಗಳು ಬರುತ್ತಿವೆ. ಜೂನ್ 5ಕ್ಕೆ ಹಾಲಿವುಡ್‌ನ 'ಮಾಸ್ಟರ್ ಆಫ್ ದಿ ಯೂನಿವರ್ಸ್' ಬರುತ್ತಿದೆ.


ಜೂನ್ 12ರಂದು 'ಹೇ ಜವಾನಿ ತೋ ಇಷ್ಕ್ ಹೋನಾ ಹೇ', 'ಮೇ ವಾಪ್ಸ್ ಆವುಂಗಾ' ತೆರೆಗೆ ಬರುತ್ತಿದೆ. ಜೂನ್ 19ರಂದು 'ಕಾಕ್‌ಟೇಲ್ 2' ಹಾಗೂ 'ಟಾಯ್ ಸ್ಟೋರಿ 5' ರಿಲೀಸ್ ಆಗುತ್ತಿದೆ. ಜೂನ್ 26ಕ್ಕೆ 'ಕ್ಯಾರಿ ಆನ್ ಜಟ್ಟಾ 4' ತೆರೆಗೆ ಬರಲಿದೆ. ಜುಲೈ 1ರಂದು 'ಮಿನೀಯನ್ 2', ಜುಲೈ 3ರಂದು 'ಧಮಾಲ್ 4', ಜುಲೈ 9ರಂದು 'ಮೋನಾ', ಜುಲೈ 10ರಂದು 'ಆಲ್ಫಾ', ಜುಲೈ 17ರಂದು 'ದಿ ಒಡಿಸ್ಸಿ', ಜುಲೈ 31ರಂದು 'ಸ್ಪೈಡರ್ ಮ್ಯಾನ್', 'ಬ್ರ್ಯಾಂಡ್ ನ್ಯೂ ಡೇ' ತೆರೆಗೆ ಬರುತ್ತಿದೆ.

'ಧುರಂಧರ್ 2' ಜೊತೆ ಕ್ಲ್ಯಾಶ್ ಮಿಸ್

# ಕಾರು ಖರೀದಿಸಿದ ಅಜಿತ್

ಕಾಲಿವುಡ್ ನಟ ಅಜಿತ್ ಕುಮಾರ್ ದುಬೈನಿಂದ ಚೆನ್ನೈಗೆ ಮರಳಿದ್ದಾರೆ. ಇತ್ತೀಚೆಗೆ ಯುದ್ಧದ ಪರಿಸ್ಥಿತಿಯಿಂದಾಗಿ ದುಬೈನಲ್ಲಿ ಸಿಕ್ಕಿಹಾಕಿಕೊಂಡಿದ್ದ ಅಜಿತ್, ವಾಪಸ್ ಬಂದ ನಂತರ ಸಾಯಿಬಾಬ ದೇವಸ್ಥಾನಕ್ಕೆ ಭೇಟಿ ನೀಡಿದರು. ಇದಾದ ಬಳಿಕ ಅವರು 24 ಲಕ್ಷ ರೂಪಾಯಿ ಮೌಲ್ಯದ ಹೊಸ ಮಹೀಂದ್ರಾ ಃಇ6 ಎಲೆಕ್ಟ್ರಿಕ್ ಕಾರು ಖರೀದಿಸಿದ್ದಾರೆ.

ಅವರು ರೇಸ್‌ಗಾಗಿ ದುಬೈನಲ್ಲಿ ಇದ್ದರು. ಆದ್ರೆ, ಅಮೆರಿಕ-ಇಸ್ರೇಲ್ ಹಾಗೂ ಇರಾನ್ ಮಧ್ಯೆ ನಡೆಯುತ್ತಿರುವ ಯುದ್ಧ ರೀತಿಯ ಪರಿಸ್ಥಿತಿಯಿಂದ ವಿಮಾನಗಳ ಹಾರಾಟಕ್ಕೆ ಅಡಚಣೆ ಉಂಟಾಗಿತ್ತು. ಈ ಕಾರಣದಿಂದ ಅಜಿತ್ ಅವರು ದುಬೈನಲ್ಲೇ ಉಳಿದುಕೊಳ್ಳಬೇಕಾದ ಪರಿಸ್ಥಿತಿ ಬಂದಿತ್ತು. ಈಗ ಅವರು ಚೆನ್ನೈಗೆ ಮರಳಿದ್ದಾರೆ. ಇಲ್ಲಿಗೆ ಆಗಮಿಸುತ್ತಿದ್ದಂತೆ ಅವರು 24 ಲಕ್ಷ ರೂಪಾಯಿ ಕಾರು ಖರೀದಿ ಮಾಡಿದ್ದಾರೆ. ಅಜಿತ್ ಅವರು ಚೆನ್ನೈಗೆ ಮರಳಿದ ಬಳಿಕ ಸಾಯಿ ಬಾಬ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಸಾಯಿ ಬಾಬಾ ಮಂದಿರದವರೇ ಈ ವಿಡಿಯೋನ ಹಂಚಿಕೊಂಡಿದ್ದರು. ಬಿಗಿ ಭದ್ರತೆ ಜೊತೆ ಅಜಿತ್ ಅವರು ದೇವಸ್ಥಾನಕ್ಕೆ ತೆರಳಿದ್ದರು. ಆ ಬಳಿಕ ಅವರು ಚೆನ್ನೈಗೆ ಮರಳಿದ್ದಾರೆ ಎನ್ನಲಾಗಿದೆ. ಅವರು ಮಹಿಂದ್ರ ಕಂಪನಿಯ ಬಿಇ6 ಕಾರನ್ನು ಖರೀದಿ ಮಾಡಿದ್ದಾರೆ. ಮಹಿಂದ್ರಾ ಎಲೆಕ್ಟ್ರಿಕ್ ಈ ವಿಷಯವನ್ನು ರಿವೀಲ್ ಮಾಡಿದೆ. ಕಂಪನಿಯ ವೆಬ್‌ಸೈಟ್ ಪ್ರಕಾರ ಅಜಿತ್ ಖರೀದಿಸಿದ ಕಾರಿನ ಬೆಲೆ 24 ಲಕ್ಷ ರೂಪಾಯಿ. ಅವರು ಟ್ಯಾಂಗೋ ರೆಡ್ ಬಣ್ಣದ ಕಾರು ಇದಾಗಿದೆ. ಅವರಿಗೆ ಎಲ್ಲರೂ ಅಭಿನಂದನೆ ತಿಳಿಸುತ್ತಿದ್ದಾರೆ. ಅಜಿತ್ ಅವರು ಹಲವು ವರ್ಷಗಳಿಂದ ಚಿತ್ರರಂಗದಲ್ಲಿ ಆಕ್ಟೀವ್ ಆಗಿದ್ದಾರೆ.



# ಆ ಒಂದು ವಿಷಯದ ಬಗ್ಗೆ ಕಂಪ್ಲೇಂಟ್ ಮಾಡಿದ ದೀಪಿಕಾ


ನಟಿ ದೀಪಿಕಾ ಪಡುಕೋಣೆ ಮುಂಬೈನಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ತಮ್ಮ ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ಮುಂಬೈನ ಕಳಪೆ ಂಕಿಐ ಗುಣಮಟ್ಟವನ್ನು ಹಂಚಿಕೊಂಡ ಅವರು, ಬಿಎಂಸಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಈ ನಗರ ಮತ್ತು ಇಲ್ಲಿನ ಜನರು ಉಸಿರುಗಟ್ಟುತ್ತಿದ್ದಾರೆ, ಇದು ಹೇಗೆ ಸರಿಯಾಗಬಹುದು ಎಂದು ಪ್ರಶ್ನಿಸಿದ್ದಾರೆ. ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ತಮ್ಮ ಸಿನಿಮಾ ಮೂಲಕ ಗಮನ ಸೆಳೆದವರು. ಅವರು ಸದಾ ಒಂದಿಲ್ಲೊಂದು ವಿಷಯಕ್ಕೆ ಸುದ್ದಿಯಲ್ಲಿರುತ್ತಾರೆ. ಆದರೆ ಈ ಬಾರಿ ಅವರು ಬೇರೆಯದೇ ಕಾರಣಕ್ಕಾಗಿ ಸುದ್ದಿಯಲ್ಲಿದ್ದಾರೆ. ಮುಂಬೈನಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯದ ಬಗ್ಗೆ ಅವರು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅವರ ಪೋಸ್ಟ್ ಚರ್ಚೆ ಹುಟ್ಟುಹಾಕಿದೆ. ಬೆಂಗಳೂರು, ಮುಂಬೈ, ದೆಹಲಿ ಸೇರಿದಂತೆ ಅನೇಕ ಕಡೆಗಳಲ್ಲಿ ವಾಯು ಮಾಲಿನ್ಯ ಗುಣಮಟ್ಟ ಕಳಪೆ ಮಟ್ಟ ತಲುಪಿದೆ. ಮುಂಬೈನ ಕಳಪೆ ವಾಯು ಗುಣಮಟ್ಟದ ಸೂಚ್ಯಂಕದ ಬಗ್ಗೆ ದೀಪಿಕಾ ಇತ್ತೀಚೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ಕಳವಳ ವ್ಯಕ್ತಪಡಿಸಿ ಪೋಸ್ಟ್ ಹಂಚಿಕೊಂಡಿದ್ದಾರೆ. ಈ ಪೋಸ್ಟ್‌ನಲ್ಲಿ ಅವರು ನೇರವಾಗಿ ಬಿಎಂಸಿಗೆ ಟ್ಯಾಗ್ ಮಾಡಿ ಈ ವಿಷಯದ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಗುರುವಾರ, ದೀಪಿಕಾ ಪಡುಕೋಣೆ ತಮ್ಮ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಂಕಿಐ ನ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಂಡಿದ್ದಾರೆ. ಆ ಸ್ಕ್ರೀನ್‌ಶಾಟ್‌ನಲ್ಲಿ, ಮುಂಬೈನ ಹಲವು ಭಾಗಗಳಲ್ಲಿ ಮಾಲಿನ್ಯದ ಮಟ್ಟ ಹೆಚ್ಚಾಗಿರುವದು ಕಂಡುಬರುತ್ತದೆ. ಈ ಪೋಸ್ಟ್ ಜೊತೆಗೆ, ದೀಪಿಕಾ, 'ಈ ನಗರ ಮತ್ತು ಇಲ್ಲಿ ವಾಸಿಸುವ ಜನರು ಉಸಿರುಗಟ್ಟಿಸುತ್ತಿದ್ದಾರೆ. ಇದು ಹೇಗೆ ಸರಿಯಾಗಬಹುದು' ಎಂದು ಬರೆದಿದ್ದಾರೆ. ಇದರ ಜೊತೆಗೆ, ಅವರು ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ಅನ್ನು ಉಲ್ಲೇಖಿಸಿ, ಈ ಸಮಸ್ಯೆಯ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿದರು. ಮುಂಬೈನಲ್ಲಿ ಹೆಚ್ಚುತ್ತಿರುವ ಮಾಲಿನ್ಯದ ವಿಷಯದ ಬಗ್ಗೆ ಕೆಲವು ಕಲಾವಿದರು ಈಗಾಗಲೇ ಧ್ವನಿ ಎತ್ತಿದ್ದಾರೆ. ನಟಿಯರಾದ ಸಯಾಮಿ ಖೇರ್ ಮತ್ತು ರಿಚಾ ಚಡ್ಡಾ ಕೂಡ ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದರು.

# ರೋಹಿತ್‌ಗೆ ಹಾರ್ದಿಕ್ ವಾರ್ನಿಂಗ್!

2026 ರ ಐಪಿಎಲ್ ಆರಂಭಕ್ಕೂ ಮುನ್ನ, ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಮಾಜಿ ನಾಯಕ ರೋಹಿತ್ ಶರ್ಮಾಗೆ ಎಚ್ಚರಿಕೆ ನೀಡಿದ್ದಾರೆ ಎಂಬ ವದಂತಿ ಸೋಶಿಯಲ್ ಮೀಡಿಯಾದಲ್ಲಿ ಹರಡಿದೆ. ವೈರಲ್ ಆಗಿರುವ ಪೋಸ್ಟ್‌ನಲ್ಲಿ, ಐಪಿಎಲ್‌ನಲ್ಲಿ ರನ್ ಬರ ಎದುರಿಸುತ್ತಿರುವ ರೋಹಿತ್ ಶರ್ಮಾಗೆ ಹಾರ್ದಿಕ್ ಪಾಂಡ್ಯ ಎಚ್ಚರಿಕೆ ನೀಡಿದ್ದು, ಈ ಬಾರಿ ರನ್ ಗಳಿಸದಿದ್ದರೆ ಅವರನ್ನು ತಂಡದಲ್ಲಿ ಆಡಿಸಲು ಸಾಧ್ಯವಿಲ್ಲ ಎಂದು ಮುಂಬೈ ಆಡಳಿತ ಮಂಡಳಿಗೆ ತಿಳಿಸಿದ್ದಾರೆ. ಮಾತ್ರವಲ್ಲದೆ ರೋಹಿತ್ ಅವರ ಪ್ರದರ್ಶನದ ಬಗ್ಗೆ ಮ್ಯಾನೇಜ್‌ಮೆಂಟ್ ಕೂಡ ಅಸಮಾಧಾನಗೊಂಡಿದೆ ಎಂದು ಬರೆಯಲಾಗಿದೆ. ಆಕ್ಸಿಜನ್ ಎಂಬ ಹೆಸರಿನ ಖಾತೆಯಿಂದ ಈ ಪೋಸ್ಟ್ ಪ್ರಕಟವಾಗಿದ್ದು, ಕೆಲವೇ ನಿಮಿಷಗಳಲ್ಲಿ ಸೋಶಿಯಲ್ ಮೀಡಿಯಾದಲ್ಲಿ ತಲ್ಲಣ ಸೃಷ್ಟಿಸಿದೆ. ಇತ್ತ ಈ ಪೋಸ್ಟ್ ನೋಡಿದ ರೋಹಿತ್ ಅಭಿಮಾನಿಗಳು ಪಾಂಡ್ಯ ವಿರುದ್ಧ ಕಿಡಿಕಾರಲು ಶುರು ಮಾಡಿದ್ದಾರೆ. ಪಾಂಡ್ಯ ಮೇಲೆ ನಿಂದನೆಗಳ ಸುರಿಮಳೆಗೈಯಲಾರಂಭಿಸಿದ್ದಾರೆ. ಈ ಪೋಸ್ಟ್ ನೋಡಿ ಕೂಡಲೇ ಎಚ್ಚೆತ್ತುಕೊಂಡಿರುವ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ, ಹಾರ್ದಿಕ್ ಪಾಂಡ್ಯರ ಉಖಈ ಅನ್ನು ಪೋಸ್ಟ್ ಮಾಡಿದ್ದು, ಅದರಲ್ಲಿ 'ಹಾಗೇನಾದರೂ ಇದೆಯಾ' ಎಂದು ಹಾರ್ದಿಕ್‌ರನ್ನು ತಮಾಷೆಯಾಗಿ ಪ್ರಶ್ನಿಸಿದೆ. ಇದರ ಜೊತೆಗೆ ತಮಾಷೆಯ ಎಮೋಜಿಯನ್ನು ಹಂಚಿಕೊಂಡಿದೆ. ಅಂದರೆ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿರುವ ಈ ಪೋಸ್ಟ್‌ನಲ್ಲಿ ನಿಜಾಂಶವಿಲ್ಲ. ಇದೆಲ್ಲ ಶುದ್ಧ ಕಟ್ಟುಕತೆ ಎಂದು ಮುಂಬೈ ಇಂಡಿಯನ್ಸ್ ಖಚಿತ ಪಡಿಸಿದೆ.

ವಾಸ್ತವವಾಗಿ 2013 ರಿಂದ ಯಾವುದೇ ಐಪಿಎಲ್ ಆವೃತ್ತಿಯಲ್ಲಿ ರೋಹಿತ್ ಶರ್ಮಾ 500 ರನ್ ಗಳಿಸಿಲ್ಲ. ಕಳೆದ ಆವೃತ್ತಿಯಲ್ಲಿ 15 ಪಂದ್ಯಗಳನ್ನಾಡಿದ್ದ ರೋಹಿತ್ 418 ರನ್ ಕಲೆಹಾಕಿದ್ದರು. ಆದಾಗ್ಯೂ, ರೋಹಿತ್ ಹಾಗೂ ಹಾರ್ದಿಕ್ ನಡುವೆ ಮನಸ್ತಾಪವಿದೆ ಎಂಬ ಸುಳ್ಳು ಸುದ್ದಿಯನ್ನು ಹುಟ್ಟುಹಾಕಲಾಗಿದೆ. ಇವರಿಬ್ಬರು ಮುಂಬೈ ತಂಡದ ಬೆನ್ನೆಲುಬಾಗಿದ್ದಾರೆ. ರೋಹಿತ್ ನಾಯಕತ್ವದಲ್ಲೇ ಮುಂಬೈ ಐದು ಬಾರಿ ಚಾಂಪಿಯನ್ ಆಗಿದೆ. ಹೀಗಿರುವಾಗ ರೋಹಿತ್ ಶರ್ಮಾ ಬಗ್ಗೆ ಯಾರು ಈ ರೀತಿಯಾಗಿ ಮಾತನಾಡಲು ಸಾಧ್ಯವೇ ಇಲ್ಲ.





ಮೌನ ಮುರಿದ ಫ್ರಾಂಚೈಸಿ

# ಐಪಿಎಲ್‌ಗೆ ಎಂಟ್ರಿ, ಬೆನ್ನಲ್ಲೇ ಪಿಎಸ್‌ಎಲ್‌ನಿಂದ ಬ್ಯಾನ್!

ಐಪಿಎಲ್ 2025 ರಲ್ಲಿ ಆರ್‌ಸಿಬಿ ತಂಡಕ್ಕೆ ತಾತ್ಕಾಲಿಕ ಬದಲಿ ಆಟಗಾರನಾಗಿ ಎಂಟ್ರಿ ಕೊಟ್ಟಿದ್ದ ಬ್ಲೆಸ್ಸಿಂಗ್ ಮುಝುರಬಾನಿ ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದರು. 6 ಪಂದ್ಯಗಳಲ್ಲಿ ಮಾರಕ ದಾಳಿ ಸಂಘಟಿಸಿದ್ದ ಬ್ಲೆಸ್ಸಿಂಗ್ ಮುಝುರಬಾನಿ ಒಟ್ಟು 13 ವಿಕೆಟ್ ಕಬಳಿಸಿದ್ದರು. ಹೀಗಾಗಿ ಮುಸ್ತಫಿಝುರ್ ರೆಹಮಾನ್ ಬದಲಿಯಾಗಿ ಬ್ಲೆಸ್ಸಿಂಗ್ ಮುಝುರಬಾನಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಝಿಂಬಾಬ್ವೆ ತಂಡದ ವೇಗದ ಬೌಲರ್ ಬ್ಲೆಸ್ಸಿಂಗ್ ಮುಝುರಬಾನಿ ಅವರು ಪಾಕಿಸ್ತಾನ್ ಸೂಪರ್ ಲೀಗ್ ಒಪ್ಪಂದವನ್ನು ಉಲ್ಲಂಘಿಸಿರುವ ಕಾರಣ, ಪಾಕ್ ಕ್ರಿಕೆಟ್ ಮಂಡಳಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಂದಾಗಿದೆ. ಮುಝುರಬಾನಿ ಮುಂಬರುವ ಕಖಐ 2026 ಸೀಸನ್‌ಗಾಗಿ ಇಸ್ಲಾಮಾಬಾದ್ ಯುನೈಟೆಡ್ ತಂಡದೊಂದಿಗೆ ಸುಮಾರು 1.1 ಕೋಟಿ ರೂಪಾಯಿ ಮೊತ್ತಕ್ಕೆ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಇತ್ತ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚಾನ್ಸ್ ಸಿಗುತ್ತಿದ್ದಂತೆ ಮುಝುರಬಾನಿ ಪಾಕಿಸ್ತಾನ್ ಸೂಪರ್ ಲೀಗ್‌ಗೆ ಕೈ ಕೊಟ್ಟಿದ್ದಾರೆ. ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಬಾಂಗ್ಲಾದೇಶ್ ವೇಗಿ ಮುಸ್ತಫಿಝುರ್ ರೆಹಮಾನ್ ಬದಲಿಯಾಗಿ ಬ್ಲೆಸ್ಸಿಂಗ್ ಮುಝುರಬಾನಿ ಅನ್ನು ತಂಡಕ್ಕೆ ಸೇರಿಸಿಕೊಂಡಿದ್ದಾರೆ.





**ಪಿಸಿಬಿ ಕಾನೂನು ಕ್ರಮ:** ಬ್ಲೆಸ್ಸಿಂಗ್ ಮುಝುರಬಾನಿ ಈಗಾಗಲೇ ಸಹಿ ಮಾಡಿದ ಒಪ್ಪಂದವನ್ನು ಅರ್ಧದಲ್ಲೇ ಕೈಬಿಟ್ಟಿರುವುದು ನಿಯಮ ಬಾಹಿರ ಎಂದು ಪರಿಗಣಿಸಿರುವ ಕಅಃ, ಅವರ ವಿರುದ್ಧ ಮೊಕದ್ದಮೆ ಹೂಡಲು ಮತ್ತು ಭವಿಷ್ಯದ ಕಖಐ ಪಂದ್ಯಗಳಿಂದ ಅವರನ್ನು ನಿಷೇಧಿಸಲು ಯೋಜಿಸುತ್ತಿದೆ. ಕಳೆದ ವರ್ಷ ಸೌತ್ ಆಫ್ರಿಕಾದ ಕಾರ್ಬಿನ್ ಬಾಷ್ ಕೂಡ ಇದೇ ರೀತಿ ಪೆಶಾವರ್ ಝಲ್ಮಿ ತಂಡವನ್ನು ಬಿಟ್ಟು ಮುಂಬೈ ಇಂಡಿಯನ್ಸ್ ಸೇರಿದ್ದರು. ಆಗ ಕಅಃ ಅವರಿಗೆ ಒಂದು ವರ್ಷದ ನಿಷೇಧ ಹೇರಿತ್ತು. ಇದೀಗ ಬ್ಲೆಸ್ಸಿಂಗ್ ಮುಝುರಬಾನಿ ಕೂಡ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅವಕಾಶ ಸಿಗುತ್ತಿದ್ದಂತೆ ಪಾಕಿಸ್ತಾನ್ ಸೂಪರ್ ಲೀಗ್‌ಗೆ ಕೈ ಕೊಟ್ಟಿದ್ದಾರೆ. ಹೀಗಾಗಿ ಝಿಂಬಾಬ್ವೆ ವೇಗಿಯನ್ನು ಸಹ ಪಾಕಿಸ್ತಾನ್ ಸೂಪರ್ ಲೀಗ್‌ನಿಂದ ಒಂದು ವರ್ಷ ನಿಷೇಧಿಸಲಿದ್ದಾರೆ.

**ಅತ್ಯುತ್ತಮ ಬೌಲಿಂಗ್:** ಐಪಿಎಲ್ 2025 ರಲ್ಲಿ ಆರ್‌ಸಿಬಿ ತಂಡಕ್ಕೆ ತಾತ್ಕಾಲಿಕ ಬದಲಿ ಆಟಗಾರನಾಗಿ ಎಂಟ್ರಿ ಕೊಟ್ಟಿದ್ದ ಬ್ಲೆಸ್ಸಿಂಗ್ ಮುಝುರಬಾನಿ ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದರು. 6 ಪಂದ್ಯಗಳಲ್ಲಿ ಮಾರಕ ದಾಳಿ ಸಂಘಟಿಸಿದ್ದ ಬ್ಲೆಸ್ಸಿಂಗ್ ಮುಝುರಬಾನಿ ಒಟ್ಟು 13 ವಿಕೆಟ್ ಕಬಳಿಸಿದ್ದರು. ಹೀಗಾಗಿ ಮುಸ್ತಫಿಝುರ್ ರೆಹಮಾನ್ ಬದಲಿಯಾಗಿ ಬ್ಲೆಸ್ಸಿಂಗ್ ಮುಝುರಬಾನಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

# ಸಂಜು ಫೋಟೋ ಎಡಿಟ್ ಮಾಡಿ ಹಂಚಿಕೊಂಡ್ರಾ ಗಿಲ್

ಟಿ20 ವಿಶ್ವಕಪ್‌ನ ಫೈನಲ್ ಪಂದ್ಯದಲ್ಲಿ ಭಾರತ ತಂಡವು ನ್ಯೂಝಿಲೆಂಡ್ ತಂಡವನ್ನು ಸೋಲಿಸಿ ಚಾಂಪಿಯನ್ ಪಟ್ಟ ಅಲಂಕರಿಸಿತು. ಈ ಪಂದ್ಯದ ಬಳಿಕ ನಡೆದ ಸಂಭ್ರಮಾಚರಣೆಯ ಫೋಟೋವನ್ನು ಶುಭ್‌ಮನ್ ಗಿಲ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದರು. ಆದರೆ ಈ ಫೋಟೋದಲ್ಲಿ ಸಂಜು ಸ್ಯಾಮ್ಸನ್ ಇರಲಿಲ್ಲ. ಟಿ20 ವಿಶ್ವಕಪ್ ಗೆದ್ದ ಬಳಿಕ ಟೀಮ್ ಇಂಡಿಯಾವನ್ನು ಅಭಿನಂದಿಸಿ ಶುಭ್‌ಮನ್ ಗಿಲ್ ಸೋಷಿಯಲ್ ಮೀಡಿಯಾದಲ್ಲಿ ಫೋಟೋವೊಂದನ್ನು ಹಂಚಿಕೊಂಡಿದ್ದರು. ಈ ಫೋಟೋದಲ್ಲಿ ಭಾರತ ತಂಡದ ಗೆಲುವಿನ ರೂವಾರಿ ಸಂಜು ಸ್ಯಾಮ್ಸನ್ ಇರಲಿಲ್ಲ. ಇದರ ಬೆನ್ನಲ್ಲೇ ಶುಭ್‌ಮನ್ ಗಿಲ್ ಸಂಜು ಸ್ಯಾಮ್ಸನ್ ಅವರನ್ನು ಫೋಟೋದಿಂದ ಎಡಿಟ್ ಮಾಡಿ ತೆಗೆದುಹಾಕಿದ್ದಾರೆ ಎಂದು ಅಭಿಮಾನಿಗಳು ಆರೋಪಿಸಿದ್ದರು. ಇದಕ್ಕೆ ಸಾಕ್ಷಿಯಾಗಿ ಮತ್ತೊಂದು ಫೋಟೋವನ್ನು ಹಂಚಿಕೊಂಡಿದ್ದರು.



ಈ ಫೋಟೋದಲ್ಲಿ ಸಂಜು ಸ್ಯಾಮ್ಸನ್ ಜಸ್‌ಪ್ರೀತ್ ಬುಮ್ರಾ ಅವರ ಹಿಂಬದಿಯಲ್ಲಿ ನಿಂತಿರುವುದು ಕಾಣುತ್ತಿತ್ತು.

ಹೀಗಾಗಿಯೇ ಶುಭ್‌ಮನ್ ಗಿಲ್ ಉದ್ದೇಶಪೂರ್ವಕವಾಗಿಯೇ ಸಂಜು ಸ್ಯಾಮ್ಸನ್ ಅವರ ಫೋಟೋವನ್ನು ಎಡಿಟ್ ಮಾಡಿ ಹಂಚಿಕೊಂಡಿದ್ದಾರೆ ಆರೋಪಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ. ಈ ಬಗ್ಗೆ ಫ್ಯಾಕ್ಟ್-ಚೆಕ್ ಮಾಡಿದಾಗ ಗಿಲ್ ಹಂಚಿಕೊಂಡದ್ದು ಮತ್ತು ಅಭಿಮಾನಿಗಳು ಹೋಲಿಸುತ್ತಿದ್ದದ್ದು ಎರಡು ಬೇರೆ ಬೇರೆ ಫೋಟೋಗಳು. ಇವುಗಳನ್ನು ಕೆಲವು ಸೆಕೆಂಡುಗಳ ಅಂತರದಲ್ಲಿ ತೆಗೆಯಲಾಗಿದೆ. ಅಂದರೆ ಶುಭ್‌ಮನ್ ಗಿಲ್ ಹಂಚಿಕೊಂಡ ಫೋಟೋದಲ್ಲಿ ಸ್ಯಾಮ್ಸನ್ ಕಾಣಿಸುತ್ತಿಲ್ಲ ಎಂಬುದೇ ನಿಜ. ಇದೇ ಫೋಟೋವನ್ನು ಬಿಸಿಸಿಐ ಕೂಡ ಹಂಚಿಕೊಂಡಿದೆ. ಅಷ್ಟೇ ಅಲ್ಲದೆ ಶುಭ್‌ಮನ್ ಗಿಲ್ ಹಂಚಿಕೊಂಡ ಅದೇ ಫೋಟೋವನ್ನು ಯಶಸ್ವಿ ಜೈಸ್ವಾಲ್ ಮತ್ತು ಶಿವಂ ದುಬೆ ಕೂಡ ತಮ್ಮ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಆ ನಿರ್ದಿಷ್ಟ ಫ್ರೇಮ್‌ನಲ್ಲಿ ಸ್ಯಾಮ್ಸನ್ ಅವರ ಸ್ಥಾನವು ಕ್ಯಾಮೆರಾಕ್ಕೆ ಸರಿಯಾಗಿ ಕಾಣಿಸುತ್ತಿರಲಿಲ್ಲ ಅಷ್ಟೇ. ಇದಾಗ್ಯೂ, ಶುಭ್‌ಮನ್ ಗಿಲ್ ವಿರುದ್ಧ ಇಂತಹದೊಂದು ಆರೋಪ ಮೂಡಿಬರಲು ಮುಖ್ಯ ಕಾರಣ, ಇಬ್ಬರ ನಡುವಣ ಪೈಪೋಟಿ. ಅಂದರೆ ಟೀಮ್ ಇಂಡಿಯಾದ ಆರಂಭಿಕನ ಸ್ಥಾನಕ್ಕಾಗಿ ಶುಭ್‌ಮನ್ ಗಿಲ್ ಹಾಗೂ ಸಂಜು ಸ್ಯಾಮ್ಸನ್ ನಡುವೆ ಪೈಪೋಟಿಯಿದ್ದು, ಹೀಗಾಗಿ ಈ ಫೋಟೋ ಹಂಚಿಕೆ ಸೋಷಿಯಲ್ ಮೀಡಿಯಾದಲ್ಲಿ ಭಾರೀ ಚರ್ಚೆಯಾಗಿದೆ.



# ಪಾಕ್ ಆಟಗಾರನಿಗೆ ಗೇಟ್ ಪಾಸ್

ಮಾರ್ಚ್ 12, 2026 ರಂದು ನಡೆದ ಹರಾಜಿನಲ್ಲಿ ಅಬ್ರಾರ್ ಅಹ್ಮದ್ ಅವರನ್ನು ಎಸ್‌ಆರ್‌ಹೆಚ್ ಮಾಲೀಕತ್ವದ ಸನ್ ರೈಸರ್ಸ್ ಲೀಡ್ಸ್ ಫ್ರಾಂಚೈಸಿಯು ಬರೋಬ್ಬರಿ ೧1,90,000 (ಸುಮಾರು 2.34 ಕೋಟಿ) ಮೊತ್ತಕ್ಕೆ ಖರೀದಿಸಿದೆ. ಇತ್ತ ಭಾರತೀಯ ವಿರೋಧಿ ಮನಸ್ಥಿತಿ ಹೊಂದಿರುವ ಪಾಕ್ ಆಟಗಾರನನ್ನು ಖರೀದಿಸಿರುವುದಕ್ಕೆ ಅಭಿಮಾನಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲದೆ ಈ ಆಕ್ರೋಶದೊಂದಿಗೆ ಸನ್‌ರೈಸರ್ಸ್ ಲೀಡ್ಸ್‌ನ 'ಫ಼' (ಟ್ವಿಟರ್) ಖಾತೆಯನ್ನು ರಿಪೋರ್ಟ್ ಮಾಡಿದ್ದ ಪರಿಣಾಮ ಎಸ್‌ಆರ್‌ಎಲ್ ತಂಡದ ಸೋಷಿಯಲ್ ಮೀಡಿಯಾ ಖಾತೆಯು ತಾತ್ಕಾಲಿಕ ಸ್ಥಗಿತವಾಗಿತ್ತು. ಇದೀಗ ಭಾರತ ಸೇರಿದಂತೆ ಎಲ್ಲೆಡೆಯಿಂದ ಎಸ್‌ಆರ್‌ಹೆಚ್ ಅಭಿಮಾನಿಗಳ ಒತ್ತಡ ಹೆಚ್ಚಾಗುತ್ತಿರುವುದರಿಂದ ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿಯು ಪಾಕ್ ಆಟಗಾರನನ್ನು ಕೈ ಬಿಡುವ ಬಗ್ಗೆ ಚಿಂತಿಸಿದ್ದಾರೆ ಎಂದು ವರದಿಯಾಗಿದೆ. ಆದರೆ ಅದಕ್ಕೂ ಮುನ್ನ ಒಂದಷ್ಟು ನಿಯಮಗಳನ್ನು ಪಾಲಿಸಬೇಕಾದ ಅನಿವಾರ್ಯತೆ ಎಸ್‌ಆರ್‌ಹೆಚ್ ಫ್ರಾಂಚೈಸಿ ಮುಂದಿದೆ.

**ಭಾರತೀಯ ಅಭಿಮಾನಿಗಳ ಆಕ್ರೋಶ:** ಸನ್‌ರೈಸರ್ಸ್ ಹೈದರಾಬಾದ್ ಭಾರತೀಯ ಮೂಲದ ಫ್ರಾಂಚೈಸಿ. ಅಬ್ರಾರ್ ಅವರ ಹಳೆಯ ವಿವಾದಾತ್ಮಕ ಪೋಸ್ಟ್‌ಗಳಿಂದಾಗಿ ಭಾರತೀಯ ಅಭಿಮಾನಿಗಳು ತಂಡವನ್ನು ಬಹಿಷ್ಕರಿಸುವಂತೆ ಒತ್ತಾಯಿಸುತ್ತಿದ್ದಾರೆ. ಇದು ಫ್ರಾಂಚೈಸಿಯ ಬ್ರ್ಯಾಂಡ್ ಮೌಲ್ಯದ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಅಭಿಮಾನಿಗಳ ಆಕ್ರೋಶ ಹೆಚ್ಚಾದರೆ, ತಂಡಕ್ಕೆ ಬೆಂಬಲ ನೀಡುವ ಕಂಪನಿಗಳು ತಮ್ಮ ಹೆಸರಿಗೆ ಧಕ್ಕೆ ಬರುತ್ತದೆ ಎಂದು ಒಪ್ಪಂದದಿಂದ ಹಿಂದೆ ಸರಿಯಬಹುದು. ಅಂತಹ ಸಂದರ್ಭದಲ್ಲಿ ಮಾಲೀಕರು ಅನಿವಾರ್ಯವಾಗಿ ಅಬ್ರಾರ್ ಅವರನ್ನು ಕೈಬಿಡಬೇಕಾಗುತ್ತದೆ.

ಅಬ್ರಾರ್ ಅಹ್ಮದ್ ಅವರನ್ನು ಹರಾಜಿನಲ್ಲಿ ೧190,000 (ಸುಮಾರು 2.34 ಕೋಟಿ) ನೀಡಿ ಅಧಿಕೃತವಾಗಿ ಖರೀದಿಸಲಾಗಿದೆ. ಯಾವುದೇ ಬಲವಾದ ಶಿಸ್ತುಕ್ರಮದ ಕಾರಣವಿಲ್ಲದೆ ಅವರನ್ನು ಕೈಬಿಟ್ಟರೆ, ಫ್ರಾಂಚೈಸಿ ಅವರಿಗೆ ಪೂರ್ಣ ಹಣವನ್ನು ನೀಡಬೇಕಾಗುತ್ತದೆ. 'ದಿ ಹಂಡ್ರೆಡ್' ಟೂರ್ನಿಯು ಇಂಗ್ಲೆಂಡ್ ಕ್ರಿಕೆಟ್ ಮಂಡಳಿಯ ನಿಯಮದಡಿ ನಡೆಯುತ್ತದೆ. ಕೇವಲ ಸೋಶಿಯಲ್ ಮೀಡಿಯಾ ಆಕ್ರೋಶದ ಕಾರಣಕ್ಕೆ ಆಟಗಾರನನ್ನು ತೆಗೆದುಹಾಕಲು ಇಸಿಬಿ ಅನುಮತಿ ನೀಡುತ್ತದೆಯೇ ಎಂಬುದು ಮುಖ್ಯ. ಸದ್ಯದ ಪರಿಸ್ಥಿತಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿ ಮಾಲೀಕರಾದ ಕಾವ್ಯ ಮಾರನ್ ಮೌನವಾಗಿದ್ದಾರೆ. ಅಲ್ಲದೆ ಫ್ರಾಂಚೈಸಿ ಅಧಿಕಾರಿಗಳು ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದಾರೆ. ಇನ್ನು ಈ ಬಗ್ಗೆ ಸನ್‌ರೈಸರ್ಸ್ ಫ್ರಾಂಚೈಸಿ ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಜೊತೆ ಕೂಡ ಚರ್ಚಿಸಲಿದ್ದಾರೆ ಎಂದು ವರದಿಯಾಗಿದೆ. ಒಂದು ವೇಳೆ ಐಪಿಎಲ್ ಆರಂಭಕ್ಕೂ ಮುನ್ನ 'ಸನ್‌ರೈಸರ್ಸ್' ಫ್ರಾಂಚೈಸಿ ಮೇಲೆ ಪ್ರಾಯೋಜಕರ ಒತ್ತಡ ಹೆಚ್ಚಾದರೆ ''ವೈಯಕ್ತಿಕ ಕಾರಣ'' ಅಥವಾ ''ಗಾಯದ ಸಮಸ್ಯೆ'' ಎಂಬ ಕಾರಣ ನೀಡಿ ಅಬ್ರಾರ್ ಅಹ್ಮದ್ ಅವರನ್ನು ದಿ ಹಂಡ್ರೆಡ್ ಟೂರ್ನಿಯಿಂದ ಕೈಬಿಡಲು ಚಿಂತಿಸಲಾಗಿದೆ. ಹೀಗಾಗಿ ದಿ ಹಂಡ್ರೆಡ್ ಟೂರ್ನಿ ಆರಂಭಕ್ಕೂ ಮುನ್ನವೇ ಸನ್‌ರೈಸರ್ಸ್ ಲೀಡ್ಸ್ ತಂಡದಿಂದ ಪಾಕ್ ಆಟಗಾರನಿಗೆ ಗೇಟ್ ಪಾಸ್ ಸಿಗುವ ಸಾಧ್ಯತೆ ಹೆಚ್ಚಿದೆ.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**